

ಭಾವಸಂಧಿ

ರಾಮಲಿಂಗಯ್ಯ.

ಪೂರ್ಣಿಮಾ ಗ್ರಂಥಮಾಲೆ,
ಕಲಾವಿಹಾರ, ಅಳಿಕೆ ದ. ಕನ್ನಡ.

1951

ಹದಿನಾಲ್ಕಾಣೆ.

ಮುದ್ರಕರು:
ಉದಯ ಪ್ರಿಂಟರ್ಸ ಎಂಡ್ ಪಬ್ಲಿಕೇಶನ್ಸ್ ಲಿಮಿಟೆಡ್, ಮಂಗಳೂರು

ಮುಂದಿನ ಪುಸ್ತಕ:

ಹಳೆಯ ಹೂ

"ಗೋಪಬಾಲ"ರ ಕಥಾ ಸಂಕಲನ

ರಾಮಲಿಂಗಯ್ಯನವರ ಇನ್ನೊಂದು ಕೃತಿ:—

ಪ್ರತಿಜ್ಞೆ

ಮೊದಲ ಮಾತು

ಕನ್ನಡ ಮುದಿತಾಯಿಗೆ ತೊಡಿಸಿದ ತೊಡವುಗಳ ಲೆಕ್ಕ ಹೆಚ್ಚಿದೆ. ಅವುಗಳೊಂದಿಗೆ ಈ ಪೂರ್ಣಿಮಾ ಗ್ರಂಥಮಾಲೆಯೂ ಸೇರಲಿ ಎಂದು ನಾವು ಹಾರೈಸಿದರೆ ಹೆಚ್ಚಲ್ಲ.

ಈ ಗ್ರಂಥಮಾಲೆಯ ವೈಶಿಷ್ಟ್ಯವೆಂದು ಎತ್ತಿ ಹೇಳುವ ವಿಷಯ ವಾವುದೂ ಇಲ್ಲ. ಬರಿಯ ಕನ್ನಡದ ಸೇವೆಯೇ ಇದರ ಗುರಿ. ಆದರೆ ಬರೆಹಗಾರರ ಸಂಖ್ಯೆ ಹೆಚ್ಚುತ್ತಿರುವಾಗ, ಅವರಿಗೂ ಸದವಕಾಶವನ್ನು ಕಲ್ಪಿಸಿದರೆ ಒಳ್ಳೆಯದೆಂದು ಇದನ್ನು ಪ್ರಾರಂಭಿಸಲಾಗಿದೆ. ಅದಷ್ಟು ಮಟ್ಟಿಗೆ ಕನ್ನಡ ಸಾಹಿತ್ಯದ ವಿವಿಧಕ್ಷೇತ್ರಗಳಲ್ಲಿ ವಿಹರಿಸುವವರ ವಿವಿಧ ಕೃತಿಗಳನ್ನು ಈ ಮೂಲಕ ಪ್ರಕಟಿಸಿ, ಸಾಹಿತ್ಯಸೇವೆಯಲ್ಲಿ ಭಾಗವಹಿಸುವುದು ಸೂಕ್ತವೆಂಬೆಣಿಕೆಯೇ ಇದಕ್ಕೆ ತಳಹದಿಯಾಗಿದೆ. ಆದುದರಿಂದ ಸಾಹಿತ್ಯಜ್ಞರು ಇದರಲ್ಲಿ ತಮ್ಮ ಸ್ವರ್ಣಪುಷ್ಪಗಳನ್ನು ಸೇರಿಸಬೇಕು; ಸೇರಿಸಿಯಾರು ಎಂಬ ಹಾರೈಕೆಯಿದೆ.

ಪ್ರಕೃತ, ಈ ಭಾವಸಂಧಿಯ ವಿಷಯವಾಗಿ ಎರಡು ಮಾತು ಹೇಳದೆ ನಿರ್ವಾಹವಿಲ್ಲ. ಇದರಲ್ಲಿ ಬರುವ ಮೂರು ಕತೆಗಳೂ ಸ್ವತಂತ್ರ ಕೃತಿಗಳು. ಇವುಗಳಲ್ಲಿ ಕೊನೆಯದೊಂದು ಮಾತ್ರ ಈ ಮೊದಲೇ "ರಾಷ್ಟ್ರಬಂಧು" ಪತ್ರಿಕೆಯಲ್ಲಿ ಬೆಳಕು ಕಂಡಿತ್ತು. ಆ ಪತ್ರಿಕೆಯ ಅಧಿಕಾರಿಗಳಿಗೆ ಈ ಮೂಲಕ ಕೃತಜ್ಞತೆ ಸಲ್ಲಲೇ ಬೇಕು. ಈ ಕತೆಗಳ ಯೋಗ್ಯತೆಯನ್ನು ತೂಗಿ ಹೇಳುವ ಅಧಿಕಾರವೆಲ್ಲವೂ ಸಹೃದಯರಾದ ವಾಚಕರ ಪಾಲಿನದು. ಅಂಥವರ ಪ್ರೋತ್ಸಾಹದ ಜಲಸೇಚನವು ನಮಗೆ ಅವಶ್ಯವಾಗಿ ಬೇಕು.

ಇದರ ರಕ್ಷಾಪತ್ರದ ಚಿತ್ರವನ್ನು ಬರೆದುಕೊಟ್ಟವರು ಶ್ರೀ. ಶ್ರೀನಿವಾಸ ಮಧ್ಯಸ್ಥರೆಂಬ ತರುಣರು. ನಮ್ಮ ಕೃತಜ್ಞತೆಗಳನ್ನು ಅವರಿಗೆ ಸಲ್ಲಿಸುತ್ತೇವೆ.

ಈ ಪುಸ್ತಕವನ್ನು ಅಚ್ಚು ಹಾಕಿಕೊಟ್ಟ ಉದಯ ಪ್ರಿಂಟರ್ಸ್ ಎಂಡ್ ಪಬ್ಲಿಕೇಶನ್ಸ್ ಲಿಮಿಟೆಡ್ ಇದರ ಅಧಿಕಾರಿಗಳಿಗೆ ನಮ್ಮ ವಂದನೆಗಳು.

ಮಂಗಳೂರು,
ತಾ. 1—4—51.

ತೆಕ್ಕುಂಜ ಗೋಪಾಲಕೃಷ್ಣ ಭಟ್ಟ,
ಸಂಪಾದಕ.

೧

ದೀರ್ಘದಿನದಲ್ಲೇ ಶಂಕರರಾಯರು 60 ವರ್ಷದ ಮುದುಕನಂತಾದರು. ದೇಹ ಕಂದಿತು; ಮುಖ ಬಾಡಿತು; ಮನಸ್ಸು ದುರ್ಬಲವಾಯಿತು. ಈಗ ಅವರನ್ನು ನೋಡಿದರೆ 30 ವರ್ಷದ ಶಂಕರರಾಯರೆಂದು ತೋರುವುದಿಲ್ಲ. ಸಂಸಾರರಥದಲ್ಲಿ ಅವರೀಗ ಏಕಾಂಗಿ. ಬಹಳ ಕಾಲದಿಂದ ಇವರ ಜೊತೆಗಾರ್ತಿಯಾಗಿದ್ದ ರಮಾದೇವಿಯು ನಿನ್ನೆ ಮಧ್ಯರಾತ್ರಿಯಿಂದ ಇಲ್ಲ. ಆದರೂ ಈ ವರೆಗೆ ಶೋಕವನ್ನು ತಡೆದಿದ್ದರು. ಈಗ, ಅವಳ ದೇಹವನ್ನು ನಾಲ್ವರು ನಿರ್ದಯರು ಹೊತ್ತುಕೊಂಡು ಹೋದ ಮೇಲೆ, ಅವರಿಗಾದ ದುಃಖವು ಅಷ್ಟಿಷ್ಟಲ್ಲ. ತನ್ನ ಮಲಗುಮನೆಗೆ ಹೋಗಿ ಅತ್ತರು; ಬಿಕ್ಕಿಬಿಕ್ಕಿ ಅತ್ತರು. ಏನು ಮಾಡಿದರೂ ಪ್ರಯೋಜನವಿಲ್ಲ; ಕಡೆಗೆ ಒಂದು ಕಿಟಿಕಿಯೆದುರಿನ ಕುರ್ಚಿಯಲ್ಲಿ, ಮುಂಗೈಯನ್ನು ಮೇಜಿನ ಮೇಲೂರಿ, ಅದರ ಆಧಾರದಲ್ಲಿ ತಲೆಯನ್ನಿಟ್ಟು ಕುಳಿತುಕೊಂಡರು. ಏನೆಲ್ಲಾ ಆಲೋಚನೆಗಳು ಮನಸ್ಸನ್ನು ಮುಸುಕುತ್ತಿದ್ದುವು. ನಿನ್ನೆಯ ವರೆಗೆ ಅವರು ಈ ರೀತಿ ಆಗುವುದೆಂದು ಎಣಿಸಿದ್ದರೇ? ಅಯ್ಯೋ ವಿಧಿಯೆ! ನೀನು ಈ ಸನ್ನಿಪಾತದ ರೂಪಿನಲ್ಲಿ ಬಂದು ನನ್ನ ಈ ಪ್ರೇಮಪೂಜಾ ಮೂರ್ತಿಯನ್ನು ಒಯ್ಯಬೇಕೆ? ಈಗಿನ ಡಾಕ್ಟರರು ಏನೇನನ್ನೆಲ್ಲ ಕಂಡು ಹಿಡಿದಿರುವರು! ಒಂದು ಅಂಗವು ಹಾಳಾದರೆ ಅದನ್ನು ಕತ್ತರಿಸಿ ಕೃತಕ ಅಂಗವನ್ನು ಜೋಡಿಸಿ ಮೊದಲಿನಂತೆ ಸರಿಮಾಡುವರು. ಆದರೆ ಈ ಸನ್ನಿಪಾತದಿಂದ ನನ್ನ ರಮೆಯನ್ನು ಉಳಿಸುವ ಉಪಾಯವು ನಿಮಗೆ ಅರಿಯದಾಯಿತಲ್ಲಾ! ಧಿಕ್ಕಾರ ನಿಮ್ಮ ವೈದ್ಯಶಾಸ್ತ್ರಕ್ಕೆ!..........ನಿನ್ನೆ ರಮೆಯು ತನ್ನ ಅಂತ್ಯಕಾಲದಲ್ಲಿ ನನ್ನೊಡನೆ ಏನೋ ಮಾತಾಡಬೇಕೆಂದು ಪ್ರಯತ್ನಿಸಿದಳಲ್ಲ. ಅದೇನಾಗಿರಬಹುದು? ಆ ದೃಶ್ಯವು ಪುನಃ ಅವರ ಕಣ್ಣಿದಿರು ಕಂಡಿತು. ರಮೆಯು ಮಾತಾಡಬೇಕೆಂದು ಬಾಯ್ತೆರೆಯುತ್ತಿದ್ದಾಳೆ. ಆದರೆ ಮಾತು ಹೊರಡುವುದಿಲ್ಲ. ನಿಸ್ತೇಜವಾದ ಕಣ್ಣುಗಳನ್ನು ಒಮ್ಮೆ ಶಂಕರರಾಯರೆಡೆಗೆ ಹಾಯಿಸುವಳು. ಮತ್ತೊಮ್ಮೆ

*

ಯಾವ ಚಿಂತೆಯೂ ಇಲ್ಲದೆ, ನಾಳೆ ಸುಂದರವಾದ ಬೆಳಗಿನಲ್ಲಿ ಎದ್ದು ತಾಯಿಯ ಮೊಲೆಯನ್ನು ಕುಡಿದೇನು ಎಂದು ಸುಖಸ್ವಪ್ನವನ್ನು ಕಾಣುತ್ತ ಮಲಗಿದ್ದ ಮೂರು ವರ್ಷದ ಮಗು ಭರತನ ಕಡೆಗೆ ದೃಷ್ಟಿಹಾಯಿಸು ತ್ತಿದ್ದಾಳೆ. ಕಣ್ಣುಗಳಿಂದ ನೀರು ಧಾರೆಯಾಗಿ ಸುರಿಯುತ್ತಿದೆ. ಈ ಮಗು ಮತ್ತು ಈ ಪತಿಯನ್ನು ಕಾಲನು ತನ್ನಿಂದ ಅಗಲಿಸುವನೆಂಬ ದುಃಖ ವಾಗಿರಬಹುದು. ಕಡೆಗೆ ದೀರ್ಘಶ್ವಾಸಕ್ಕೆ ಸುರುವಾಯಿತು. ಆ ಸಂಕಟವನ್ನು ಶಂಕರರಾಯರಿಂದ ನೋಡಲಾಗಲಿಲ್ಲ. ಕೊನೆಗೆ ಅವಳ ಪ್ರಾಣವೂ ಹೊರಟು ಹೋಯಿತು.

ಶಂಕರರಾಯರು ಕಿಟಿಕಿಯಿಂದ ಹೊರಗೆ ನೋಡಿದರು. ದೂರ ದಲ್ಲಿ ಕಾಣುವ ಗುಡ್ಡದ ಕಾಲುದಾರಿಯಲ್ಲಿ ಆ ನಾಲ್ವರು ರಮೆಯ ಕಳೇ ಬರವನ್ನು ಹೊತ್ತೊಯ್ಯುತ್ತಿದ್ದರು. ಕಡೆಗೆ ಅಲ್ಲೇ ತಯಾರಿಸಿಟ್ಟಿದ್ದ ಚಿತೆಯ ಮೇಲಿಟ್ಟು, ಬೆಂಕಿ ಹಚ್ಚಿದರು. ಅಗ್ನಿದೇವನು ಕರಾಳವಾದ ನಾಲಗೆಯನ್ನು ನೀಡಿ, ಹೊಗೆಯನ್ನುಗುಳುತ್ತಾ ದೇಹವನ್ನು ನುಂಗಿಬಿಟ್ಟನು. ಅಲ್ಲಿ ಭೂತಗಳು ಕುಣಿಯುವಂತೆ ಕಂಡುಬಂದಿತು. ಅವಕ್ಕೆ ತನ್ನ ಸುಮಕೋ ಮಲೆಯ ದೇಹವನ್ನು ನುಂಗುವುದರಲ್ಲಿ ಏನು ಸಂತೋಷ! ಪ್ರಾಣಭಯ ದಿಂದ ಮುದ್ದೆಯಾಗಿ ಬಿದ್ದಿದ್ದ ಕುರಿಯನ್ನು ನರ್ತಿಸುತ್ತಾ, ಗಹಗಹಿಸಿ ನಗುತ್ತಾ, ಕಡಿಯಲು ಬರುವ ಪಾತ್ರಿಯಂತೆ ಆ ನೋಟವು ತೋರುತ್ತಿತ್ತು. ರಮೆಯು ವಾಯುಮಾರ್ಗವಾಗಿ ಹೊಗೆಯ ರೂಪದಲ್ಲಿ ತನ್ನೆಡೆಗೇ ಬರು ವಂತೆ ಭಾಸವಾಗುತ್ತಿತ್ತು. "ಅಯ್ಯೋ ನಾನಿಲ್ಲಿ ಸುಡುತ್ತಿದ್ದೇನೆ. ಸಹಿಸ ಲಾರೆ. ನಿಮ್ಮನ್ನೂ, ನನ್ನ ಭರತನನ್ನೂ ಅಗಲಿಸುತ್ತಿದ್ದಾರೆ. ನನ್ನನ್ನು ಬಿಡಬೇಡಿರಿ" ಎಂಬ ಅವಳ ಆರ್ತನಾದವೂ ಕೇಳಿಸಿತು. ಧೂಮರಾಶಿಯು ಓಡೋಡಿ ಮನೆಯ ಸಮೀಪಕ್ಕೆ ಬರುತ್ತಿದೆ. ಆದರೆ ಪ್ರತಿಕೂಲವಾಯು ವೊಂದು ಬೀಸಿ, ಧೂಮರಾಶಿಯು ಸ್ವರ್ಗಕ್ಕೇರತೊಡಗಿತು... .."ಅಯ್ಯೋ ನನಗೆ ನಿಮ್ಮ ಬಳಿಗೆ ಬರಲಾಗುವುದಿಲ್ಲ. ನನ್ನನ್ನು ಮೇಲಕ್ಕೆಳೆಯುತ್ತಿ ತ್ತಿದ್ದಾರೆ. ನಾವಿನ್ನು ಅಲ್ಲಿ ಬೆರೆಯೋಣ. ನಮ್ಮ ಭರತನಿಗೆ ನನ್ನ ನೆನಪಾಗದಂತೆ ನೋಡಿಕೊಳ್ಳಿರಿ" ಎಂದವಳು ಹೇಳುತ್ತಿದ್ದಾಳೆ. ಆ ದೃಶ್ಯ ವನ್ನವರಿಗೆ ನೋಡುವುದಕ್ಕಾಗಲಿಲ್ಲ. ತಿರುಗಿ ಕುಳಿತರು. ಆದರೆ ಆ

ತನ್ನ ಮಲಗುಮನೆಯು ರಮೆಯ ನೆನಪನ್ನುಂಟುಮಾಡುತ್ತಿತ್ತು. ಹಾಲಿನ ನೊರೆಯಂತೆ ಬಿಳಿಹಾಸುಗೆಯನ್ನು ಹೊತ್ತ ಕರಿಮರದ ಪಲ್ಲಂಗ; ಸುತ್ತಲೂ ಮಣಿಗಳ ಜಾಲರಿಯು ನೇತಾಡುತ್ತಿದೆ. ಮುಂಜಾವಿನ ತಂಗಾಳಿಯಷ್ಟು ತೆಳ್ಳಗಿನ ಗುಲಾಬಿಬಣ್ಣದ ತೆರೆಯು ಮಂಚದ ಸುತ್ತಲೂ ಗಾಳಿಗೆ ತೊನೆಯುತ್ತಿತ್ತು......"ಇನ್ನಿದೆಲ್ಲಾ ಶೃಂಗಾರಸಾಧನಗಳೇಕೆ? ರಮೆಯೊಡನೆ ನಾನಿದರಲ್ಲಿ ವಿಶ್ರಮಿಸುವುದು ಇನ್ನೀ ಜನ್ಮಕ್ಕೆ ಆಯಿತು" ಎಂದು ಹಾಸುಗೆಯನ್ನು ಒಯ್ದು ಬಿಸಾಡಿದರು. ತೆರೆಯನ್ನು ಗರ್ರನೆಳೆದು ಚೆಲ್ಲಿದರು. ಮಣಿಯ ಮಾಲೆಯು ಬೇಡಬೇಡವೆಂದು ಸದ್ದುಮಾಡಿದರೂ ಕೇಳದೆ ಹರಿದು ಹಾಕಿದರು. ಈ ಮಂಚವು ರಮೆಯಿಲ್ಲದಿರುವ ಶಂಕರರಾಯರಂತೆಯೇ ಕಂಡಿತು. ವೈರಾಗ್ಯವು ಶಂಕರರಾಯರನ್ನು ಸೋಲಿಸಿತು. ಗೋಡೆಯಲ್ಲಿ ತೂಗಾಡಿಸಿದ್ದ ಸೀತಾರಾಮ, ರಾಧಾಕೃಷ್ಣ, ಲಕ್ಷ್ಮೀನಾರಾಯಣರ ಚಿತ್ರಗಳು ಈಗ ನಿಸ್ತೇಜವಾಗಿ ಕಂಡು, ಕಡೆಗೆ ಮಾಯವಾದಂತೆ ತೋರಿ, ಅವುಗಳ ಸ್ಥಾನದಲ್ಲಿ ಮಹಾತ್ಮಾ ಗಾಂಧಿ, ಗೌತಮ ಬುದ್ಧ, ವಿವೇಕಾನಂದರ ಚಿತ್ರಗಳು ಕಂಡುವು. "ಯಾಕೆ ಇನ್ನೂ ಚಿಂತಿಸುವೆ? ರಮೆಯು ಪಾವನೆಯಾದಳು. ಆದುದು ಒಳ್ಳೆಯದೇ ಆಯಿತು. ಇನ್ನು ಸಂಸಾರದ ಮಾಯಾಜಾಲಕ್ಕೆ ಸಿಲುಕಬೇಡ. ನಮ್ಮಂತೆಯೇ ಸೇವಾಕಾರ್ಯದಲ್ಲಿ ನಿರತನಾಗು" ಎಂದು ಬೋಧಿಸಿದುವು. "ಹೌದು" ಎಂದು ಶಂಕರರಾಯರ ಮನಸ್ಸೂ ಉತ್ತರವಿತ್ತಿತ್ತು. "ಭಾವಿಸಿದರೆ ಈ ಸಂಸಾರವೆಂಬುದೇ ಬಹು ಕಷ್ಟ. ಈಗಾದುದು ಹಿತವೇ ಆಯಿತು" ಎಂದೂ ತೋರಿತು. ಕಾವಿಯುಟ್ಟು ತನ್ನಿಂದಾದಷ್ಟು ಪರರ, ದುಃಖ ಪೀಡಿತರ, ಅನಾಥರ ಸೇವೆಯನ್ನು ಮಾಡುವುದೊಳ್ಳೆಯದು ಎಂದು ಎಣಿಸಿದರು. ತಾನು ಸನ್ಯಾಸಿಯಾದರೆ ಇಷ್ಟು ವಿಸ್ತಾರವಾದ ಮನೆ ತನಗೇಕೆ? ಇದನ್ನು ಸಾರ್ವಜನಿಕ ಸಂಸ್ಥೆಗೆ ಒಪ್ಪಿಸಿ ಬಿಡುವುದೇ ಸರಿ ಎಂದು ಆಲೋಚಿಸಿದರು. ಅಷ್ಟರಲ್ಲಿ ಗೋಡೆಯಲ್ಲಿ ತೂಗಾಡಿಸಿದ ಭರತನ ಚಿತ್ರವು ದೃಗ್ಗೋಚರವಾಯಿತು. ಅದನ್ನು ಕಂಡುದೇ ತಡ, ಅವರ ವೈರಾಗ್ಯವು ಮಂಜಿನಂತೆ ಕರಗಿತು. ತಾನು ಸನ್ಯಾಸಿಯಾಗಿ ಊರೂರು ಅಲೆದರೆ ಈ ಹಸುಗೂಸಿಗೆ ದಿಕ್ಕಾರು; ನೋಡುವವರಾರು?

ತಾಯಿಯಿಲ್ಲದ ದುಃಖದಲ್ಲಿರುವ ಮಗುವನ್ನು ತೊರೆದು ನಾನು ಹೋಗ ಬೇಕೆ?......ಈಗ ಬೇಡ; ಅವನು ದೊಡ್ಡವನಾದ ಮೇಲೆ ಆ ವಿಚಾರ. ಅಷ್ಟರ ವರೆಗೆ ನನ್ನ ಹಸುಳೆಯನ್ನು, ರಮೆಯ ಪ್ರೇಮದ ಕಾಣಿಕೆಯನ್ನು ಒಂದು ಕ್ಷಣವೂ ಅಗಲಬಾರದು. ಅವನಿಗೆ ಯಾವ ಕಷ್ಟವೂ ಆಗದಂತೆ ನೋಡುವುದೇ ತನ್ನ ಕರ್ತವ್ಯ ಎಂದು ತೋರಿತು.....ಅದೆಲ್ಲಾ ಸರಿ. ಆದರೆ ಅವನನ್ನು ತಾಯಿಯಿಲ್ಲದ ದುಃಖದಿಂದ ಸಂತೈಸುವುದೆಂತು?...... ಅವನಿಗಾಗಬಹುದಾದ ಶೋಕದ ಪರಿಣಾಮವನ್ನೆಣಿಸುತ್ತಾ ರಾಯರ ಕಣ್ಣಲ್ಲಿ ನೀರು ಒಸರತೊಡಗಿತು. ಮನುಷ್ಯನಿಗೆ ಯಾವ ವ್ಯಸನವೂ ಬರಬಹುದು; ಅವನ್ನು ಸಹಿಸಲೂ ಬಹುದು. ಆದರೆ ಹೆಂಡತಿ ಸಾಯು ವಂತಹ ಕಷ್ಟ ಬರಬಾರದು. ಅದರಲ್ಲೂ ಹಸುಗೂಸುಗಳಿರುವ ತಾಯಿಯು ಸಾಯುವುದೆಂದರೆ ಉಳಿದವರನ್ನೂ ಸಾಯಿಸುವುದು. ಅಯ್ಯೋ! ಇನ್ನು ಭರತನನ್ನು ಹೇಗೆ ಸಂತಯಿಸಲಿ?..........ಅಯ್ಯೋ ಹುಲಿ ಬಂದರೆ ಏನು ಮಾಡಲಿ ಎಂದು ಭಯವನ್ನು ಅನುಮಾನಿಸುತ್ತಾ, ನಟ್ಟಿರುಳಲ್ಲಿ ಘೋರಾರಣ್ಯದಲ್ಲಿ ನಡೆಯುವ ದಾರಿಗನ ಎದುರಲ್ಲಿ ಸಾಕ್ಷಾತ್ ಹುಲಿಯೇ ಬಂದು ನಿಂತಂತಾಯಿತು ಶಂಕರರಾಯರ ಸ್ಥಿತಿ. ಭರತನು ಈಗ ತಾನೇ ಎದ್ದು "ಅಮ್ಮಾ, ಅಮ್ಮಾ" ಎಂದು ಅಳುತ್ತಿರುವುದು ಕೇಳತೊಡಗಿತು. ಅವನನ್ನು ಸಂತೈಸುವುದಕ್ಕೆಂದು ದಾಸಿಯು ಅತ್ತ ಹೋದಳು. ತಾಯಿ ಯನ್ನು ಕಂಡೇನೆಂಬ ಆಸೆಯಿಂದೆದ್ದ ಭರತನು ಇವಳ ಮಾತನ್ನು ಕೇಳುವನೇ? "ನೀನಲ್ಲ, ಅಮ್ಮ ಬೇಕು" ಎಂದನು. ಆಕೆ "ನಿನಗೆ ತಿನ್ನಲು ಹಲುವ ಮಾಡಿದ್ದೇನೆ; ಬಾ" ಎಂದಾಗ "ಅದು ಬೇಡ, ತಾಯಿ ಬೇಕು" ಎಂದು ಹಟ ಹಿಡಿದನು. ಏನು ಮಾಡಿದರೂ ಅವನ ಅಳು ಹೆಚ್ಚಾ ಯಿತೇ ಹೊರತು ಕಡಿಮೆಯಾಗುವ ಲಕ್ಷಣವೇ ಕಂಡು ಬರಲಿಲ್ಲ. ತಾನೇ ಹೋಗಿ ಸಂತೈಸಲೇ? ಆದರೆ ಹೇಗೆ? ಎಲ್ಲವನ್ನೂ ಕೊಡಬಹುದು. ತಾಯಿಯನ್ನೀಗ ಎಲ್ಲಿಂದ ಕೊಡಲಿ?......

ರಾಯರು ಗಟ್ಟಿಯಾಗಿ ಕುಳಿತರು. ಭರತನ "ಅಮ್ಮಾSSS" ಎಂಬ ಕರೆಯು ಚೂರಿಯ ಅಲಗಿನಂತೆ ಕರುಳನ್ನು ಕತ್ತರಿಸತೊಡಗಿತು. ಅದನ್ನು ಕೇಳಲಾರದೆ ಅವರು ಕಿವಿಗಳನ್ನು ಮುಚ್ಚಿಕೊಂಡರು. ಮತ್ತೆ

"ಅಮ್ಮಾ" ಎಂಬ ಕೂಗು ಚೂರಿಮುಳ್ಳಿನಂತೆ ಮನಸ್ಸನ್ನೆಲ್ಲಾ ಪರಚುತ್ತಿದೆ. ಇಂತಹ ಸಂಕಟಕ್ಕಿಂತ ಅಲ್ಲಿ ಉರಿಯುವ ಕಾಷ್ಠದಲ್ಲಿ ಹಾರಿ ಸತ್ತರೆ ಎಷ್ಟೋ ಮೇಲು ಎಂದು ತೋರಿತು. ಆದರೆ ಭರತನಿಗೆ "ಅಮ್ಮ, ಅಪ್ಪ" ಇಬ್ಬರೂ ಇಲ್ಲದಂತಾಗುವರೆಂದು ತೋರಿ ಆ ಆಲೋಚನೆಯನ್ನು ಬಿಟ್ಟರು.

ಭರತನ ಅಳು ನಿಲ್ಲಲೇ ಇಲ್ಲ; ಯಾರ ಮಾತನ್ನೂ ಕೇಳದೆ "ಅಪ್ಪಾ, ಅಮ್ಮ ಎಲ್ಲಿ?" ಎನ್ನುತ್ತಾ ಮಾಳಿಗೆಯ ಮೆಟ್ಟಲುಗಳನ್ನು ಹತ್ತಿ ತನ್ನಡೆಗೇ ಬರುತ್ತಿರುವನು. ಮೆಟ್ಟಲಿನ ತುದಿಯಿಂದ ಓಡಿಕೊಂಡು ಬಂದ ಭರದಲ್ಲಿ ಬೀಳುತ್ತಾ ಏಳುತ್ತಾ ಬರುತ್ತಿದ್ದಾನೆ. "ಈ ಮಾಳಿಗೆಯೇ ಕುಸಿದು ತಾನೇ ಅದರ ಅಡಿಯಲ್ಲಿ ಬಿದ್ದು ಏಕೆ ಸಾಯುವುದಿಲ್ಲ" ಎಂದು ಭಾವಿಸಿಕೊಂಡರು. ಆಕಾಶವೇ ಹರಿದುಬಿದ್ದಂತಾಯಿತು. ಕೋಣೆ, ಮಾಳಿಗೆ, ಕಂಬ, ಗೋಡೆ, ಮಂಚ ಎಲ್ಲಾ—ಎಲ್ಲವೂ ಚಕ್ರಾಕಾರವಾಗಿ ಸುತ್ತತೊಡಗಿತು. ಕೊನೆಗೆ ಸ್ಮೃತಿತಪ್ಪಿ ಬಿದ್ದುಬಿಟ್ಟರು.

X X X X X

ಭರತನು ಅಂಗಳದಲ್ಲಿ ಆಡುತ್ತಿದ್ದನು. ಸೂರ್ಯನ ಎಳೆಬಿಸಿಲು ಅಂಗಳದಲ್ಲಿ ಮೆಲ್ಲಮೆಲ್ಲಗೆ ಹರಡುತ್ತಿತ್ತು. ಶಂಕರರಾಯರ ದುಗುಡವೂ ಮೆಲ್ಲಮೆಲ್ಲಗೆ ಕುಂಟುತ್ತಾ ಹೊರಟು ಹೋಗುತ್ತಿತ್ತು. ಪುರೋಹಿತ ರಾಮಶಾಸ್ತ್ರಿಗಳು ರಮಾದೇವಿಯ ದಹನಕ್ರಿಯೆಗಳನ್ನೆಲ್ಲಾ ತೀರಿಸಿ ಮರಳುವಾಗ ಶಂಕರರಾಯರನ್ನೊಮ್ಮೆ ಕಾಣಬೇಕೆಂದು ಅವರ ಕೋಣೆಗೆ ಹೋಗಿ ಕುಳಿತರು. ಸ್ವಲ್ಪ ಹೊತ್ತಿನಲ್ಲೇ ರಾಮಶಾಸ್ತ್ರಿಗಳು "ಶಂಕರ, ಏನು ಯೋಚನೆ?" ಎಂದು ಮೊದಲು ಮಾಡಿದರು. ಶಂಕರರಾಯರು ಶೂನ್ಯವಾಗಿ "ಏನು ಶಾಸ್ತ್ರಿಗಳೇ; ಏನು ಹೇಳಲಿ! ನನ್ನನ್ನವಳು ನಡುನೀರಲ್ಲಿ ಕೈಬಿಟ್ಟು ಹೊರಟೇ ಹೋದಳು. ನಾನವಳ ವಿಯೋಗದುಃಖವನ್ನು ಸಹಿಸಲಾರೆ. ಆ ತಬ್ಬಲಿ ಭರತನ ಕಷ್ಟವನ್ನಂತೂ ನಾನು ನೋಡಲಾರೆ" ಎಂದು ಕಡೆಗಣ್ಣನ್ನು ಬೆರಳಿಂದೊರಸಿದರು.

ಶಾಸ್ತ್ರಿ:—ನಿನ್ನಂತಹ ತಿಳಿದವರೂ ಈ ರೀತಿ ಕಂಗಾಲಾದರೆ ಏನು ಹೇಳಲಿ. ಹುಟ್ಟು ಸಾವುಗಳು ಇದ್ದುದೇ! ಅದಕ್ಕಾಗಿ ಚಿಂತಿಸಿದರೆ

ಹೇಗೆ? ಪ್ರಪಂಚ ಧರ್ಮವೇ ಹಾಗೆ! ಹಿಂದಿನ ಮಹಾನುಭಾವರುಗಳೇ ಬಗೆಬಗೆಯಾಗಿ ಕಷ್ಟಪಟ್ಟಿರುವರು."

ಶಂಕರ:— ಹೌದು ಶಾಸ್ತ್ರಿಗಳೇ, ಅದೆಲ್ಲಾ ಸರಿ. ಹಿಂದಿನ ಮಹಾನುಭಾವರಲ್ಲಿ ಇಂತಹ ಕಷ್ಟಪಟ್ಟವರಿದ್ದರೆ, ಅವರೂ ನನ್ನಂತೆ ಶೋಕತಪ್ತರರೇ ಆಗಿದ್ದರು. ಭಗವಂತನು ಇಂತಹ ಕಷ್ಟಗಳನ್ನು ಏಕೆ ಕೊಡುವುದು? ಅವನಿಗೆ ನಾನು ಮಾಡಿದ ಅನ್ಯಾಯವಾದರೂ ಏನು?

ಶಾಸ್ತ್ರಿ:— ಭಗವಂತನಿಗೆ ನಾವು ಅನ್ಯಾಯವನ್ನೇನೂ ಮಾಡಬೇಕಾಗಿಲ್ಲ. ನಾವೆಲ್ಲ ಅವನ ಆಟದ ಗೊಂಬೆಗಳೆಂದ ಮೇಲೆ ಅವನು ಕುಣಿಸಿದಂತೆ ನಾವು ಕುಣಿಯಲೇ ಬೇಕು. ಅಷ್ಟೇ ಅವನಿಗೆ ಬೇಕಾದುದು.

ಶಂಕರ:— ಅವನ ಆಟ ನಮಗೆ ಪ್ರಾಣ ಸಂಕಟ. ನನ್ನ ನಳನಳಿಸುವ ಉದ್ಯಾನದ ಅರಳುಮಲ್ಲಿಗೆಯನ್ನು ಕಿತ್ತು ಮಣ್ಣಲ್ಲೆರಚಿದನು. ಶಾಸ್ತ್ರಿಗಳೇ, ನಾನು ಅಧೋಗತಿಗಿಳಿದೆ. ಇನ್ನು ನನಗೆ ಹಿಂದಿನಂತಹ ಸ್ವರ್ಗೀಯ ಆನಂದವು ದೊರೆಯಲಿದೆಯೇ?"

ಇಷ್ಟನ್ನು ಹೇಳಿ ಶಂಕರರಾಯರು ಅತ್ತುಬಿಟ್ಟರು.

ಶಾಸ್ತ್ರಿ:— ಶಂಕರ, ಹುಡುಗರಂತೆ ನೀನು ಯಾಕೆ ಅಳುತ್ತಿ? ಇಂತಹ ಸಂಕಟ ಬರುವಾಗ ಶೋಕವಾಗುವುದು ಸಹಜವೇ. ಕೆಲ ದಿನಗಳಲ್ಲೇ ಎಲ್ಲವೂ ಸುಧಾರಿಸಲಿದೆ. ಇದಕ್ಕೆಲ್ಲಾ ಯೋಗ್ಯವಾದ ಮದ್ದೆಂದರೆ, ನೀನು ಇನ್ನೊಂದು ಮದುವೆ.....

"ನಿಲ್ಲಿಸಿರಿ, ಶಾಸ್ತ್ರಿಗಳೇ" ಎಂದು ಶಂಕರರಾಯರು ಅರ್ಧದಲ್ಲೇ ಅವರ ಮಾತನ್ನು ತಡೆದರು. "ಏನು, ಇಷ್ಟು ಹೇಳುವುದಕ್ಕಾಗಿ ನೀವು ನನಗೆ ಧರ್ಮೋಪದೇಶಮಾಡಿದುದೇ? ರಮೆಯು ಅಳಿವಾಗಿ ಇನ್ನೂ ಅರ್ಧ ದಿನವಾಗಿಲ್ಲ; ಅಷ್ಟರಲ್ಲಿ ಮತ್ತೊಂದು ಮದುವೆಯ ಪ್ರಸ್ತಾವ! ನಾಚಿಕೆಯಿಲ್ಲ! ಏನಾದರೂ ಹೇಳುವಿರಿ. ಮದುವೆ, ದಾಂಪತ್ಯ, ಹೆಂಡತಿ ಎಂದರೆ ಅದು ಆಟವಲ್ಲ, ಶಾಸ್ತ್ರಿಗಳೇ. ಅದೇನು ಹುಡುಗರ ಆಟದ ಮದುವೆಯೆಂದು ತಿಳಿದಿರೇ? ಇದೇ ಮಾತನ್ನು ನೀವು ಇನ್ನೊಮ್ಮೆ ಹೇಳಿದರೆ.....! ಆ ಮೊದಲೇ ಇಲ್ಲಿಂದ ದಯಮಾಡಿಸಿರಿ."

ಶಾಸ್ತ್ರಿ:—ನಿನಗೆ ಇಷ್ಟು ಸಿಟ್ಟು ಬರುವಂತೆ ನಾನು ಯಾವ ಮಾತನ್ನಾಡಿದ್ದೇನೆ ಈಗ? ನಾನು ಧರ್ಮಶಾಸ್ತ್ರಕ್ಕೆ ವಿರೋಧವಾದ ಒಂದು ಮಾತನ್ನೂ ಹೇಳಿಲ್ಲ. ಒಪ್ಪದಿದ್ದರೆ ಬಿಟ್ಟುಬಿಡು. ವಾಡಿಕೆಯ ಮಾತನ್ನೇ, ವಾಡಿಕೆಯಲ್ಲಿರುವಂತೇ ನಾನು ಹೇಳಿದೆನಲ್ಲದೆ, ಅದಕ್ಕೆ ವ್ಯತಿರಿಕ್ತವಾಗಿ ನಾನೇನನ್ನೂ ಹೇಳಿಲ್ಲ. ನೀನು, ಎರಡನೆಯ ಮದುವೆಯಾಗುವದೆಂಬುದಿಲ್ಲವೆ? ಹೆಂಡತಿಯ ಉತ್ತರಕ್ರಿಯೆ ಪೂರ್ತಿಯಾಗುವ ಮೊದಲೇ ಗಂಡನು ಮದುಮಗನಾಗಿ ಬಾಸಿಗ ಕಟ್ಟುವುದು ಕ್ರಮವಿರುದ್ಧವೇ?...... ಅಷ್ಟು ಬೇಗನೇ ಮದುವೆಯಾಗುವುದಕ್ಕೆ ಒಂದು ಕಾರಣವೂ ಇದೆ. ಇದರಿಂದ ಗಂಡುಸು ಶೋಕದಲ್ಲಿ ಮುಳುಗಿ ಕೊರಗಿ ಕೊರಗಿ ಸವೆಯುವ ಕಷ್ಟವೇ ಇಲ್ಲ. ಹದಿಮೂರೇ ದಿನಗಳಲ್ಲಿ ಹೊಸ ಹೆಂಡತಿಯೊಡನೆ ರಮಿಸಿ ವ್ಯಸನವನ್ನು ಮರೆಯಲೂ ಸಾಧ್ಯವಿದೆ. ಅಷ್ಟು ಬೇಗನೇ ಮದುವೆಯಾಗುವ ಸಂಭವವಿದ್ದರೆ ಇಂದೇ ಪ್ರಸ್ತಾವ ಮಾಡದಿದ್ದರೆ ಮತ್ತೆ ಯಾವಾಗ? ನನ್ನ ಮಾತು ಮೆಚ್ಚದಿದ್ದರೆ, ನಾನು ಈಗಲೇ ಹೋಗಿಬಿಡುತ್ತೇನೆ” ಎನ್ನುತ್ತಾ ಮೇಜಿನ ಮೇಲಿಟ್ಟಿದ್ದ ಅಕ್ಕಿ-ಕಾಯಿಯ ಮಾರಾಪನ್ನು (ಮೂಟೆಯನ್ನು) ಕಂಕುಳಲ್ಲಿ ಇರುಕಿಸಿದರು.

ಶಂಕರ:—ಇರಬಹುದು, ಶಾಸ್ತ್ರಿಗಳೇ, ಹಾಗೆ ಮದುವೆಯಾಗುವವರು ಬರಿಯ ಪಶುಗಳು; ಕಾಮಪೀಡಿತರು. ಅಂಥವರಿಗೆ ಬೇಕಾದುದು ಧರ್ಮಪತ್ನಿಯಲ್ಲ; ರತಿಯಂತ್ರ ಮಾತ್ರ!......ನಿಮ್ಮ ಪ್ರಸ್ತಾವ ನನಗೆ ಅಗತ್ಯವಿಲ್ಲ. ನನಗೆ ಅಂತಹ ಯಂತ್ರಬೇಕಾಗಿಲ್ಲ. ನಮ್ಮದು ಆದರ್ಶದಾಂಪತ್ಯವಾಗಿತ್ತು; ನಾನು ಪ್ರೇಮಿಯಾಗಿದ್ದೆ; ಕಾಮಿಯಾಗಿರಲಿಲ್ಲ.

ಶಾಸ್ತ್ರಿಗಳು ಪುನಃ ಕುಳಿತರು. ಸಂಭಾಷಣೆಗೆ ಸಿಕ್ಕಿದ ಸಂದರ್ಭವು, ಆ ಮಾತನ್ನು ಅಲ್ಲಿಗೇ ನಿಲ್ಲಗೊಡಲಿಲ್ಲ. “ನಿನ್ನ ಈ ಮಾತಿಗೆ ನಾನು ಒಪ್ಪಲಾರೆ, ಶಂಕರ! ಪತ್ನಿಯೆಂದರೇನೆಂದು ನೀನು ಮಾತ್ರ ತಿಳಿದದವನೆಂದು ನಿನ್ನ ಅಭಿಪ್ರಾಯವೆ? ಉಳಿದವರೆಲ್ಲ ಪಶುಗಳೇ? ನಿನಗಿಂತ ಹೆಚ್ಚಿನ ಪ್ರಪಂಚಾನುಭವ ನನಗಿದೆ. ನನ್ನ ಶಿಷ್ಯ ವರ್ಗದಲ್ಲಿ ಇಂತಹ

ಎಷ್ಟೋ ವಿಷಯಗಳನ್ನು ಕಂಡಿದ್ದೇನೆ. ನನಗೆ ಮದುವೆಯೇ ಬೇಡವೆಂದವರನೇಕರು ಎರಡನೆಯ ಮದುವೆಯಾಗಿ ಹೆಂಡತಿಯ ಚರಣದಾಸರಾಗುತ್ತಾರೆ! ಒಂದೇ ಒಂದು ಸಿಟ್ಟಿನ ಮಾತನ್ನೂ ಅವರಾಡಿಕೊಂಡವರಲ್ಲ. ಆದರೆ ನಿನ್ನಂತೆ ಆದರ್ಶ ದಾಂಪತ್ಯವೆನ್ನುವವರೇ ಆಗಾಗ ಹೆಂಡತಿಯನ್ನು ಬೈದುದನ್ನು ಕಿವಿಯಾರೆ ಕೇಳಿದ್ದೇನೆ. ತಿಳಿಯಿತೆ?

ಶಂಕರ:—ಶಾಸ್ತ್ರಿಗಳೇ, ನೀವು ಭಾವಿಸಿದಷ್ಟು ಸುಲಭವಾಗಿ ದಾಂಪತ್ಯವನ್ನು ಅಳೆಯುವುದು ಸಾಧ್ಯವಲ್ಲ. ಬೈಯುವುದು ಅಳತೆಗೋಲಲ್ಲ. ಮನಸ್ಸಿನ ಚಿಂತೆಯ ತಾಕಲಾಟದಲ್ಲಿ, ಸಿಟ್ಟಿನ ಉದ್ರೇಕದಲ್ಲಿ ಒಂದು ವೇಳೆ ಅವರು ಬೈದು ಬಿಟ್ಟರೂ, ಅವರ ದಾಂಪತ್ಯವು ವಿರಸವಾಯಿತೆನ್ನಲಾಗುವುದಿಲ್ಲ. ಆದರ್ಶ ದಾಂಪತ್ಯಕ್ಕೆ ವಿದ್ಯೆ ಬೇಡ, ಧನ ಬೇಡ ಯಾವುದೂ ಬೇಡ. ನಮ್ಮ "ಕೊರಗ"ನಂಥವರೂ ಆದರ್ಶ ದಾಂಪತ್ಯವನ್ನನುಭವಿಸಬಹುದು, ಎನ್ನುವಾಗ ಅದನ್ನಷ್ಟು ಸುಲಭವಾಗಿ ಹಾರಿಸಿದರಾಗದು.

ಶಾಸ್ತ್ರಿ:—ಅದರಂತೆ, ಎರಡನೆಯ ಮದುವೆಯಾದರೂ ಆದರ್ಶ ದಂಪತಿಗಳಾಗಿರಲಾರರೇ?

ಶಂಕರ:—ಏನು ಆದರ್ಶ? ಏನು ಸರಸ? ಅರುವತ್ತು ವರ್ಷದ ಮುದುಕನು ಹದಿನಾರು ವರ್ಷದ ಯುವತಿಯನ್ನು ಮದುವೆಯಾದರೆ, ಇಬ್ಬರಿಗೂ ಸುಖ ಸಿಕ್ಕೀತೇ? ಹೇಳಿ.

ಶಾಸ್ತ್ರಿ:—ಬೇಡ, ಅರುವತ್ತು ವರ್ಷದವನು ನಲ್ವತ್ತೈದು ವರ್ಷದವಳನ್ನು ಕೈ ಹಿಡಿದರೆ, ಮತ್ತು ನಿನ್ನಂತಹ ಮೂವತ್ತು ವರ್ಷದವನು ಇಪ್ಪತ್ತೈದು ವರ್ಷದ ತರುಣಿಯನ್ನು ಮದುವೆಯಾದರೆ ತೊಂದರೆಯೇನು?

ಶಂಕರ:—ನಮ್ಮ ಸಮಾಜದಲ್ಲಿ ಅದಕ್ಕವಕಾಶವೇ ಇಲ್ಲ. ಇಪ್ಪತ್ತು ವರ್ಷ ಮೀರಿದ ಅವಿವಾಹಿತೆಯರು ನಮ್ಮ ಸಮಾಜದಲ್ಲಿ ಒಬ್ಬರಾದರೂ ಇರುವರೇ? ವಿಧವೆಯರು ಮಾತ್ರ ಸಿಕ್ಕಿಯಾರು.

ಶಾಸ್ತ್ರಿಗಳು (ವ್ಯಂಗ್ಯವಾಗಿ)-ಎಂದರೆ ಸರಿಪ್ರಾಯದ ವಿಧವೆಯು ಸಿಕ್ಕಿದರಾಗಬಹುದೆಂದೇ?

ಶಂಕರ:—ಅದೋ, ಒಂದು ಹೇಳಿದರೆ ಒಂದು ಅರ್ಥ ಮಾಡುತ್ತೀರಿ. ನಾನು ಲೋಕದ ವಿಚಾರ ಹೇಳಿದರೆ, ಅದನ್ನು ನನಗೆ ಹೊಂದಿಸುವಿರಿ. ನಾನಂತೂ ಮದುವೆಯೇ ಆಗುವುದಿಲ್ಲ, ಬಿಡಿ. ಒಂದುವೇಳೆ ವಿಧವೆಯನ್ನು ಮದುವೆಯಾದರೆ, ನಿಮ್ಮ ಶಾಸ್ತ್ರದ ಸಮ್ಮುಖದಲ್ಲಿ ನನಗೆ ಲ್ಲಿಯ ಸ್ಥಾನ?

ಅಷ್ಟರಲ್ಲಿ ಭರತನು ಕುಪ್ಪಳಿಸುತ್ತ ತಂದೆಯೆಡೆಗೆ ಬಂದನು. ಅವನ ಮುಖವು ಚೆನ್ನಾಗಿ ಅರಳಿ ನಗುವ ಗುಲಾಬಿಯಂತೆ ಕಂಡಿತು. ಮೊದಲಿನ ಅಳುವ ಭರತನಿಗೂ ಈಗಿನ ನಗುವ ನಂದನಿಗೂ ಭೂಮ್ಯಾಕಾಶದಷ್ಟು ಅಂತರ ಕಂಡಿತು. ಭರತನ ಅಳುವಿನೊಡನೆ ಅಳುವ, ನಗುವಿನೊಡನೆ ನಗುವ ಶಂಕರರಾಯರ ಮನಸ್ಸು ಶಾಂತವಾಯಿತು. ಸಂತೋಷದಿಂದ ಮಗನನ್ನಪ್ಪಿ ಮುದ್ದಿಟ್ಟರು. ಅವರಿಗೆ ಬೇಕಾದುದು ಈ ಮಗುವಿನ ನಗುಮೊಗ ಮಾತ್ರವೆಂಬಂತಿತ್ತು.

ಅಂಗಳಕ್ಕೆ ಕ್ಲಬ್ಬಿನ ಕಾರ್ಯದರ್ಶಿ ವಿಜಯನ ಕಾರು ಬಂದು ನಿಂತಿತು. "ಇನ್ನು ನಿಂತರೆ ಫಲವಿಲ್ಲ. ಸಾರ್ವಜನಿಕ ಕಾರ್ಯದ ಕಾರ್ಯಕರ್ತರು ಒಬ್ಬೊಬ್ಬರೇ ಬರತೊಡಗಿದರು. ಇನ್ನು ನನ್ನ ಮಾತಿಗೆ ಅವಕಾಶವಿಲ್ಲ" ಎಂದು ಭಾವಿಸಿ ಶಾಸ್ತ್ರಿಗಳು, "ಹಾಗಿದ್ದರೆ, ನಾನು ಬರುತ್ತೇನೆ" ಎಂದು ಎದ್ದು ಹೊರಟರು. ಕಾರ್ಯದರ್ಶಿಯು ಸವಾರಿ ಮೇಲೆ ಬರುವುದೂ ಶಾಸ್ತ್ರಿಗಳು ಕೆಳಗಿಳಿಯುವುದೂ ಸರಿಯಾಯಿತು. ಶಾಸ್ತ್ರಿಗಳ ತಲೆಯಲ್ಲಿ ಕುಳಿತಿದ್ದ ಯೋಚನೆಯು "ನನ್ನ ಕಾರ್ಯವು ಆಗುವುದಿಲ್ಲವೆ? ಏನೂ ಆಗುವಂತೆ ತೋರುವುದಿಲ್ಲ; ಆದರ್ಶವನ್ನು ಹಿಡಿದು ಕುಳಿತಿದ್ದಾನೆ" ಎಂದು ಹೇಳುತ್ತಿತ್ತು. "ಈಗ ಅವನಿಗೆ ಶ್ಮಶಾನ ವೈರಾಗ್ಯ. ಆದರ್ಶವೆನ್ನಲಿ, ಏನೇ ಎನ್ನಲಿ ಕೆಲವು ದಿನಗಳಲ್ಲಿ ನನ್ನ ಮಾತಿಗೆ ಒಪ್ಪಿಯಾನು. ಹೀಗೆ ಮದುವೆಯೇ ಬೇಡವೆಂದ ಎಷ್ಟೋ ಮಂದಿ, ಹದಿಮೂರನೆಯ ದಿನ ಬಾಸಿಗಕ್ಕೆ ತಲೆಯೊಡ್ಡಿದುದನ್ನು ನಾನು ಕಂಡಿದ್ದೇನೆ" ಎಂದು ಶಾಸ್ತ್ರಿಗಳ ಮನಸ್ಸು ಸಮಾಧಾನ ಹೇಳಿತು.

೨

ದವಾಖಾನದಿಂದ ಮನೆ ಮುಟ್ಟಿದ ಶಾಸ್ತ್ರಿಗಳು ಕಂಕುಳಲ್ಲಿ ಜೋತಾಡುತ್ತಿದ್ದ “ಮಾರಾಪ”ನ್ನು ಕೆಳಗಿಳಿಸಿ, ದೇಹವನ್ನು “ಬಾಜಿರ”ಕ್ಕೊರಗಿಸಿ “ಸ್ವಲ್ಪ ಮಜ್ಜಿಗೆ ನೀರು” ಎಂದರು. ಶಾಸ್ತ್ರಿಗಳ ಹೆಂಡತಿ ಗೌರಕ್ಕೆ ಒಂದು ಗಿಂಡಿ ಮಜ್ಜಿಗೆ ನೀರನ್ನು ತಂದಿತ್ತಳು. ಅದನ್ನು ಗಳಗಳನೆ ಕುಡಿದು ಶಾಸ್ತ್ರಿಗಳು “ಬೆಂಕಿಯ ಬಳಿ ನಿಂತು, ಏನೂ ಕೂಡುವುದಿಲ್ಲ; ರಾತ್ರಿಯಿಡೀ ನಿದ್ದೆಯೂ ಇಲ್ಲ” ಎಂದರು.

ಗೌ:—ಅದೇನು? ಉಪನಯನ ನಿನ್ನೆ ಮಧ್ಯಾಹ್ನವಷ್ಟೆ! ರಾತ್ರಿ ನಿದ್ದೆಯಿಲ್ಲದೇನು?

ಶಾಸ್ತ್ರಿ:—ಊರು ನೀರಪಾಲಾದರೂ ನಿನಗೆ ತಿಳಿಯಬೇಕಲ್ಲ? ನಿನ್ನೆ ಉಪನಯನದ ಊಟವಾಗುವಾಗ ತಡವಾಯಿತೆಂದು ಅಲ್ಲೇ ಉಳಿದಿದ್ದೆ. ಮತ್ತೆ ನೋಡುವಾಗ ನಾನು ನಿಂತದ್ದೆ ಒಳ್ಳೆಯದಾಯಿತು. ಶಂಕರರಾಯರ ಹೆಂಡತಿ ತೀರಿದಳೆಂದು ನಡುರಾತ್ರಿಗೆ ಅಲ್ಲಿಗೆ ಜನ ಬಂತು. ಅವಳನ್ನು ಹೊತ್ತಿಸಿ ಬರುವಾಗ ಇಷ್ಟು ಹೊತ್ತಾಯಿತು. ಅವಳು ಸಾಧ್ವಿ; ಪತಿವ್ರತಾ ಶಿರೋಮಣಿ; ಇಲ್ಲವಾದರೆ ಅದೇ ಸಮಯಕ್ಕೆ ವೈದಿಕರು ಅಲ್ಲಿ ತಯಾರಿರಬೇಕೆ?

ಗೌ:—ಏನು, ರಮಾದೇವಿ ತೀರಿಹೋದಳೆ? ಅದುವೇನು? ಸೌಖ್ಯವಿಲ್ಲದ ಸುದ್ದಿಯೇ ಇಲ್ಲ. ಬಂಗಾರದಂತಹ ಹೆಂಗುಸು. ಮನೆಗೆ ಹೋದವರೊಡನೆ ಅಷ್ಟು ಒಳ್ಳೆಯ ಮಾತುಕತೆ. ಗಂಡಹೆಂಡಿರೆಂದರೆ ಎಷ್ಟು ಎರಕ. ಪಾಪ, ಭರತ ಪರದೇಶಿಯಾದ.

ಶಾಸ್ತ್ರಿ:—ವರ್ತಮಾನವಿರುವುದಕ್ಕೆ ಅಷ್ಟು ಕಠಿನ ಕಾಯಿಲೆ ಇದ್ದಿರಲ್ಲವೆ? ಬರೀ ಏಳು ದಿನದ ಜ್ವರ. ಅದೆಲ್ಲಾ ನೆಪಕ್ಕೆ ಮಾತ್ರ. ಪುಣ್ಯವಂತರಿಗೆ ಸಿಗುವ ಮರಣವೆಂದರೆ ಅದು; ಎದ್ದು ಹೋದಂತೆ ಹೋಗಿಬಿಡುವುದು. ಪಾಪಿಗಳು ಮಾತ್ರ ಏಳು ದಿನ ಚಕ್ರಶ್ವಾಸಬಂದು ಸಾಯುವುದು. ಮುಖ್ಯ ಅವರವರ ಕರ್ಮಾನುಸಾರ.... ಭರತನು ಪರದೇಶಿಯಾಗುವುದು ಹೇಗೆ? ಅವರು ಇನ್ನೊಂದು ಮದುವೆಯಾದರೆ ಎಲ್ಲ ಸರಿಹೋಗುವುದು.

ಗೌ:—ಅವರಿಗೆ ಇನ್ನೇನು ಮದುವೆ? ಆ ಮುದುಕನಿಗೆ ಹೆಣ್ಣು ಕೊಡುವವರಾರು?

ಶಾಸ್ತ್ರಿ:—ಅವರಿಗೆ ಅಷ್ಟು ಪ್ರಾಯವಾಯಿತೇ? ಬರೇ ಮೂವತ್ತು ವರ್ಷ ಮಾತ್ರ: ಯಾರೂ ಹುಡುಗಿ ಕೊಟ್ಟಾರು. ಐವತ್ತು ವರ್ಷದಲ್ಲಿಯೂ ಮದುವೆಯಾಗಿ ನಾಲ್ಕು ಮಕ್ಕಳಾಗಿ ಸುಖದಿಂದ ಸಂಸಾರ ಸಾಗಿಸುವವರಿದ್ದಾರೆ!.....ಆದರೆ ಅವರು ಮಾತ್ರ ಮದುವೆಯ ಮಾತೆತ್ತಿದರೆ ಸಿಟ್ಟಿನ ಕೆಂಡವಾಗುತ್ತಾರೆ. ನಾನು ಸ್ವಲ್ಪ "ಹೆಟ್ಟಿ" ನೋಡಿದೆ; ಆದರೆ "ಚೆಟ್ಟಿ"; ಸ್ವರ ಹೊರಡುವುದೇ ಇಲ್ಲ. ಹೊಸಕಾಲದ ಕಾನೂನನ್ನೇ ಮಾತಾಡುತ್ತಾರೆ: ಎರಡನೇ ಮದುವೆಯಾಗುವವರು ವಿಧವೆಯರನ್ನೇ ಮದುವೆಯಾಗಬೇಕಂತೆ. ಆದರೆ ಅವರು ಮಾತ್ರ ಮದುವೆಯೇ ಆಗುವುದಿಲ್ಲವಂತೆ!

ಗೌ:—ಅಯ್ಯೋ, ಅಷ್ಟು ಬುದ್ಧಿವಂತರು, ನಾನಾಕಾರ್ಯದಲ್ಲಿ ಕೈ ಹಾಕುವವರು, ನಗರದಲ್ಲಿ ಗಣ್ಯ ಮನುಷ್ಯರು, ನಮ್ಮ ಸಮಾಜದಲ್ಲೇ ಮುಖಂಡರು, ಹೀಗೆಲ್ಲಾ ಇದ್ದ ಇವರಿಗೆ ವಿಧವೆಯನ್ನು ಮದುವೆಯಾಗುವ ಬುದ್ಧಿಯೇ? ಏನು, ಮತಿಭ್ರಾಂತಿ ಹಿಡಿಯಿತೇ?

ಶಾಸ್ತ್ರಿ:—ಅದೇನೂ ಇಲ್ಲ. ಇದೊಂದು ಶ್ಮಶಾನವೈರಾಗ್ಯ. ನಾನು ಎಷ್ಟೋ ಮಂದಿ ಹೆಂಡತಿ ಸತ್ತವರನ್ನು ಕಂಡಿರುವೆನು. ನನ್ನ ಮಾತನ್ನು ಕೇಳಿ, ವ್ಯಸನವನ್ನು ಕಳೆದು ಸುಖವಾಗಿ ಬಾಳಿದವರೂ ಇದ್ದಾರೆ. ಆದರೆ ಇವರಷ್ಟು ಕಂಗಾಲಾದವರು ಯಾರೂ ಇಲ್ಲ. ಮಕ್ಕಳಂತೆ ಗಳಗಳನೆ ಅಳುತ್ತಿರುವರು. ಏನು ಮಾಡುವುದು? ಇನ್ನೊಂದು ಮದುವೆಗೆ ಒಪ್ಪಿದರೆ ಈ ವ್ಯಸನವಿರುತ್ತಿದ್ದಿಲ್ಲ. ನಾಲ್ಕು ದಿನ ಕಳೆಯಲಿ. ಆಗ ಬುದ್ಧಿ ಬಂದೀತು ಎಂದು ಅವರಷ್ಟಕ್ಕೆ ಬಿಟ್ಟು ಸುಮ್ಮನೆ ಬಂದೆ.

ಗೌ:—ನಮಗೇನು ಅಷ್ಟು ಒತ್ತಾಯ? ಮದುವೆ ಆಗಬೇಕೆಂದಾದಾಗ ಹೆಣ್ಣು ನಿಶ್ಚಯ ಮಾಡಿ, ಹೇಳಿ ಕಳಿಸಿಯಾರು. ಹೋಗಿ ಮಂಗಲಕಾರ್ಯ ತೀರಿಸಿ ಬಂದರಾಯಿತು. ಒಳ್ಳೇದಾದರೆ ಯಾರೂ ಮಾತಾಡಲಾರರು. ಕೆಟ್ಟದಾದರೆ "ಆ ಶಾಸ್ತ್ರಿಯಿಂದ ಹೀಗಾಯಿತು" ಎಂದಾರು.

ಶಾಸ್ತ್ರಿ:—ನಮಗೆ ಬೇಕಾಗಿಯೇ ಅಷ್ಟು ಮಾತಾಡಿದುದು. ಅವರು ಒಪ್ಪುತ್ತಿದ್ದರೆ ನಮ್ಮ ರತ್ನಳನ್ನು ಕೊಡಬಹುದಿತ್ತು. ಬೇಕಾದಷ್ಟು ಸಂಪತ್ತಿದೆ.

ಗೌ:—ಓಹೊ, ಆ ಯೋಚನೆಯೆ ನಿಮ್ಮದು? ಆದೀತಾದೀತು! ಆ ಆಲೋಚನೆಯನ್ನು ಬಿಟ್ಟುಬಿಡಿ. ಒಬ್ಬಳ ಅವಸ್ಥೆ ನೋಡಿ ಸಾಕಾಯಿತು. ಇನ್ನೊಬ್ಬಳನ್ನೂ ಹಾಗೆ ಮಾಡಬೇಕೆನ್ನುವಿರಾ? ಒಳ್ಳೇ ಕುಲ, ಜಾತಕದಲ್ಲಿ ಅಷ್ಟು ಕೂಡಿಬರುತ್ತದೆ, ಹುಡುಗನಿಗೆ ಪ್ರಾಯ ಹೆಚ್ಚು ಆಗಲಿಲ್ಲ, ಎಂದೆಲ್ಲಾ ಎಣಿಸಿ ಶಾರದೆಯನ್ನು ಎರಡನೆಯ ಮದುವೆ ಮಾಡಿಕೊಟ್ಟು ಆದ ಅವಸ್ಥೆಯೇನು? ಶೋಭನವಾಗುವ ಮೊದಲೇ ಮುಖದ ಕುಂಕುಮ ಅಳಿಸಬೇಕಾಯಿತು. ಅಷ್ಟರಲ್ಲೇ ತೀರಿತೆ? ಆ ಮೇಲೆ ಏನೆಲ್ಲಾ ಕತೆ ನಡೆಯಿತು; ಏನೆಲ್ಲಾ ಹೇಸಿಕೆಯಾಯಿತು! ಸಮಾಜದಲ್ಲಿ ತಲೆಯೆತ್ತದಂತಾಯಿತು. ನಾಲ್ಕು ಜನ ಕೂಡುವಲ್ಲಿಗೆ ಹೋಗುವುದೆಂದರೆ ತಲೆ ಕಡಿದಂತೆ ಆಗುವುದು. ಸ್ವಲ್ಪ ಕಣ್ಣು ತಪ್ಪಿದರೆ ಸಾಕು, ಪಿಸಿಪಿಸಿನೆ ಸುರುವಾಗುವುದು. "ಇವಳಮುಗಳಿಗೆ ಗಾಳಿಗೆ ಬಸುರು ಬಂತು" ಎನ್ನುವರು. ನಿಮಗೆ ಇದೆಲ್ಲಾ ತಿಳಿದರಷ್ಟೆ?

ಶಾಸ್ತ್ರಿ:—ಅದಕ್ಕೇನು ಮಾಡಲಿ? ಅವಳು ಸುಖವಾಗಿರಬೇಕೆಂದೇ ನಾನು ಮಾಡಿದ ಕೆಲಸ......ಹುಡುಗಪ್ರಾಯದವನನ್ನು ಮದುವೆಯಾದವರೂ ವಿಧವೆಯರಾಗುವುದಿಲ್ಲವೆ? ಕಳೆದ ವರ್ಷ ನಾರಾಯಣರಾಯರ ಮನೆಯಲ್ಲಿ ಆದುದೇನು? ಚತುರ್ಥಿ ಮರುದಿನ ಕೆರೆಮೀಯಣಕ್ಕೆ ಹೊಳೆಗೆ ಹೋದವನು, ಅಲ್ಲೇ ಸೆಳೆತಕ್ಕೆ ಸಿಕ್ಕಿ "ಪಡ್ಡ" (ಮಡಿದ). ಏನು, ಜನವಿಲ್ಲವಾಯಿತೇ? ಅವನನ್ನುಳಿಸಲು ಯಾರಿಂದಾಯಿತು? ಎಲ್ಲಾ ಋಣಾನುಬಂಧವಿದ್ದಂತೇ ಆಗುವುದು. ನಮ್ಮಿಂದೇನು ಮಾಡಲೂ ಸಾಧ್ಯವಿಲ್ಲ.

X

ಶಾಸ್ತ್ರಿಗಳಿಗೆ ಹಿಂದಿನ ಚಿತ್ರ ಕಾಣತೊಡಗಿತು. ಶಾರದೆ ಅವರ ಸೀಮಂತ ಪುತ್ರಿ; ಅಕ್ಕರೆಯಿಂದ ಬೆಳೆದವಳು. ಯಾವ ಕೊರತೆಯೂ ಇಲ್ಲದಂತೆ ಅವಳನ್ನು ಸಾಕಿದ್ದರು. ವೈದಿಕರ ಮಡುಗಿಗೆ ವಿದ್ಯಾಭ್ಯಾಸವು

ಆಗತ್ಯವಿಲ್ಲವಾದರೂ, ಬೇರೆ ಹುಡುಗರಿಗೆ ಸಂಸ್ಕೃತಪಾಠ ಹೇಳಿಸುವಾಗ ಆವಳಿಗೂ ಕಲಿಸಿದ್ದರು. ವಿದ್ಯಾಭಿರುಚಿಯುಂಟಾದ ಮೇಲೆ ಆವಳೇ ಅಭಿವೃದ್ಧಿ ಪಡಿಸಿದಳು; ಉಳಿದವರಿಗಿಂತಲೂ ಚುರುಕಿನಿಂದ ಕಲಿತಳು. ಒಮ್ಮೊಮ್ಮೆ ಚುರುಕಿನ ತಲೆಯುವನಾದ ಗುರಿಕಾರ ಶಾಮ ಭಟ್ಟರ ಮಗ ನಾರಾಯಣನಿಗೂ ಆವಳು ಶಬ್ದ ನಡೆಯಿಸುವುದರಲ್ಲಿ ಸಲಹೆಯನ್ನೀಯು ತ್ತಿದ್ದಳು.

ಶಾಸ್ತ್ರಿಗಳು ಶಾರದೆಗೆ ಹತ್ತು ವರ್ಷ ತುಂಬುತ್ತಲೇ ಆವಳಿಗೆ ಬೇಗನೇ ಮದುವೆ ಮಾಡಬೇಕೆಂದು ಯೋಚಿಸಿದ್ದರು. ತನ್ನಂತೆ ವೈದಿಕರಾಗಿದ್ದರೆ ಏನೂ ಸುಖವಿಲ್ಲ; ಬಿಸಿಲಾದರೆ ಬಿಸಿಲು, ಮಳೆಯಾದರೆ ಮಳೆ, ರಾತ್ರಿ ಯಾದರೆ ರಾತ್ರಿ, ದುಡ್ಡಿಗಾಗಿ ಊರೂರು ಆಲೆದಾಟ. ಹಾಗೆ ಬೇಡ, ಗೃಹಸ್ಥರಾಗಬೇಕು. ಕಡೆಗೆ ಉಂಡುಡುವುದಕ್ಕಾದರೂ ಕೊರತೆಯಿರ ಬಾರದು. ಎರಡನೆಯ ಮದುವೆಯಾದರೂ ಚಿಂತೆಯಿಲ್ಲ. ತನ್ನ ಮುದ್ದು ಮಗಳಿಗೆ ಸುಖಸಿಗಬೇಕು ಎಂದು ಶಾಸ್ತ್ರಿಗಳು ಯೋಚಿಸಿದರು.

ನವಯುಗದ ಸುಪ್ರಭಾತದ ಕಾಲ. ನವಯುವಕರು ಇಂತಹ ಹಳೆಯ ರೀತಿಯಲ್ಲಿ ಆಚಾರದಲ್ಲಿ ತೊಳಲುತ್ತಿರುವ ಹುಡುಗಿಯರನ್ನು ಮದುವೆಯಾಗಲು ತಯಾರಿರಲಿಲ್ಲ. ಕಿರಿಗೆಯುಟ್ಟು, ಮುಂಗೈವರೆಗೆ ಕೈಯಿರುವ, ಗುಬ್ಬಿಯ ಬದಲಿಗೆ ಗಂಟುಕಟ್ಟಬೇಕಾದ ರವಕೆಯನ್ನು ತೊಡುವ ಹುಡುಗಿಯರು ಆವರಿಗೆ ಬೇಡ. ಕೆಲಯುವಕರ ಮನವೊಲಿ ಯುವುದೋ ಎಂದು ನೋಡಿ ಫಲವಿಲ್ಲವೆಂದರಿತಾಗ "ಈಗಿನ ಕಾಲದ ಹುಡುಗರ ತಲೆಯೇ ಹಾಳಾಗಿದೆ" ಎಂದು ಹೇಳಿ, ಶಾಸ್ತ್ರಿಗಳು ಎರಡನೇ ಮದುವೆಯುವರ ಸಂಧಾನಕ್ಕೆ ತೊಡಗಿದರು. ಕೊನೆಗೆ ಎಲ್ಲಿಯೂ ಹುಡುಗಿ ಸಿಗದೆ ನಿರಾಶರಾಗಿದ್ದ ಐವತ್ತುವರ್ಷದ ಭೀಮಭಟ್ಟರಿಗೆ ಶಾರದೆಯನ್ನು ಕೊಡುವ ನಿಶ್ಚಯಮಾಡಿದರು. ಮನೆ ಸ್ವಲ್ಪದೂರ; ಮೂಡಲಾಗಿ ಗಟ್ಟದ ಬುಡ. ಸ್ವಲ್ಪ ಜ್ವರದ ಊರು. ಅದೇನೂ ಚಿಂತೆಗೆ ಕಾರಣವಲ್ಲ. ಹುಡುಗ ನಿಗೆ ಐವತ್ತು ವರ್ಷವೆಂದರೂ ಅದೇನೂ ಹೆಚ್ಚಲ್ಲ. ಆಸ್ತಿ ಧಾರಾಳವಿದೆ; ನಗದು ಹಣವೂ ಇದೆ. ತನ್ನ ಮುದ್ದುಗುವರಿ ಶಾರದೆಗೆ ಇದಕ್ಕಿಂತ ಯೋಗ್ಯ ಮನೆಯು ತಪಸ್ಸುಮಾಡಿದರೂ ಸಿಗದು ಎಂದು ಮದುವೆ ಮಾಡಿದರು.

"ಹುಡುಗಿಗೆ ಸಣ್ಣ ಪ್ರಾಯ; ಅಷ್ಟು ದೂರ ನಡೆದು ಹೋಗಿ ಬರುವುದಕ್ಕೆ ಅಸಾಧ್ಯ. ಈಗೇನು ಅವಸರ? ಕೆಲವು ಕಾಲ ಇಲ್ಲೇ ಇರಲಿ" ಎಂದು ಗಂಡನು ಹೇಳಿದುದರಿಂದ ಶಾರದೆ ಶಾಸ್ತ್ರಿಗಳಲ್ಲೇ ಉಳಿದಳು. ವರ್ಷಕ್ಕೊಮ್ಮೆಯೋ ಎರಡು ಬಾರಿಯೋ ಅವಳು ತಂದೆಯೊಡನೆಯೇ ಗಂಡನ ಮನೆಗೆ ಹೋಗಿ ಹಿಂದೆ ಬರುತ್ತಿದ್ದಳು. ಗಂಡನೆಂದರೇನು? ಏಕೆ? ಎಂದು ಅವಳರಿಯಳು. ಹಿರಿಯರ ಹೇಳಿಕೆಯಂತೆ ಆತನನ್ನು ಬಹುವಚನದಿಂದ ಸಂಬೋಧಿಸುತ್ತಿದ್ದಳು. ಅಷ್ಟೇ ಅವಳಿಗೆ ಗೊತ್ತು.

ಮೂರು ವರ್ಷದ ಮೇಲೆ ಒಂದು ಸುಂದರವಾದ ಮುಂಜಾನೆ "ನಿನ್ನ ಹೆಂಡತಿ ಪ್ರಾಯಭರಿತೆಯಾದಳು" ಎಂಬ ಒಸಗೆಯನ್ನೊಯ್ಯುವುದಕ್ಕೆ "ಹೂಕಟ್ಟಿ"ಯೊಡನೆ ಶಾಸ್ತ್ರಿಗಳು ಹೊರಟರು. ಶಾರದೆ ಋತುಮತಿಯಾಗಿದ್ದಳು; ಯೌವನದ ಮೆಟ್ಟಲನ್ನೇರತೊಡಗಿದ್ದಳು. ನೆಲದಲ್ಲೇ ಹರಿದಾಡುತ್ತಿದ್ದ ದುಂಡುಮಲ್ಲಿಗೆಯ ಬಳ್ಳಿ ಮೇಲೇರಿ ಹೂಬಿಡುವುದಕ್ಕಾಗಿ ಆಧಾರವನ್ನು ಹುಡುಕುತ್ತಿತ್ತು. ಆದರೆ "ಮುದ್ದುಗುವರಿ ವಿಧವೆಯಾದಳು; ಕೆಲವೇ ದಿನಗಳ ಜ್ವರದಿಂದ ಅಳಿಯ ಭೀಮುಭಟ್ಟರು ತೀರಿಕೊಂಡರು" ಎಂಬ ಸುದ್ದಿಯನ್ನು ಅರ್ಧದಾರಿಯಲ್ಲೇ ತಿಳಿದು ಶಾಸ್ತ್ರಿಗಳು ಚಿಂತೆಯಿಂದ ಕಪ್ಪಾದ ಮುಖವನ್ನು ಹೊತ್ತುಕೊಂಡು ಮನೆಗೆ ಮರಳಿದರು. ಆಗ ಮನಸ್ಸಿನಲ್ಲಿ "ಅವಳ ಯೋಗ್ಯತೆಯೇ ಅಷ್ಟು......ಯುವಕನಿಗೆ ಕೊಟ್ಟಿದ್ದರೂ ವಿಧವೆಯಾಗಬಾರದೆಂದಿಲ್ಲ....ವಿಧವೆಯಾದರೂ ಅವಳು 'ಪುಣ್ಯಾತ್ಮಗಿತ್ತಿ' ಅಷ್ಟು ಸಂಪತ್ತಿಗೆ ಅವಳೊಬ್ಬಳೇ ಅಧಿಕಾರಿಣಿ" ಎಂಬ ಯೋಚನೆಯ ನಕ್ಷತ್ರಗಳು ಮಿನುಗಿ, ಚಿಂತೆಯ ಇರುಳನ್ನು ದೂರ ಮಾಡಲು ಹೆಣಗುತ್ತಿದ್ದುವು. ಶಾರದೆಗೆ ಈ ಸುದ್ದಿಯಿಂದ ಯಾವ ಪರಿಣಾಮವೂ ಆಗಲಿಲ್ಲ.

ದಿನಗಳುರುಳಿದಂತೆ ಶಾರದೆಯ ಮನೆಯವರಿಗೆ ಈ ಬೇಸರವು ಕಡಮೆಯಾಗುತ್ತಾ ಬಂತು. ಶಾಸ್ತ್ರಿಗಳಿಗೆ, ಬೇರೆ ತಾಪತ್ರಯಗಳೇನೆಯಲ್ಲ, ಈ ಬೇಸರಕ್ಕೆ ಅವಕಾಶವೇ ಉಳಿಯಲಿಲ್ಲ. ಆದರೂ ಭೀಮುಭಟ್ಟರ ಆಸ್ತಿಯನ್ನೆಲ್ಲಾ ಶಾರದೆಯ ಹೆಸರಲ್ಲಿ ಸ್ವಾಧೀನಪಡಿಸಿ ಅದನ್ನೆಲ್ಲ ಗೇಣಿಗೆ ಕೊಟ್ಟು ವ್ಯವಸ್ಥೆಗೊಳಿಸಲು ಮರೆಯಲಿಲ್ಲ. ಆ ಸಂಪತ್ತೆಲ್ಲಾ ಇವರ

ಸ್ವಾಧೀನವೇ ಆದುದು ಹೆಚ್ಚಿನ ಸಂತೋಷಕ್ಕೆ ಕಾರಣವಾಯಿತು. ಉಳಿದ ದಿನಗಳಲ್ಲಿ ವೈದಿಕನೆಂದು ಅಲ್ಲಿ ಇಲ್ಲಿ ಸುತ್ತಾಡುತ್ತಿದ್ದರು. ಮನೆಯಲ್ಲೇ ಇದ್ದ ದಿನಗಳಲ್ಲಿ ಅಲ್ಲಿಗೆ ಬರುತ್ತಿದ್ದ ಹುಡುಗರಿಗೆ ಪಾಠಹೇಳಿಸುತ್ತಿದ್ದರು. ನಾರಾಯಣನೂ ಪಾಠಕ್ಕೆ ಬರುತ್ತಿದ್ದ; ತಿಳಿದವನಾದುದರಿಂದ, ಹೊಸಹೊಸ ವಿಷಯವಾಗಿ ಚರ್ಚಿಸುತ್ತಿದ್ದ. ಮನೆಯವರಂತೆಯೇ ಆಗಿ, ಶಾಸ್ತ್ರಿಗಳ ಮೆಚ್ಚಿನವನೂ ಆಗಿದ್ದ.

ಶಾರದೆ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದಳು. ಸೌಂದರ್ಯವು ತುಂಬಿ ತುಳುಕಿ ಹೊರಸೂಸುತ್ತಿತ್ತು; ಎಲ್ಲರಿಗೂ ಮತ್ಸರವನ್ನುಂಟು ಮಾಡುತ್ತಿತ್ತು. ಶಾಸ್ತ್ರಿಗಳು ತಾನು ಇಂತಹ ಸುಂದರಿಯ ತಂದೆಯೆಂದು ಅಭಿಮಾನಪಡುತ್ತಿದ್ದರು. ಅವಳ ಮನೆನಡೆಸುವ ರೀತಿ ತಾಯಿಗೂ ತೃಪ್ತಿಯನ್ನುಂಟುಮಾಡಿತ್ತು. ಆದರೇನು? ಅವಳು ಹಾಳೂರಿನ ಕೆರೆಯಲ್ಲಿ ಅರಳಿದ ಕಮಲ; ವಿಧವೆ; ಯಾವುದಕ್ಕೂ ಬೇಡದವಳು. ಸಾಲದುದಕ್ಕೆ ವೈದಿಕರ ಮಗಳಾಗಿದ್ದುದರಿಂದ ವಿಧವೆಯ ವೇಷಧಾರಣೆಮಾಡಬೇಕಾಗಿತ್ತು. ಶಾಸ್ತ್ರಿಗಳೂ ಹಾಗೆಯೇ ಭಾವಿಸಿದ್ದರು. ಆದರೆ ಈ ಸುಂದರ ಪುಷ್ಪವನ್ನು ಹಿಡಿದೊಗೆಯುವುದು ತರವಲ್ಲವೆಂದು ನಾರಾಯಣನ ಮನಸ್ಸಿಗೆ ಕಂಡು, "ಬೇಡಪ್ಪ, ಇನ್ನೂ ಬಾಲಿಕೆ; ಕೆಲವು ವರ್ಷ ಕಳೆಯಲಿ. ಆ ಮೇಲೆ ಬೇಕಾದಂತೆ ಮಾಡಿರಿ. ಈಗ ಅವಳ ಮನಸ್ಸಿಗೆ ಬಂದಂತೆ ಮಾಡಲಿ. ಮೊದಲೇ ಗಂಡ ತೀರಿದ ದುಃಖವಿದೆ; ಅದರ ಮೇಲೆ ಈ ಕುರೂಪವನ್ನು ತೋರಿಸುವ ದುಃಖವನ್ನು ಹೊರಿಸಬೇಡಿರಿ." ಎಂದು ಶಾಸ್ತ್ರಿಗಳನ್ನು ಸಮಾಧಾನಪಡಿಸಿದನು. ನಾರಾಯಣನ ಮಾತನ್ನು ಶಾಸ್ತ್ರಿಗಳು ತೆಗೆದುಹಾಕಲಿಲ್ಲ. ಇದರಿಂದ ಶಾರದೆಗೆ ನಾರಾಯಣನೇ ಈ ವಿಪತ್ತಿನಿಂದ ತನ್ನನ್ನು ಪಾರುಮಾಡಿದವನೆಂಬ ಅಭಿಮಾನವುಂಟಾಯಿತು. ಈ ಸೌಂದರ್ಯರಾಶಿಯು ಹೀಗೆಯೇ ಉಳಿಯುವಂತಾಯಿತಲ್ಲ ಎಂಬ ಸಂತಸವು ನಾರಾಯಣನಿಗೂ ಆಯಿತು.

ಶಾರದೆ ಬಿಡುವಿನ ಕಾಲದಲ್ಲಿ ನೆರೆಮನೆಯ ಸೀತಾಬಾಯಿ ಟೀಚರಲ್ಲಿಗೆ ಹೋಗಿ ಹಿಂದೀ ಅಭ್ಯಾಸಮಾಡತೊಡಗಿದಳು. ಜೊತೆಯಲ್ಲೇ ಕಸೂತಿಯನ್ನೂ ಕಲಿತಳು. ಒಂದೆರಡು ವರ್ಷಗಳಲ್ಲಿ ಅವಳು ಹಿಂದಿಯಲ್ಲಿ

ಸಾಕಷ್ಟು ಜ್ಞಾನವನ್ನು ಪಡೆದಳು. ಸಂಸ್ಕೃತದಲ್ಲಿ ಹಿಡಿತವೂ ಇದೆ. ಮೊದಲೇ ಸುಂದರಿ; ಜೊತೆಗೆ ವಿದ್ಯಾವತಿಯೂ ಎನಿಸಿದಳು.

ನಾರಾಯಣನು ಯೋಗ್ಯ ಹುಡುಗ; ವಿದ್ಯಾವಂತ. ಪ್ರತಿಯೊಂದನ್ನೂ ಚಿಕಿತ್ಸಕ ಬುದ್ಧಿಯಿಂದ ತೂಗಿ ನೋಡುವುದು ಅವನ ಪ್ರಕೃತಿಯಾಗಿತ್ತು. ಆದುದರಿಂದ ಹಳೆಯ ರೀತಿಗಳನ್ನು ಅಕ್ಷರಶಃ ಆಚರಿಸುವವನಲ್ಲ. ಆದರೆ ಅವಶ್ಯವಾದ ಕಾರ್ಯದಲ್ಲಿ ತತ್ಪರನೂ ಆಗಿದ್ದನು. ಹಾಗಾಗಿ ಊರಿಗೆ ಹೇಳುವವನಾಗಿದ್ದನು. ಅವನಿಗೆ ಸುಧಾರಣೆಯನ್ನು ಬಳಕೆಗೆ ತರುವುದು ಕಷ್ಟವಲ್ಲದಂತಿತ್ತು. ಶಾರದೆಯನ್ನು ಕಂಡಾಗ, ಆಕರ್ಷಕವಾದ ಅವಳ ಯೌವನ, ತನ್ನಂತಹ ಯುವಕನನ್ನು ತಣಿಸಬೇಕಾಗಿದ್ದ ಅವಳ ರೂಪ, ಆದರ್ಶ ಗೃಹಿಣಿಯಾಗಬೇಕಾಗಿದ್ದ ಅವಳ ಚುರುಕಾದ ಬುದ್ಧಿಶಕ್ತಿ ವ್ಯರ್ಥವಾಯಿತಲ್ಲ ಎಂಬ ಕೊರಗು ಅವನಿಗೆ ಹಿಡಿಯಿತು. ಗಂಡನೆಂದರೆ ಏನೆಂದರಿಯುವ ಮೊದಲೇ ವಿಧವೆಯಾಗುವವರಿಗೆ ಏಕೆ ಮತ್ತೊಂದು ಮದುವೆಯಾಗಬಾರದು? ಧರ್ಮಶಾಸ್ತ್ರ ಬರೆಯುವಾಗ ಆ ನಿಬಂಧನೆಯನ್ನು ಯಾಕೆ ಸೇರಿಸಿಲ್ಲ? ಎಂದು ಯೋಚಿಸಿದನು. ಏನಾದರೂ ಒಂದಿಷ್ಟು ಎಡೆಯಿದೆಯೇ ಎಂದು ಶಾಸ್ತ್ರಗಳನ್ನು ಮಗುಚಿ ನೋಡಿದನು. ಅವನಿಗೆ ಬೇಕಾದ ವಿಷಯವು ಅವನಿಗೆ ದೊರೆತರೂ ಅದನ್ನು ಹಿಡಿದುಕೊಂಡು ಸಮಾಜವನ್ನೇ ಅಡಿಮೇಲು ಮಾಡುವಂತಹ ಆಧಾರವದಲ್ಲ. ಇದೇ ವಿಷಯವಾಗಿ ಶಾಸ್ತ್ರಿಗಳೊಡನೆ ವಾದಿಸಿದಾಗಲೂ ಅವನ ಅಭಿಪ್ರಾಯಕ್ಕೆ ಪುರಸ್ಕಾರ ದೊರೆಯಲಿಲ್ಲ. ಇನ್ನು ಈ ರೀತಿ ಹೋದರೆ ಆಗದೆಂದು ತಿಳಿದು ಅವನು, "ಶಾಸ್ತ್ರಿಗಳೇ, ಅದೆಲ್ಲಾ ಸರಿ. ಆದರೆ ಶಾಸ್ತ್ರದ ನಿಯಮಕ್ಕೆ ಮನುಷ್ಯನ ಆಸೆಗಳು ಕಮರುವುವೇ? ಕಾಮವು ದೇಹದ ಸಹಜಕ್ರಿಯೆಯಲ್ಲವೆ? ಪ್ರಕೃತ ಅದರ ವಿರುದ್ಧವಾಗಿ ಹೋರಾಡುವುದು ದುಸ್ಸಾಧ್ಯವೇ ಸರಿ. ಕೆಲವರು, ಒಂದು ವೇಳೆ, ಮುಂದಿನ ಸುಕೃತಕ್ಕಾಗಿ ಶೇಷಾಯುಷ್ಯವನ್ನು, ವಿರಕ್ತರಾಗಿಯೇ ಕಳೆದಾರು. ಆದರೆ ಅದು ಎಲ್ಲರಿಂದಲೂ ಸಾಧ್ಯವಲ್ಲ. ಅದೂ ಈಗಿನ ಕಾಲದಲ್ಲಿ ಸರ್ವಥಾ ಅಸಾಧ್ಯ. ಸರಿಯಾದ ದಾರಿಯಲ್ಲಿ ಅಡ್ಡಿಯಾದರೆ, ಹರಿಯುವ ನೀರು ಅಡ್ಡದಾರಿ ಹಿಡಿಯುವುದು ಸರಿಯಷ್ಟೆ! ಅದರಂತೆಯೇ ಮನಸ್ಸೂ ಅಡ್ಡ

ದಾರಿಯನ್ನು ಹಿಡಿದರೆ ಅದು ಕಳಂಕವಲ್ಲವೆ? ನಾನು ಕೇಳಿದ ಸುದ್ದಿಯಂತೆ, ಕೆಲವರು ಗಾಳಿಗೆ ಗರ್ಭಿಣಿಯರಾದ ದೃಷ್ಟಾಂತವಿದೆ; ಅದರೊಂದಿಗೆ ಕೆಲವರು ಗರ್ಭಪಾತಮಾಡಿಕೊಂಡ ದೃಷ್ಟಾಂತವೂ ಇದೆ. ಇದೆಲ್ಲಾ ಸಮಾಜಕ್ಕೆ ಯೋಗ್ಯವೇ? ಹೀಗಿರುವಾಗ ತೆರೆಯ ಮರೆಯಲ್ಲಿ ನಡೆಯುವ ಕಪಟನಾಟಕವು ಪ್ರಕಟವಾಗಿಯೇ ಆದರೆ ತಪ್ಪೇನು?" ಎಂದು ಚರ್ಚಿಸಿದ್ದನು. ಆದರೂ ಇಷ್ಟು ಬೇಗನೆ ಸಮಾಜದ ರೀತಿ ಬದಲಾಗುವಂತೆಯೂ ತೋರಲಿಲ್ಲ. ಈ ಮಾತುಗಳನ್ನು ಶಾರದೆಯೂ ಕೇಳಿದ್ದಳು; ಸ್ವಾಭಾವಿಕವಾಗಿ ನಾರಾಯಣನ ಮೇಲೆ ಅವಳ ಅಭಿಮಾನ ಮತ್ತಷ್ಟು ಹೆಚ್ಚಿತು. ಏನೋ ಒಂದು ಬಗೆಯ ಸವಿಯಾದ ಅನುಭವವು ಮನಸ್ಸಿಗುಂಟಾಗುತ್ತಿತ್ತು. ಆದರೆ ನಾರಾಯಣನ ವಾದವನ್ನು ಕಟು ವಿರೋಧವಾಗಿ ಖಂಡಿಸುತ್ತಿದ್ದ ತಂದೆಯ ನುಡಿಕೇಳಿ, ಅವಳ ಭಾವನೆಗಳೆಲ್ಲಾ ಮಾಯವಾಗುತ್ತಿದ್ದುವು. ತಾನು ಬಿದ್ದ ಈ ಬಾವಿ ಬಹಳ ಆಳವಾದುದು; ಇದರಿಂದ ಮೇಲೇರುವ ಆಸೆಯೇ ಇಲ್ಲವೆಂದು ನೆಗಹಿದ ಕೈಗಳನ್ನು ಕೆಳಹಾಕುತ್ತಿದ್ದಳು.

X

ಒಂದು ದಿನ ಆಕಾಶವೇ ಹರಿದು ಬಿತ್ತು ಎಂಬಂತೆ ಶಾರದೆ ಬಸುರಿ ಎಂಬ ಸುದ್ದಿ ಮೆಲ್ಲನೆ, ಹೆಂಡತಿಯಿಂದ ಶಾಸ್ತ್ರಿಗಳ ಕಿವಿಗೆ ಬಿತ್ತು. ಅವರು ಕಿಡಿಕಿಡಿಯಾಗಿ "ಅಯ್ಯೋ ರಂಡೆ, ಹೀಗೆ ಮಾಡಿದಳೇ?" ಎಂದು ಅವಳ ಮೇಲೆ ಹಲ್ಲು ಕಡಿದರು. ಯಾವುದಕ್ಕೂ ಮೊದಲು ಮಾಡಬೇಕಾದ ಕೆಲಸವನ್ನು ಹಳ್ಳಿಯ ಹಳೆಮುದುಕಿಯರಿಂದ ಮಾಡಿಸಿದರು. ಆದರೆ ಪ್ರಕೃತಿ ಅವರಿಗೆ ಪ್ರತಿಕೂಲವಾಗಿತ್ತು: ಬಸಿರು ಬಳೆಯುತ್ತಾ ಬಂತು. "ಶಾರದೆಗೇನು?" ಎಂದು ಕೇಳಿದವರೊಡನೆ "ಏನೋ ಸೌಖ್ಯವಿಲ್ಲ. ಹೊಟ್ಟೆಯೊಳಗೊಂದು ಕುರವಂತೆ" ಎಂದು ಸಮಾಧಾನದ ಉತ್ತರ ಕೊಡುತ್ತಿದ್ದರು. ಆದರೂ ಶಾರದೆ ಬಸುರಿ ಎಂಬ ವಾರ್ತೆ ಸಮಾಜದಲ್ಲಿ ಮೆಲ್ಲಮೆಲ್ಲನೆ ದುರ್ಗಂಧದಂತೆ ಹರಡತೊಡಗಿತು. ಇಷ್ಟಕ್ಕೂ ಸಮಾಜಕ್ಕೇ ಹೇಳುವವರಾದ ಶಾಸ್ತ್ರಿಗಳ ಮಗಳೇ ಬಸುರಿ ಎಂಬುದು ಬರಿ ನಾಚಿಕೆ. ಸಾಮಾಜಿಕರೂ ಕ್ರಮೇಣ "ಶಾಸ್ತ್ರಿಗಳೇ, ಹೀಗೊಂದು

ವರ್ತಮಾನವೇಳುತ್ತದೆ; ಇದೇನೋ ನಾವರಿಯೆವು. ಹೌದೆಂದಾದರೆ ಬೇಗನೆ ಅವಳನ್ನು ಮನೆಯಿಂದ ಹೊರಡಿಸಬೇಕು; ಅಥವಾ ನೀವೇ ಬಹಿಷ್ಕಾರಕ್ಕೆ ಒಳಗಾಗಬೇಕು" ಎಂದು ಒತ್ತಾಯಪಡಿಸತೊಡಗಿದರು. ಕೊನೆಗೆ, ಯಾವ ಉಪಾಯವೂ ಕಾಣದೆ, ಊರಿಂದ ಬಹುದೂರ, ಸ್ವಜಾತಿಯವರೇ ಇಲ್ಲದ ಕಡೆಯಲ್ಲಿ, ಒಂದು ಗುಡಿಸಲಲ್ಲಿ ಶಾರದೆಯನ್ನು ಬಿಟ್ಟರು. ಧೂರ್ತ ಶಾಸ್ತ್ರಿಗಳು ಅವಳನ್ನು ಅಲ್ಲಿಗೆ ಕಳುಹಿಸುವ ಮುನ್ನ, ಅವಳ ಹೆಸರಲ್ಲಿದ್ದ ಆಸ್ತಿಯನ್ನು, ಉಪಾಯವಾಗಿ ತನ್ನ ಹೆಸರಿಗೆ ಮಾಡಿಸಿಕೊಂಡುಬಿಟ್ಟರು. ಈಗ ತನ್ನ ಹೊಟ್ಟೆಯ ಮಗಳನ್ನು ಏನೂ ಇಲ್ಲದೆ ಅಲ್ಲಿ ಇಟ್ಟಿರುವುದಕ್ಕೆ ಮನಸ್ಸೊಪ್ಪದೆ ಇನ್ನೂರು ರೂಪಾಯಿಗಳನ್ನು ಅವಳ ಕೈಗಿತ್ತು "ನಿನ್ನನ್ನು ಒಳ್ಳೇ ಸಂಪತ್ತಿರುವ ವರನಿಗೆ ಕೊಟ್ಟರೂ, ನಿನ್ನ ಹಣೇಬರಹವು ನಿನ್ನನ್ನು ಈ ದುಸ್ಥಿತಿಗಿಳಿಸಿತು. ಪ್ರಪಂಚದಲ್ಲಿ ನೀನೊಬ್ಬಳೇ ಪತಿವಿಹೀನೆಯೆ? ಎಷ್ಟೋ ಜನರಿರುವರು. ಅವರೆಲ್ಲರೂ ನಿನ್ನಂತೆಯೇ ಹಾದರಗಿತ್ತಿಯರಲ್ಲ. ನಿನಗೂ ಮರ್ಯಾದೆಯಲ್ಲಿರಬಹುದಿತ್ತು. ಆದರೇನು, ಸೊಕ್ಕು ಬಿಡಲಿಲ್ಲ. ನೀನು ಯಾರಿಂದ ಬಸುರಾದೆಯೋ, ಈಗ ಅವರನ್ನೇ ಬೆನ್ನು ಹಿಡಿ" ಎಂದು ಆಶೀರ್ವದಿಸಿದರು.

೩

ರಮಾದೇವಿಯ ಅಳಿವಾಗಿ ಅನೇಕ ದಿನಗಳುರುಳಿದರೂ ಶಂಕರರಾಯರ ಮನಸ್ಸು ಯಥಾಸ್ಥಿತಿಗೆ ಬರಲೇ ಇಲ್ಲ. ಯಾವುದರಲ್ಲೂ ಆಸಕ್ತಿ ಇಲ್ಲ; ಪ್ರತಿಯೊಂದರಲ್ಲೂ ಬೇಸರ. ಅವರ ಸಾರ್ವಜನಿಕ ಕಾರ್ಯಗಳೂ ಹಿಂದುಳಿದುವು. ಹೋದರೆ ಹೋಗುವವರೇ ಕುಳಿತರೆ ಕುಳಿತೇ ಇರುವರು. ಯಾರೊಡನೆಯೂ ಮಾತಿಲ್ಲ, ಕತೆಯಿಲ್ಲ; ಮರಬಿಟ್ಟ ಮಂಗನಂತಾದರು. ರಮೆಯ ವಿಯೋಗ ವ್ಯಥೆಗಿಂತಲೂ ಭರತನ ಸಂಕಟವು ಅವರಿಗೆ ಹೆಚ್ಚು ಅಸಹ್ಯವಾಗಿತ್ತು. ಇವನ ದುಃಖವನ್ನು ಹೇಗೆ ದೂರಮಾಡಲಿ ಎಂಬ ಪ್ರಶ್ನೆಯೇ ಅವರ ತಲೆ ತಿನ್ನುತ್ತಿತ್ತು. ಓರಗೆಯ ಹುಡುಗರೊಡನೆ ಆಡುವಾಗ ಯಾವ ಚಿಂತೆಯೂ ಇಲ್ಲವೆ ಭರತನಿರು

ತ್ತಿದ್ದನು. ಸಂಜೆ ಅವರೆಲ್ಲಾ ಮನೆಗೆ ಹೋದ ಮೇಲೆ ಭರತನ ಬೇಸರ ಹೇಳತೀರದು; ಚಂಡಿ ಹಿಡಿದು ಅಳುತ್ತಿದ್ದನು. ಇದಕ್ಕೆಲ್ಲಾ ಏನುಪಾಯ? ಅಮ್ಮಾ ಎಂದು ಅಳುವ ಆತನಿಗೆ, ಚಿಕ್ಕತಾಯಿಯನ್ನು ತಂದರೆ ಸಮಾಧಾನವಾಗಬಹುದೇ? ಮಲತಾಯಿ ನೋಡಿದರೆ ಇಷ್ಟೇ ನೋಡಿಯಾಳೆಂದು ಲೋಕಪ್ರಸಿದ್ಧಿಯಿದೆ; ಎಂದ ಮೇಲೆ ಅದರಿಂದ ಭರತನಿಗೇನೂ ಸುಖ ಸಿಗಲಾರದು. ಒಂದು ವೇಳೆ ಬಂದವಳು ಸದ್ಯ ಹೊಂದಿಸಿಕೊಂಡು ಹೋದರೂ, ಅವಳಿಗೊಂದು ಮಗುವಾದರೆ ಖಂಡಿತ ಹಾಗೆ ನೋಡಲಾರಳು. ಹಾಗಿದ್ದರೆ ಆ ಆಸೆಯನ್ನು ಬಿಡುವುದೇ ಲೇಸು. ಭರತನಂತೆ ದುಃಖಪೀಡಿತಬಾಲಕಬಾಲಿಕೆಯರು ಜಗತ್ತಿನಲ್ಲೆಷ್ಟು ಮಂದಿ ಇರಲಾರರು! ಮಕ್ಕಳಿಗೆ ಉಣ್ಣಲಿಕ್ಕಿಲ್ಲವಾದರೂ ತೃಪ್ತರಾದಾರು, ತಾಯಿಯಿಲ್ಲದೆ ಎಂದೂ ತೃಪ್ತಿಯನ್ನು ಪಡೆಯಲಾರರು. ಅಯ್ಯೋ ದೇವರು ಇಂತಹ ಅನ್ಯಾಯವನ್ನು ಏಕೆ ಮಾಡುವನಪ್ಪಾ! ಎಂಬ ಆಲೋಚನಾತರಂಗಗಳು ಅವನ ಹೃದಯದಲ್ಲಿ ಏಳುತ್ತಲೇ ಇದ್ದವು.

ರಮೆಯು ಸತ್ತು ಸ್ವರ್ಗದಲ್ಲಿ ಸುಖವಾಗಿರಬಹುದು. ಆದರೆ ಶಂಕರರಾಯರು ದಿನಕ್ಕೆ ಹಲವು ಬಾರಿ ಸಾಯುತ್ತಿರುವರು. ಇದರಿಂದ ತಾವೇ ಒಮ್ಮೆಗೆ ಸತ್ತುಹೋದರೆ ಲೇಸೆಂದು ಅವರಿಗೆ ಕಾಣುತ್ತಿತ್ತು. ಒಮ್ಮೊಮ್ಮೆ ಈ ದುಃಖೀ ಬಾಲಕರ ರಕ್ಷಣೆಗೆ, ಆದಷ್ಟು ಅವರಿಗೆ ಸುಖವೀಯುವುದಕ್ಕೆ, ತನ್ನ ಭರತನಿಗೂ ವಿಹರಿಸುವುಕ್ಕೆ ಅನುಕೂಲವಾದ ಬಾಲಾಶ್ರಮವೊಂದನ್ನು ತೆರೆದರೆ ಹೇಗಾದೀತು?.....ಆಗಬಹುದು. ಅಲ್ಲಿ ಭರತನು ಬಾಲಕರೊಡನೆ ಆಡುತ್ತಾ ಯಾವ ಚಿಂತೆಯೂ ಇಲ್ಲದೆ ಇರಬಹುದು. ತಾನು ಹುಟ್ಟಿದ್ದಕ್ಕೆ ಸಾರ್ಥಕವಾದ ಕೆಲಸ ಮಾಡಿದಂತೆಯೂ ಆಯಿತು; ಅನಾಥ ಬಾಲಕರಿಗೆ ಆಶ್ರಯವೂ ಆಯಿತು ಎಂದೂ ಆಲೋಚಿಸುತ್ತಿದ್ದರು. ಮೊದಲೇ ಸಾರ್ವಜನಿಕ ಕಾರ್ಯಗಳ ಪ್ರೋತ್ಸಾಹಕರಾದ ಶಂಕರರಾಯರ ಮನಸ್ಸು ಆ ಕಡೆಗೆ ಹರಿದುದು ಸಹಜ. ಆದರೆ ಇದು ತನ್ನ ಮರುಳು ಯತ್ನ ಆಗಬಾರದಲ್ಲ; ಊರವರ ದೃಷ್ಟಿ ಈ ವಿಷಯದಲ್ಲಿ ಹೇಗಿರುವುದೋ? ಪ್ರಪಂಚದ ದುಃಖಪೀಡಿತ ಬಾಲಕರೆಲ್ಲರ ಚಿಂತೆಯನ್ನು ತನ್ನಿಂದ ದೂರಮಾಡಲು ಸಾಧ್ಯವಾದೀತೆ? ಎಂಬ ಪ್ರಶ್ನೆಗಳು ಅವರೆದುರು

ಸಿಂತುವು. ಹೇಗೂ ಇರಲಿ; ಯತ್ನಿಸಿ ನೋಡೋಣ. ಸ್ನೇಹಿತರೆದುರು ಈ ಪ್ರಶ್ನೆಯಿಡೋಣ ಎಂದು ನಿರ್ಧರಿಸಿದರು.

ಪುನಃ ಯೋಚನೆಗಳ ತಿಕ್ಕಾಟ: ಇದರಿಂದ ಭರತನ ದುಃಖವು ದೂರ ವಾದೀತೆ? ಆತನ ದುಃಖದೊಡನೆ, ತನ್ನ ಮನಸ್ಸನ್ನೂ ವಿಯೋಗ ವ್ಯಥೆಯು ಹಿಂಡುತ್ತಿದೆ. ಇದನ್ನವರು ಒಮ್ಮೆಗೇ ಗ್ರಹಿಸದಾದರು. ಇವರಿಗರಿಯ ದಂತೆ ವಿಧುರಜೀವನವು ಇವರಿಗೆ ಬೇಸರವನ್ನುಂಟುಮಾಡುತ್ತಿತ್ತು. ಮಲಗುಮನೆಗೆ ಹೋದಾಗ ಹಿಂದಿನ ಸರಸಜೀವನದ ನೆನಪಾಗುತ್ತಿತ್ತು. ಅಲ್ಲಿ ತಾನೂ ರಮೆಯೂ ಕೂಡಿದ ಆಳಿದ ಪ್ರೇಮಸಾಮ್ರಾಜ್ಯದ ಅವಶೇಷ ಗಳು ಕಾಣುತ್ತಿದ್ದುವು. ಉಣ್ಣಲು ಹೋದಾಗಲೂ ರಮೆಯ ಚಿತ್ರವೇ ಕಣ್ಣುಕಟ್ಟುತ್ತಿತ್ತು: ತಾಯಿಯಂತೆ, ತನಗೆ ಬೇಕಾದ ತಿಂಡಿತಿನಸುಗಳನ್ನು ಮಾಡಿ, ಪ್ರೇಮದಿಂದ ಮಾತಾಡುತ್ತಾ ಬಡಿಸುತ್ತಿದ್ದ ಅವಳ ನೆನಪಾಗು ತ್ತಿತ್ತು. ಈಗ ಅವಳ ಬದಲಿಗೆ ದಡಬಡನೆ ಏನೋ ಮಾಡಿ, ಏನೋ, ಏಕೋ, ಬಡಬಡಿಸುತ್ತಿದ್ದ ಅಡಿಗೆಯ ಹೆಂಗುಸು ಅಲ್ಲಿದ್ದಳು. ಅವರು ಒಂದಿಷ್ಟು ಉಂಡಂತೆ ಮಾಡಿ, ಬೇಗನೆ ಹೊರ ಹೋಗುತ್ತಿದ್ದರು. ಒಂದು ತಿಂಗಳ ಮೊದಲಿನ ಶಂಕರರಾಯರು ಈಗಲ್ಲ; ಅವರ ಬರಿಯ ಪ್ರತಿರೂಪ ಮಾತ್ರ. ಆ ನಗುಮೊಗ, ಆ ಕಾಂತಿಯುಕ್ತವಾದ ಕಣ್ಣುಗಳು ಈಗ ಇಲ್ಲವೇ ಇಲ್ಲ. ಅವರ ಸರಸಜೀವನವು ಸಂಪೂರ್ಣ ನಷ್ಟವಾಗಿ ಹೋಯಿತು; ರಮೆಯ ದೇಹದೊಂದಿಗೆ ಅದೂ ಹೋಯಿತು.

೪

ಶಾರದೆ ಈಗ ಏಕಾಂಗಿ. ಅವಳಿಗೀಗ ಸಮಾಜದ ನಿಷ್ಠುರತೆಯು ಅರಿ ವಾಗತೊಡಗಿತು. ಮೇಲಿನಿಂದ ನೋಡುವಾಗ ಮನೋರಂಜಕವಾಗಿ ದ್ದರೂ ಅದರೊಳಗೆ ಜ್ವಾಲಾಮುಖಿಯು ಹುದುಗಿದೆ ಎಂದು ಈಗ ತೋರ ತೊಡಗಿತು. ತನಗೆ ಮದುವೆಯಾಗಿದೆಯಂತೆ; ಅದು ಅವಳಿಗರಿಯದು. ತಂದೆತಾಯ್ಗಳು ನಿನಗೆ ವಿವಾಹವಾಗಿದೆಯೆಂದು ಹೇಳಿ ಮಾತ್ರ ಗೊತ್ತು. ಬತ್ತಿದ ಗಲ್ಲದ ಅರೆಮುದುಕನೊಬ್ಬನನ್ನು ತೋರಿಸಿ ಅವನೇ ನಿನ್ನ ಗಂಡ ನೆಂದು ಹೇಳಿದುದು ಮಾತ್ರ ಗೊತ್ತು. ಮತ್ತೆ ಕೆಲವು ದಿನಗಳ ಮೇಲೆ

"ನಿನ್ನ ಗಂಡ ಸತ್ತು ಹೋದರು" ಎಂದು ಹೇಳಿದುದೂ ಗೊತ್ತು. ಇದರಿಂದ ಹೆಚ್ಚು ಅವಳಿಗೆ ಏನೂ ತೋರಲಿಲ್ಲ. ಗಂಡನೆಂದರೆ ಏನೆಂದು ತೋರುವ ಮೊದಲೇ ಗಂಡನಿಲ್ಲವೆಂದಾದರೆ ಯಾವ ಪರಿಣಾಮವಾಗಬಹುದು? ಎಲ್ಲಾ ಹುಡುಗಿಯರಂತೆ ತಾನು ಕೂಡ ಭವಿಷ್ಯ ಜೀವನದ ಸುಂದರ ಲೋಕವನ್ನು ಕಾಣುತ್ತಿದ್ದಳು. ಎಲ್ಲರಂತೆ ತಾನೂ ಹರಿಣದಂತೆ ಹಾರಾಡುತ್ತಿದ್ದಳು. ನೀಳವಾದ ಕೇಶರಾಶಿಯನ್ನು ಬಾಚಿ, ಹೂಮುಡಿದು ಅಲಂಕರಿಸಿಕೊಳ್ಳುತ್ತಿದ್ದಳು. ಯಾವ ಸೀರೆ ತನಗೆ ಒಪ್ಪುವುದೆಂದು ಆರಿಸಿ ಉಟ್ಟುಕೊಳ್ಳುತ್ತಿದ್ದಳು. ಆದರೆ ಒಂದು ದಿನ ತಂದೆಯವರು ತನ್ನ ಕೂದಲನ್ನು ಕತ್ತರಿಸಬೇಕೆಂದಾಗ ಕೆಪ್ಪುಮುಪ್ಪಾದಳು. ಹಾಗೆ ಯಾಕೆಂದು ಅವಳಿಗೆ ತೋರಲಿಲ್ಲ; ತನ್ನ ಪ್ರಾಯದ ಎಲ್ಲಾ ಹುಡುಗಿಯರು ಕೂದಲು ಕತ್ತರಿಸುವುದಿಲ್ಲವಲ್ಲಾ ಎಂದು ತೋರಿತು. "ನೀನು ವಿಧವೆ: ನಿನಗಿನ್ನು ಸಿಂಗರಿಸಿಕೊಳ್ಳುವ ಅಧಿಕಾರವಿಲ್ಲ. ಧರ್ಮಶಾಸ್ತ್ರವು ಆ ಅಧಿಕಾರವನ್ನು ಕೊಟ್ಟಿಲ್ಲ. ನಿನ್ನಂಥವಳು ಸನ್ಯಾಸಿನಿಯಂತಿರಬೇಕೆಂದು ಸಾರಿಹೇಳುತ್ತಿದೆ" ಎಂದು ತಂದೆಯವರು ಹೇಳುವಾಗಲೇ ಅವಳ ಮನಸ್ಸಿನಲ್ಲಿ ಕಾರ್ಮೋಡವು ಕವಿದುದು. ಆಗಲೇ ಜಗತ್ತಿಡೀ ಕತ್ತಲೆಯಲ್ಲಿ ಆವರಿಸಿದಂತೆ ಕಂಡಿತು. ಕೆಲವೇ ಕ್ಷಣಗಳಲ್ಲಿ ಆ ತಿಮಿರವು ನಾರಾಯಣನ ಪ್ರಕಾಶದಿಂದ ಮಾಯವಾಯಿತು. ಆತನೇ ತನ್ನ ತಂದೆಯವರನ್ನು ವಾದದಲ್ಲಿ ಸೋಲಿಸಿ, ತನ್ನನ್ನುದ್ಧರಿಸಿದ ಮಹಾನುಭಾವ: ಅವನ ಮೇಲೆ ಸಹಾನುಭೂತಿಯುಂಟಾಯಿತು. ತನ್ನನ್ನು ಹೆತ್ತು ಸಾಕಿ ಸಲಹಿದ ತಂದೆತಾಯಿಗಳೇ, ಧರ್ಮಶಾಸ್ತ್ರದ ಕುಠಾರದಿಂದ ತನ್ನ ತಲೆ ಕಡಿಯಲು ಯತ್ನಿಸಿದಾಗ, ನಾರಾಯಣನೇ ಸಹಾನುಭೂತಿಯನ್ನು ತೋರಿದವನು. ಪ್ರಪಂಚದಲ್ಲೇ ನವವಿಧಾನವನ್ನು ರಚಿಸುವ ಶಕ್ತಿಯಿರುವವನು ಅವನೊಬ್ಬನೇ......ಮೆಲ್ಲಮೆಲ್ಲನೆ ಅವಳ ಮನಸ್ಸು ಅವನ ಆಕ್ಷದಲ್ಲಿ ಸುಳಿದಾಡತೊಡಗಿತು.

ನಾರಾಯಣನು ಆಗಾಗ ತನ್ನ ತಂದೆಯೊಡನೆ ವಿಧವಾವಿವಾಹದ ಕುರಿತು ಚರ್ಚಿಸುತ್ತಿದ್ದುದನ್ನು ಶಾಂತೆ ಕೇಳಿದ್ದಳು. ಅವನ ಅಭಿಪ್ರಾಯವು ಸರಿಯೆಂದೂ ತೋರುತ್ತಿತ್ತು. ಗಂಡುಸರು ಜೀವನದಲ್ಲಿ ಒಂದಲ್ಲ

ಹಲವು ಮದುವೆಯಾಗಬಹುದಂತೆ. ಇದಕ್ಕೆ ಮಾತ್ರ ಶಾಸ್ತ್ರವನ್ನು ರಚಿಸಿದ ಋಷಿಗಳ ಅಡ್ಡಿಯಿಲ್ಲ; ಆದರೆ ಸ್ತ್ರೀಯರಿಗೆ ಆ ಅಧಿಕಾರ ಕೊಟ್ಟಿಲ್ಲ. ಅವರಿಗೇನು ಇಂದ್ರಿಯಗಳಿಲ್ಲವೇ? ಅವರನ್ನು ಯಂತ್ರದ ಬೊಂಬೆಗಳೆಂದು ತಿಳಿದರೇ? ಅಥವಾ ಗಂಡಸರ ಪಕ್ಷಪಾತಿಗಳಾಗಿ ಬರೆದುದೇ? ಬೇಡ, ಧರ್ಮಶಾಸ್ತ್ರದ ವಿಚಾರ ಹಾಗಿರಲಿ; ಕಳ್ಳಾಟಿಕೆಯಿಂದ ಬಸುರಾಗಿ ಗರ್ಭಪಾತ ಮಾಡಿಸಿಕೊಂಡವರಿಗೆ ಸಮಾಜವೇನೂ ಅನ್ನುವುದಿಲ್ಲ. ಇದಕ್ಕೆ ಬೇಕಿದ್ದರೆ ಶಾಸ್ತ್ರಿಗಳೇ ಪ್ರೋತ್ಸಾಹ ಕೊಡುವರು. ಆದರೆ ಪ್ರಕಟವಾಗಿ ವಿವಾಹವಾದರೆ ಘೋರ ಅನ್ಯಾಯವಂತೆ. "ವಿಧವೆಯರು ಆಜೀವ ಸನ್ಯಾಸಿನಿಯರಾಗಿ ಕಾಲಕಳೆಯುವ ಮಾತು ಎಂದಿಗೂ ಶಕ್ಯವಲ್ಲ; ಇದರಿಂದ ಸಮಾಜದಲ್ಲಿ ಹಬ್ಬುವ ದುಷ್ಟ ವ್ಯವಹಾರವನ್ನು ತಡೆಯುವುದಕ್ಕೆ ಪುನರ್ವಿವಾಹದ ದಾರಿಯನ್ನು ತೆರೆಯೋಣ" ಸಾಧಾರಣವಾದ ನಾರಾಯಣನ ಈ ಮಾತು ವಿಚಾರ ಪಕ್ವವಾಗಿದೆ. "ನಾರಾಯಣ, ನಿನ್ನ ವಿಚಾರವೇನೋ ಸರಿ. ಆದರೆ ಇದನ್ನು ವ್ಯವಹಾರದಲ್ಲಿ ತರುವವರಾರು? ಅಂತಹ ಧೈರ್ಯ ನಿನಗಿದೆಯೇ? ಸಮಾಜವು ನಮ್ಮನ್ನು ಬಹಿಷ್ಕರಿಸಿದರೆ, ಅದಕ್ಕೆ ಎದುರು ನಿಲ್ಲಲು ನಮ್ಮಿಂದ ಸಾಧ್ಯವಿದೆಯೆ? ಇಂತಹ ಸುಧಾರಣೆ ಬರುವ ವರೆಗೆ ಈ ಮಾತು ಸಾಧ್ಯವಿಲ್ಲ. ದೃಷ್ಟಾಂತಕ್ಕಾಗಿ ನಾನು ಶಾರದೆಯ ಪುನರ್ವಿವಾಹವನ್ನು ಮಾಡಿದೆನೆನ್ನೋಣ. ಆಗಲೇ ನನ್ನನ್ನು ಸಮಾಜವು ಬಹಿಷ್ಕರಿಸೀತು. ಆಗ ನಾನು ನನ್ನ ಎರಡನೆಯ ಮಗಳನ್ನು ಯಾರಿಗೆ ಕೊಡಬೇಕು? ಅವಳನ್ನು ಯಾರು ಮದುವೆಯಾದಾರು? ಅವಳಿಗೆ ಸೂಳೆಗೇರಿಯೇ ಗತಿ" ತಂದೆಯವರ ಈ ಮಾತಿನಲ್ಲಿ ಹುರುಳಿಲ್ಲ; ಜಪ್ಪಿಸಿಕೊಳ್ಳುವ ಥಾಟಿ. ನಾರಾಯಣನ ವಾದವೇ ಸರಿ ಎಂದು ಅವಳಿಗನಿಸಿತು. ಆತನ ಮೇಲೆ ಅವಳ ಮನಸ್ಸು ಮತ್ತಷ್ಟು ಜಾಗಿತು. ಆತನ ಮೂರ್ತಿಯೇ ಅವಳ ಕಣ್ಣೆದುರಲ್ಲಿ ಆಗಾಗ ಕುಣಿದಾಡತೊಡಗಿತು ಅವನೇ ಮೊದಲಾಗಿ ಇಂತಹ ಸುಧಾರಣೆಯನ್ನು ತರಬಾರದೇಕೆ? ಅವನಿಗೆ ಮದುವೆಯಾಗಲು ವಿಧವೆಯಾಗಬೇಕಿದ್ದರೆ ತಾಸಿರುವೆನಲ್ಲ ಎಂದು ಮನಸ್ಸು ಹೇಳಿತು.

ಇದೇ ವಿಚಾರದಲ್ಲಿ ದಿನಗಳೆಷ್ಟೋ ಉರುಳಿದುವು. ಘೋರ ಸಂಗ್ರಾಮದಲ್ಲಿ ಅವಳ ಮನಸ್ಸು ಪುಡಿಪುಡಿಯಾಯಿತು. ಈ ವಿಚಾರವಾಗಿ ನಾರಾಯಣನೊಡನೆ ಬಾಯಿಬಿಟ್ಟು ಮಾತಾಡಬೇಕೆಂದು ಭಾವನೆಯುದಿಸಿದರೂ, ಬಾಯಿ ತೆರೆಯುವುದಕ್ಕೆ ಸ್ತ್ರೀ ಸಹಜವಾದ ಲಜ್ಜೆಯು ಬಿಡುತ್ತಿರಲಿಲ್ಲ. ನಾರಾಯಣನ ಮುಖದಲ್ಲಿಯೂ ಅವ್ಯಕ್ತವಾದ ಸಮಸ್ಯೆಯೊಂದು ಎದ್ದು ಕಾಣುತ್ತಿತ್ತು. ಅವನ ಕಣ್ಣುಗಳು ಆಸೆಯನ್ನು ಬೀರುತ್ತಿವೆ. ಅವುಗಳೂ ಹಸಿದಿವೆ. ಇದೆಲ್ಲಾ ಅವಳಿಗೆ ಸ್ಪಷ್ಟ ಕಾಣುತ್ತಿದೆ; ಆದರೆ ಬಾಯಿಯಲ್ಲಿ ಮಾತು ಹೊರಡುವುದಿಲ್ಲ. ಎಷ್ಟೋ ಬಾರಿ ನಾರಾಯಣನನ್ನು ಒಬ್ಬಳೇ ಸಂಧಿಸಿರುವಾಗ, ಅವರಿಬ್ಬರಿಗೂ ಮಾತು ಹೊರಡುತ್ತಿರಲಿಲ್ಲ.

ಒಂದು ಹುಣ್ಣಿಮೆಯ ರಾತ್ರಿ: ಆಗ ತಾನೇ ಚಂದ್ರಮನು ಆಕಾಶದಲ್ಲಿ ತೇಲುತ್ತಾ ಬರುತ್ತಿದ್ದನು. ದಿಗಂತವನ್ನು ಬಿಟ್ಟು ಮೇಲೇರುವ ಮನಸ್ಸಿಲ್ಲ: ದಿಗಂಗನೆಯ ತೋಳ ಸೆರೆಯಲ್ಲಿ ಸುಖವಾಗಿ ನಿದ್ರಿಸುವೆನೆಂದು ಭಾವಿಸುತ್ತಿದ್ದನು. ಆದರೆ ಅವನ ಬೆಳ್ಳಿಯ ರಶ್ಮಿಗಳು ಅವನನ್ನು ಮುಂದೆ ಮುಂದೆ ಎಳೆಯುತ್ತಿದ್ದುವು.

ಶಾಸ್ತ್ರಿಗಳ ಮನೆಯಲ್ಲಿ ಅಂದು ಸತ್ಯನಾರಾಯಣ ಪೂಜೆ. ಶಾರದೆ ಮೀಯುವುದಕ್ಕೆಂದು ಬರೀ ಒಂದು "ತುಂಡು" ಉಟ್ಟುಕೊಂಡು, ಅಡಕೆ ತೋಟದ ಒಂದು ಪಕ್ಕದಲ್ಲಿದ್ದ ಬಚ್ಚಲು ಮನೆಗೆ ಹೋಗುತ್ತಿರುವಳು; ಮೆಟ್ಟಲಿಳಿಯುತ್ತಿರುವಳು. ಪೂಜೆಗೆಂದು ಬರುತ್ತಿರುವ ನಾರಾಯಣನು ಮೇಲೇರುತ್ತಿರುವನು. ಇಬ್ಬರ ಕಣ್ಣುಗಳೂ ತಾಗಿದುವು. ಶಾರದೆ ಕೆಳಗಿಳಿಯತೊಡಗಿದಳು. ನಾರಾಯಣನು ಅಲ್ಲೆ ನಿಂತಿದ್ದನು. ಇವನನ್ನು ಕಂಡೊಡನೆ ಶಾರದೆಗೆ ಏನೇನೋ ಆಯಿತು. ಮನುಷ್ಯತ್ವವಿಲ್ಲದಂತೆ ಅವಳ ಬುದ್ಧಿ ಮಂಕಾಯಿತು. ಅಡಿಕೆ ಮರದ ಹಿಂಗಾರವ ಸುವಾಸನೆ ಅವಳ ಮೂಗಿಗೆ ಬಡಿದು ಮಾದಕತೆಯನ್ನುಂಟು ಮಾಡುತ್ತಿತ್ತು. ಹಿಂಗಾರದಿಂದ ಹಿಂಗಾರಕ್ಕೆ ಸುಳಿದಾಡಿ ಮಂದಮಾರುತನು ಅವಳ ಮೈಯನ್ನು ಸ್ಪರ್ಶಿಸುತ್ತಿದ್ದನು. ಮರದ ಸೋಗೆಗಳು ಕೈಬೀಸಿ, ಮಂದಾನಿಲನನ್ನು ಪ್ರೋತ್ಸಾಹಿಸುತ್ತಿದ್ದುವು.

ಶಾರದೆ ಬಾವಿಯ ಪಕ್ಕಕ್ಕಾದಳು. ಮತ್ತೊಮ್ಮೆ ತಿರುಗಿ ನೋಡಿದಳು. ಮರಗಳೆಡೆಯಿಂದ ತೂರಿಬಂದ ತಿಂಗಳಬೆಳಕಿನ ಕಿರಣವೊಂದು, ಮೆಟ್ಟಿಲಲ್ಲೇ ನಿಂತಿದ್ದ ನಾರಾಯಣನ ಮುಖಕ್ಕೆ ಬಿದ್ದು ಅಪೂರ್ವಶೋಭೆಯನ್ನು ತಂದೊಡ್ಡಿತು. ಅವನೂ ಆಕೆಯ ಕಡೆಗೆ ನೋಡುತ್ತಿದ್ದನು. ಅವಳು ಬಾವಿಯಿಂದ ನೀರು ಸೇದುವುದಕ್ಕೆ ತೊಡಗಿದ್ದಾಳೆ. ಸರ್ರನೆ ನಾರಾಯಣನು ಅವಳಿದ್ದಲ್ಲಿಗೆ ಬಂದು ಅವಳ ಹೆಗಲಮೇಲೆ ಕೈಯಿಟ್ಟನು. ಅವಳ ದೇಹವಿಡೀ ಕಂಪಿಸುತ್ತಿತ್ತು. ತಲೆಯೆತ್ತಿ ಒಮ್ಮೆ ನಾರಾಯಣನು ಒಡನೆ ಮುಗುಳುಬಾಯಿಯಿಂದ ಅವಳನ್ನು ಚುಂಬಿಸಿದನು. ಅವಳೂ ಉನ್ಮತ್ತಳಂತೆ ನಾರಾಯಣನ ಜೊತೆಯಲ್ಲಿ ತೋಟದಲ್ಲೇ ಮುಂಬರಿದಳು......

"ಶಾರದೆ, ನಾನು ನಿನ್ನನ್ನೇ ಮದುವೆಯಾಗುವೆನು. ಆಕಾಶವೇ ಹರಿದುಬಿದ್ದರೂ, ನೆಲವೇ ನುಂಗಿದರೂ, ಸಮಾಜವು ನನ್ನನ್ನು ಜೀವಂತ ದಹಿಸಿದರೂ ನಾನು ನಿನ್ನನ್ನು ಮದುವೆಯಾಗುವೆನು......ಆದರೆ ಈಗ ಉಪಾಯವಿಲ್ಲ. ಇನ್ನು ಹದಿನೈದು ದಿನಗಳಲ್ಲಿ ನನಗೆ ಬೊಂಬಾಯಿಗೆ ಹೋಗಬೇಕಾಗಿದೆ: ಅಲ್ಲಿ ನನ್ನ ಸೊಸೆಗೆ ಮದುವೆ. ಅಲ್ಲಿಂದ ಮರಳಿದೊಡನೆಯೇ ನಮ್ಮ ವಿವಾಹವು ನೆರವೇರುವುದು ನಿಶ್ಚಯ. ಅಲ್ಲಿಯ ವರೆಗೆ ತಾಳಿಕೊ. ಆ ಮೇಲೆ ನಮ್ಮದೇ ರಾಜ್ಯ; ನಮ್ಮದೇ ಸಮಾಜ!"

ನಾರಾಯಣನು ಈ ರೀತಿ ಹೇಳುವಷ್ಟರಲ್ಲಿ ಮನೆಯಿಂದ "ಶಾರದೇ" ಎಂಬ ಕರೆ ಕೇಳಿಸಿತು. ಇಬ್ಬರೂ ಹೊರಟರು. ಶಾರದೆ ಮಾತ್ರ ಮನೆಗೆ ಹೋದಳು. ಆ ದಿನ ಅವಳಿಗೆ ಯಾರನ್ನು ನೋಡುವುದಕ್ಕೂ ನಾಚಿಕೆಯಾಗುತ್ತಿತ್ತು; ತಲೆ ಸಿಡಿಯುವುದೆಂಬ ನೆವದಿಂದ ಮಲಗಿಬಿಟ್ಟಳು. ಶಾಸ್ತ್ರಿಗಳು "ನಾರಾಯಣನೇನು ಬರಲಿಲ್ಲ" ಎಂದುಕೊಳ್ಳುತ್ತಿದ್ದರು. ಅದರ ಕಾರಣ ಶಾರದೆಗೆ ಮಾತ್ರಗೊತ್ತು.

ಹದಿನೈದು ದಿನಗಳು ಹದಿನೈದು ನಿಮಿಷಗಳಂತೆ ಕಳೆದುವು. ಮರುದಿನ ನಾರಾಯಣನು ಬೊಂಬಾಯಿಗೆ ಹೋದನು. ಹೋಗುವಾಗ ಅವನು "ಶಾರದೆ, ನಾನು ಮರಳಿಬಂದೊಡನೆಯೇ ನಮ್ಮ ಮದುವೆ!" ಎಂದಿದ್ದನು. ಆದರೆ ಹಾಗೆ ಹೋದ ಆತನು ಮರಳದೆ, ಅವನ ವಿಷಯದ ತಂತಿಯು ಬಂದಿತು; "ನಾರಾಯಣನು ಟ್ರೈನಿಂದ ಇಳಿದ ಕೂಡಲೇ ಕಾರಿನಡಿಗೆ

ಬಿದ್ದು ಸತ್ತನು." ಈ ಸುದ್ದಿಯೊಡನೆ ಶಾರದೆಯು ಈಗ ನಿಜವಾಗಿಯೂ ವಿಧವೆಯಾದಳು. ಆವಳ ಮನಸ್ಸಿಗಾದ ವ್ಯಸನವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಅವಳು ಚೇತನವೇ ಇಲ್ಲದ ಮರದ ಕೊರಡಿನಂತಾದಳು. ಸಾಲದುದಕ್ಕೆ ಮತ್ತೆ ಹದಿನೈದು ದಿನಗಳಲ್ಲಿ ಮತ್ತೊಂದು ಸಂಕಟವೂ ಒದಗಿತು; ಮುಟ್ಟಾಗಲೇ ಇಲ್ಲ. ಅಂದಿನಿಂದ ಪ್ರತಿನಿತ್ಯ ಎಷ್ಟೋ ಕಷ್ಟಗಳನ್ನು ಸಹಿಸಿ, ಸಹಿಸಿ, ಈಗ ಇಲ್ಲಿ ಬಂದಿರುವಳು. ಅಪಾರ ಸಂಪತ್ತಿಗೆ ಒಡತಿ ಎಂದು ಕರೆಯಲ್ಪಡುತ್ತಿದ್ದ ಅವಳಲ್ಲಿ ಈಗ ಕಾಸಿಗೂ ಗತಿಯಿಲ್ಲ. ತಂದೆ ಕೊಟ್ಟ ಇನ್ನೂರು ರೂಪಾಯಿ ಬಾಣಂತಿತನಕ್ಕೂ ಹುಟ್ಟಿದ ಮಗುವಿನ ಕಾಯಿಲೆಯ ಉಪಚಾರಕ್ಕೂ ವೆಚ್ಚವಾಗಿ ಮುಗಿಯಿತು. ಆದರೂ ಮಗುವೇನೂ ಉಳಿಯಲಿಲ್ಲ. ಉಳಿಯುವುದಾದರೂ ಯಾಕೆ, ಊರಲ್ಲಿ ಸೂಳೆಯ ಮಗುವೆಂದು ಹೇಳಿಸಿಕೊಳ್ಳುವುದಕ್ಕೇ? ವಿಧಿಗೆ ತಾನು ಸುಖವಾಗಿರುವುದು ಬೇಡವಾದ ಮೇಲೆ, ತಾನಾದರೂ ಅದನ್ನು ಬಯಸುವುದೇಕೆ? ಅಲ್ಲವಾದರೆ ನಾರಾಯಣನನ್ನು ಕಾರೊಂದು ಬಲಿಗೊಳ್ಳಬೇಕೆ? ಇದೇ ಸಮಯದಲ್ಲೇ ನನಗೇಕೆ ಸಾವು ಬರಲಿಲ್ಲ? ಯಾವುದಕ್ಕಾಗಿ ನಾನು ಜೀವಿಸಿರಲಿ? ಬದುಕಿರಲಿ? ಬದುಕಿದರೆ ಜೀವನನಿರ್ವಾಹಕ್ಕೇನು ಗತಿ?

ಶಾರದೆಗೆ, ಅಲ್ಲೇ ನೆರೆಯಲ್ಲಿದ್ದ ಮುಸಲ್ಮಾನ ಸೂಲಗಿತ್ತಿಯೊಬ್ಬಳು ಆಗಾಗ ಬಂದು ಧೈರ್ಯಕೊಡುತ್ತಿದ್ದಳು. ಈಕೆಯಿಂದಾಗಿಯೇ ಅವಳು ತನ್ನ ಆತ್ಮಹತ್ಯೆಯ ವಿಚಾರವನ್ನು ತಡೆದಿದ್ದಳು. ಕೈಯಲ್ಲಿ ಕಾಸಿಲ್ಲದಾಗ ಈಕೆಯೇ ಸಹಾಯ ಮಾಡುತ್ತಿದ್ದಳು.

೫

ಶಂಕರರಾಯರ ಮನಸ್ಸು ಸ್ಥಿಮಿತಕ್ಕೆ ಬರುತ್ತಿದ್ದಂತೆಯೇ ಅವರ ಬಾಲವಿಹಾರದ ಯೋಜನೆಯು ಬಲಿಯುತ್ತಾ ಬಂತು. ಅದಕ್ಕೆ, ಬೀದಿಯಲ್ಲಿ ಕಾಣುತ್ತಿದ್ದ ನಿರ್ಗತಿಕ ತಿರುಕ ಬಾಲಕರ ದುಃಖ ಪೂರ್ಣ ಮುಖವೂ ಪ್ರೋತ್ಸಾಹ ಕೊಡುತ್ತಿತ್ತು. ಯಾವ ಚಿಂತೆಯೂ ಇಲ್ಲದೆ ಸುಖವಾಗಿ ಬೆಳೆಯಬೇಕಾಗಿರುವ ಬಾಲಕರು ಒಂದಲ್ಲ ಒಂದು ಚಿಂತೆಯಿಂದ ಬಳಲಿ ಕುಂದುತ್ತಿರುವರಲ್ಲ. ಅವರನ್ನು ಸಂತುಷ್ಟರನ್ನಾಗಿ ಮಾಡಿ ಬೆಳೆಯಿಸಿ

ಪಾಲಿಸುವುದೇ ತನ್ನ ಆದ್ಯ ಕರ್ತವ್ಯ. ಇದುವೇ ಸರಿ. ಆರ್ಯ್ರೇ, ಜನರು ಸುಧಾರಣೆ, ಮಾನವ ಸೇವೆ, ದೀನ ಜನೋದ್ಧಾರ ಎಂದು ಬೊಬ್ಬಿಡುತ್ತಿರುವರು. ಅದೆಲ್ಲಾ ಏಕೆ? ಕಂಗಾಲರಾಗಿರುವ, ಪ್ರಪಂಚವೆಂದರೇನೆಂದು ತಿಳಿಯದ ಬಾಲಕರ ಸೇವೆ ಮಾಡಬಹುದಲ್ಲ? ಎಂದು ಅವರ ಮನಸ್ಸು ಹೇಳುತ್ತಿತ್ತು. ಅವರ ಒಬ್ಬಿಬ್ಬರು ಸ್ನೇಹಿತರೂ ಈ ಕಾರ್ಯಕ್ಕೆ ಪ್ರೋತ್ಸಾಹವಿತ್ತರು. ಕೆಲವರು "ಇದು ಸಾಗದ ಕೆಲಸ. ಈ ಪ್ರಪಂಚದ ದಿಕ್ಕಿಲ್ಲದ ಮಕ್ಕಳೆಲ್ಲರನ್ನು ಸಮಾಧಾನಪಡಿಸುವುದು ನಿನ್ನಿಂದ ಆದೀತೆ? ಅವರ ಹುಟ್ಟೇ ಹಾಗೆ; ಅವರ ಹಣೇಬರಹವೇ ಹಾಗೆ. ಭಗವಂತನು ಹಣೆಯಲ್ಲಿ ಬರೆದುದನ್ನು ಅನುಭವಿಸುತ್ತಾರೆ. ಅದಕ್ಕೆ ನೀನೊಬ್ಬನು ಚಡಪಡಿಸಿದರಾಗುವುದೆ? ಆಕಾಶಕ್ಕೆ ಏಣಿ ಕಟ್ಟುವ ಆಲೋಚನೆಯಿದು." ಎಂದೂ ಹೇಳಿದ್ದರು. ಆದರೂ ರಾಯರ ಯೋಜನೆ ಮುಂದುವರಿಯುತ್ತಿತ್ತು.

ಅಂತೂ ಕೊನೆಗೆ ಒಂದು ಹಿತ್ತಿಲಲ್ಲಿ "ಬಾಲವಿಹಾರವು" ರೂಪುಗೊಂಡಿತು. ಊರಿನ ಹಲವು ಬಾಲಕರು ಅದರಲ್ಲಿ ಸೇರಿದರು. ಇವರ ಮೇಲ್ವಿಚಾರಕ್ಕೆ ಇಬ್ಬರು ಉಪಾಧ್ಯಾಯರೂ ಬಂದರು. ತಾಳ್ಮೆಯಿಲ್ಲದ ಜನರು ಇದರ ಪರಿಣಾಮವೇನಾಗುವುದೋ ಎಂದು ನೋಡುವ ಮೊದಲೇ ಸಿಕ್ಕಾಬಟ್ಟೆ ಟೀಕೆಗೆ ತೊಡಗಿದರು. "ರಮೆಯೊಂದಿಗೆ ಶಂಕರರಾಯರ ಬುದ್ಧಿಯೂ ಸುಟ್ಟುಹೋಯಿತೇ?" ಎಂದೂ "ಹೀಗೂ ಒಂದು ಹುಚ್ಚಾಟಿಕೆ ಮಾಡುವುದಿದೆಯೇ?" ಎಂದೂ ಅನೇಕರು ಅನೇಕ ರೀತಿ ನುಡಿಯ ತೊಡಗಿದರು. ಶಂಕರರಾಯರು ಮಾತ್ರ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ತದೇಕಧ್ಯಾನದಿಂದ ಅಹೋರಾತ್ರಿ "ಬಾಲವಿಹಾರ"ಕ್ಕೆ ದುಡಿದರು. ಕೆಲವರು ಇವರ ದಾಕ್ಷಿಣ್ಯಕ್ಕೆ ಈ ಸಂಸ್ಥೆಗೆ ಸಹಾಯವಿತ್ತರು. ಕೆಲವೇ ತಿಂಗಳುಗಳಲ್ಲಿ "ಬಾಲವಿಹಾರ"ವು ಬಾಲಕರಿಗೆ ಪ್ರಿಯವೆನಿಸಿತು. ಅವರೆಣಿಕೆಯಂತೆ ಇದೊಂದು ಸ್ವರ್ಗಲೋಕ. ಇಲ್ಲಿ ಯಾವ ಚಿಂತೆಯೂ ಇಲ್ಲ. ಬೇಕಾದ ಆಟವಿದೆ; ಸಾಕಷ್ಟು ತಿಂಡಿಯಿದೆ. ಬಾಲಕರಿಗೆ ಮತ್ತೇನು ಬೇಕು? ಆದರೆ ಇಲ್ಲಿಯೂ ಶಂಕರರಾಯರಿಗೆ ಒಂದು ಕೊರತೆ ಕಂಡಿತು. ಅಲ್ಲಿದ್ದ ಉಪಾಧ್ಯಾಯರು ಗಂಡು ಮನಸ್ಸಿನವರು.

ಬಾಲಕರ ರಕ್ಷಣೆಗೆ ತಕ್ಕುದಾದ ನಾರೀಹೃದಯ ಸರಸ್ಸಿನ ತಿಳಿನೀರು ಅವರಲ್ಲಿಲ್ಲದೆ ಸಾಗರದ ಗಂಭೀರ ಜಲರಾಶಿ ನೆಲಸಿತ್ತು. ಇದನ್ನು ಹುಡುಗರು ಮೆಚ್ಚುವದಿಲ್ಲ. ಭೂದೇವಿಯಂತೆ ಸಹನಾಮೂರ್ತಿಗಳಾದ ನಾರಿಯರೇ ಅವರ ರಕ್ಷಣೆಗಿರಬೇಕೆಂದು ಅವರರಿತುಕೊಂಡರು. ಮರ್ಕಟಗಳಂತೆ ಹುಡುಗರು ಚೆಲ್ಲಾಟವಾಡುತ್ತಿರುವಾಗ, ಆ ಗಂಡು ಉಪಾಧ್ಯಾಯರು ಸಿಟ್ಟಾಗುವರು. ಕೈಯಲ್ಲಿ ಬಾಗಿಸಬರುವ ಮಯಣಕ್ಕೆ ಬೆಂಕಿಯ ಆವಶ್ಯಕತೆಯಿದೆಯೇ? ಆದರೆ ಇಂತಹ ತಿಳುವಳಿಕೆಯುಳ್ಳ, ಹಗಲು ರಾತ್ರಿ ಅಲ್ಲಿಯೇ ಇರಬಲ್ಲ, ನಾರಿಯರು ಈ ಕಾರ್ಯಕ್ಕೆ ದೊರೆಯಬೇಕು. ದೊರೆತರೆ ಅಂತಹರನ್ನೇ ನೇಮಿಸಿಕೊಳ್ಳಬೇಕು ಎಂದು ನಿರ್ಧರಿಸಿದರು.

ಈಗ ಶಂಕರರಾಯರು ಮೊದಲಿನಂತೆ ಅಧೀರಚಿತ್ತರಲ್ಲ. ಮನಸ್ಸು ಸ್ಥಿಮಿತಕ್ಕೆ ಬಂದಿದೆ. ಭರತನು ಬಾಲವಿಹಾರದಲ್ಲಿ ನಲಿದಾಡುತ್ತಿದ್ದನು. ಇವರಿಂದ ಅವರ ಹೃದಯವೂ ನಲಿದಾಡುತ್ತಿತ್ತು. ತಾನು ಮಾಡಿದ ಕಾರ್ಯ ಸಫಲವೆಂದುಕೊಂಡರು. ತನ್ನ ಭರತನು ಸುಖಿಯಾದ ಮೇಲೆ ಮಾತ್ರ ಪರೋಪಕಾರ ದೃಷ್ಟಿ! ಹಾಗಾಗಿ ಹಿಂದಿನಂತೆ ನಾನಾ ರೀತಿಯ ಕಾರ್ಯಗಳಲ್ಲಿ ಅವರೀಗ ಕೈಹಾಕುವುದಿಲ್ಲ. ಯಾವ ಕಾಲದಲ್ಲಿಯೂ ಒಂದೇ ಯೋಚನೆ: ಬಾಲವಿಹಾರದ ಉನ್ನತಿ ಎಂತಾಗುವುದೋ ಎಂಬುದೇ ಅವರ ಆಶೆ.

ಕೆಲವು ದಿವಸಗಳಿಂದ ರಾಮಶಾಸ್ತ್ರಿಗಳು ಬಂದಿರಲಿಲ್ಲ. ಇಂದು ಬಂದರು. ಶಂಕರರಾಯರನ್ನು ಕಂಡು, ಅವರನ್ನು ಮದುವೆಯಾಗುವಂತೆ ಕೆರಳಿಸಬೇಕೆಂಬುದೇ ಅವರ ಆಕಾಂಕ್ಷೆ. ದಿವಾನಖಾನೆಯಲ್ಲಿ ಕುಳಿತುಕೊಂಡು ಶಂಕರರಾಯರು ದೀರ್ಘಾಲೋಚನೆಯಲ್ಲಿ ಮಗ್ನರಾಗಿದ್ದಾಗ ಶಾಸ್ತ್ರಿಗಳು ಪ್ರವೇಶಿಸಿದರು. ಬೇರೆ ಯಾರೂ ಇಲ್ಲದೆ ಒಬ್ಬರೇ ಇರುವುದನ್ನು ಕಂಡು ತನಗೆ ಎಷ್ಟು ಮಾತಾಡುವುದಕ್ಕೂ ಅಡ್ಡಿಯಿಲ್ಲವೆಂದು ಭಾವಿಸಿದರು.

ಶಂಕರ:—ಓಹೋ, ಶಾಸ್ತ್ರಿಗಳು! ಬನ್ನಿ. ಅಪರೂಪವಾಗಿ ಬಿಟ್ಟಿರುವಿರಲ್ಲ!

ಶಾಸ್ತ್ರಿ:—ಎಲ್ಲಿ ಬರಲಾಗುವುದು? ವೈದಿಕ ಇನ್ನೊಂದು ಎಂದು ಸದಾ ತಿರುಗಾಟವೇ! ಇಂದು ಹೀಗೆ ಸಮಯವಿದೆ; ನಿನ್ನನ್ನು ಕಂಡು ಹೋಗೋಣವೆಂದು ಬಂದೆ. ನೀನು ಸ್ಥಾಪಿಸಿದ ಬಾಲವಿಹಾರದ ಸುದ್ದಿಯನ್ನು ಕೇಳಿದೆ. ಬಹಳ ಉಪಕಾರದ ಕೆಲಸ; ಎಷ್ಟೋ ಜನರು ಹೊಗಳುತ್ತಾರೆ. ಪಾಪ, ದಿಕ್ಕಿಲ್ಲದ ಮಕ್ಕಳು ಬಚಾವಾದರು.

ಶಂಕರ:—ಅದೇನೋ ಸರಿ. ಆದರೆ ನಾನು ತೊಡಗಿದ ಕೆಲಸ ಎಷ್ಟು ಕಾಲ ಬಾಳುವುದೋ ಹೇಳಲಾರೆ. ಆ ಹುಡುಗರನ್ನು ರಕ್ಷಿಸುವ, ಯೋಗ್ಯ ಶಿಕ್ಷಣವನ್ನು ಕೊಡುವ ಜನರು ಇನ್ನೂ ದೊರೆಯಲಿಲ್ಲ. ಒಬ್ಬಿಬ್ಬರು ಉಪಾಧ್ಯಾಯರಿದ್ದರೂ ಅವರಿಂದಾಗುವ ಕೆಲಸವೇ ಅದು? ದೊಡ್ಡ ಮಕ್ಕಳು ಚಂಡಿ ಹಿಡಿದು ಅತ್ತರೆ ಅವರು ಬೈದು ಬಿಡುವರು; ಹೊಡೆದೂ ಬಿಡುವರು. ಮಕ್ಕಳ ಪೋಷಣೆಗೆ ಸ್ತ್ರೀಯರೇ ಯೋಗ್ಯರು. ಆದರೆ ಈಗ ಸ್ತ್ರೀಯರು ದೊರೆಯಲಾರರು. ಮನೆ, ಮಠ, ಗಂಡ, ಮಕ್ಕಳು ಇರುವವರು ಇದಕ್ಕೆ ಬರುವರೇ? ಅನಾಥರಾಗಿರುವವರೇ ಇಲ್ಲಿಗೆ ಬರಬೇಕು. ಅಂತಹರೇನೋ ದೊರೆತಾರು. ಆದರೆ ತಿಳುವಳಿಕೆಯುಳ್ಳ, ವಿದ್ಯೆ ಇರುವ ಮಹಿಳೆಯರು ದೊರೆತರೆ ನನ್ನ ಯತ್ನವು ಫಲಿಸೀತು.

ಇದನ್ನು ಕೇಳಿ ಶಾಸ್ತ್ರಿಗಳ ತಲೆಯಲ್ಲಿ ಯೋಚನೆಯೊಂದು ಮಿಂಚಿತು. ಶಾರದೆ ಕಷ್ಟಪಡುತ್ತಿರುವಳು. ಅವಳಿಗೇನಾದರೂ ಸಹಾಯಮಾಡಲಾರಿರಾ? ಎಂದು ತನ್ನ ಹೆಂಡತಿ ದಿನವಿಡೀ ಪೀಡಿಸುತ್ತಿರುವಳು. ಯಾವ ಉಪಕಾರಕ್ಕೂ ಇಲ್ಲದ ಆ ಮರದ ಕೊರಡಿಗೇಕೆ ದುಡ್ಡು ದಂಡಮಾಡುವುದು? ಎಂದು ಸುಮ್ಮಗಿದ್ದರು. ಆದರೆ ಈಗ ಅವಳನ್ನಿಲ್ಲಿ ತಂದು ಸೇರಿಸಿದರೆ ಅವಳಿಗೊಂದು ಗತಿಯಾಗುವುದು. ಶಂಕರರಾಯರು ಅಪೇಕ್ಷಿಸುವಂತಹ ಯೋಗ್ಯ ಸ್ತ್ರೀಯೇ ಅವಳು. ಮನೆ ಮಠ ಮುಂತಾದ ರಗಳೆಯೇನೂ ಅವಳಿಗಿಲ್ಲ. ವಿದ್ಯೆ, ಬುದ್ಧಿವಂತಿಕೆ ಸಾಕಷ್ಟಿದೆ. ನೋಡೋಣ ಎಂದು "ಶಂಕರ, ನೀನಿಚ್ಛಿಸುವಂತಹ ಬಾಲವಿಧವೆಯೊಬ್ಬಳು ನಮ್ಮೂರಲ್ಲೇ ಇದ್ದಾಳೆ. ಅವಳಿಗೆ ಕೆಲಸಕೊಟ್ಟೆಯಾದರೆ ನಿನಗೂ ಶ್ರೇಯಸ್ಸು; ಅವಳಿಗೂ ಒಂದು ದಾರಿಯಾಗುವುದು." ಎಂದರು.

ಶಂಕರ:—ಆಗಲಿ. ಕರತನ್ನಿರಿ. ಒಂದೆರಡು ತಿಂಗಳಲ್ಲೇ ಕಲಿ ತಾಳು. ಮತ್ತೇನು?

ಶಾಸ್ತ್ರಿ—ಆಯಿತು ಕರತರುತ್ತೇನೆ.

ಶಂಕರ:—"ಶಾಸ್ತ್ರಿಗಳೇ, ನೀವು ಇಲ್ಲಿಯೇ ಇರಿ. ಎಷ್ಟೋ ವಿಷಯ ಮಾತಾಡುವುದಿದೆ. ಮಧ್ಯಾಹ್ನ ಊಟವಾದ ಮೇಲೆ ಹೋಗಬಹುದು. ನಾನು ಈ ಕ್ಷಣ ಪ್ರಜಾಪರಿಷತ್ತಿನ ಕಚೇರಿಗೆ ಹೋಗಿ ಬರುವೆನು. ಅವರ ವತಿಯಿಂದ ನಾನು ಕೌನ್ಸಿಲಿನ ಮೆಂಬರಿಕೆಗೆ ನಿಲ್ಲಬೇಕೆಂದು ಒತ್ತಾಯಿಸು ತ್ತಿರುವರು. ಆದರೆ ನನಗೇನೂ ಮನಸ್ಸಿಲ್ಲ. ಅದರ ಕೊನೆಯ ನಿರ್ಣ ಯವಿಂದು" ಎಂದು ಹೇಳಿ ಹೊರಗೆ ಹೋದರು.

ಶಾಸ್ತ್ರಿಗಳು ಮೃಷ್ಟಾನ್ನವನ್ನುಂಡು ಮನೆಗೆ ಮರಳುತ್ತಿದ್ದಾರೆ. ಅವರು ಮನೆಯಿಂದ ಹೊರಡುವಾಗ ಇದ್ದ ಉತ್ಸಾಹವು ಈಗಿಲ್ಲ. "ಯಾವ ರೀತಿಯಿಂದಲಾದರೂ ಶಂಕರನನ್ನು ಒಡಂಬಡಿಸಿಯೇನು? ಅವನು ನನ್ನ ಶಿಷ್ಯಕೋಟಿಯೊಳಗಿನವ; ನನ್ನಂತಹ ಗುರು ಹೇಳುವ ಮಾತನ್ನು ತಿರಸ್ಕರಿ ಸಲಾರ" ಎಂದು ದೃಢವಾಗಿ ನಂಬಿದ್ದರು. ಆದರೆ ಆತನ ಮಾತೇ ವಿಪ ರೀತ. ತನ್ನ ಮಗಳನ್ನು ಮದುವೆಯಾಗುವ ಮಾತಿರಲಿ; ಅವನು ಪುನಃ ವಿವಾಹವಾಗುವುದೇ ಇಲ್ಲವಂತೆ; ಎಂದ ಮೇಲೆ ತನ್ನ ಹುಡುಗಿಯ ಪ್ರಸ್ತಾವ ತೆಗೆಯುವುದೆಂತು? ಏನು ಪ್ರಯೋಜನ? ಅಂದು ರಮೆ ತೀರಿ ಕೊಂಡ ದಿನ ತನ್ನ ಮಾತು ರುಚಿಸದಿದ್ದಾಗ ಇದು ಶ್ಮಶಾನ ವೈರಾಗ್ಯ; ನಾಲ್ಕು ದಿನ ಕಳೆದ ಮೇಲೆ ಸರಿಯಾದೀತು ಎಂದು ತಿಳಿದಿದ್ದೆ. ಆದರೆ ಈಗಲೂ ಅವನು ಹುಚ್ಚುಮಾತನ್ನೇ ಆಡುತ್ತಾನೆ. ಇದಕ್ಕೆ ಹುಚ್ಚೆನ್ನದೆ ಮತ್ತೇನೆನ್ನಲಿ? ಇವನೊಬ್ಬನು ಆದರ್ಶವನ್ನು ಕಂಡವನು; ಉಳಿದವ ರೆಲ್ಲಾ ಮಂಕರೆಂದು ತಿಳಿಯುವನೋ? ಶಾಸ್ತ್ರ ಸಮ್ಮತವಾಗಿ ನೋಡಿದರೂ ಪುನರ್ವಿವಾಹವಾಗುವುದಿದ್ದರೆ ವಿಧವೆಯರೊಡನಾಗಬೇಕಂತೆ. "ನೀನೂ ಹಾಗೆ ಮಾಡುವೆಯಾ?" ಎಂದಾಗ ಅವನ ವಿಚಾರವಲ್ಲ; ಹೆಂಡತಿ ಸತ್ತ ವರು ಮದುವೆಯಾಗುವುದಾದರೆ ಹಾಗೆ ಆಗಬೇಕಂತೆ. ಆ ಪಂಚಾಯತಿಕೆ ಇವನಿಗೇಕೆ? ಎಂದುಕೊಂಡು ಶಾಸ್ತ್ರಿಗಳು ರಾಯರನ್ನು ತೆಗಳಿದರು; ಬೈದರು; ತಪಿಸಿದರು.

ಶಾಸ್ತ್ರಿಗಳ ಮಗಳು ರತ್ನಳ ಮದುವೆಯಾಗುವುದಕ್ಕೆ, ಶಾಸ್ತ್ರಿಗಳ ದೃಷ್ಟಿಯಲ್ಲಿ ಶಂಕರರಾಯರಂತಹ ವ್ಯಕ್ತಿಗಳು ಬೇರೆಯಾರೂ ಕಾಣುತ್ತಿರಲಿಲ್ಲ. ಆದುದರಿಂದಲೇ ಶಾಸ್ತ್ರಿಗಳು ಈ ದಿನವಲ್ಲವಾದರೆ ಇನ್ನೊಂದು ದಿನ ನೋಡೋಣವೆಂದು, ಪರಿಣಾಮವಾಗುವುದಿದ್ದರೆ ಆಗಲಿ ಎಂದು, ಪುನರ್ವಿವಾಹದ ಕುರಿತು ಬೇಕಾದಷ್ಟು ಉಪನ್ಯಾಸ ಮಾಡಿ, ಶಂಕರನಿಗೆ ಹೆಂಡತಿಯಿಲ್ಲದೆ ಉಂಟಾಗುವ ಅನನುಕೂಲತೆಯನ್ನು ಎತ್ತಿ ತೋರಿಸಿ ಅಂದು ಹೊರಟಿದ್ದರು. ಹೊರಡುವಾಗ ಬೇರೊಂದು ಬಗೆಯ ಸಮಾಧಾನವನ್ನು ತಾಳಿಕೊಂಡು ತೂಗಾಡುವ ಮನಸ್ಸಿನಿಂದ ಹೊರಟಿದ್ದರು. ಬಾಲವಿಹಾರಕ್ಕೆ ಜನಬೇಕಂತೆ. ಅದೂ ನಿರಾಶ್ರಿತರಾಗಿ, ತಿಳುವಳಿಕೆಯುಳ್ಳ ಸಂಸಾರ–ಗೃಹಕೃತ್ಯವೆಂಬ ಜಂಜಾಟವಿಲ್ಲದ ಸ್ತ್ರೀಯರು ಬೇಕಂತೆ. ಇದಕ್ಕೆ ನಮ್ಮ ಶಾರದೆ ಯೋಗ್ಯ: ಸಂಸಾರದ ಭಾರವಿಲ್ಲ; ತಿಳುವಳಿಕೆಯಿದೆ; ಕಸೂತಿ ಕಲಿತಿದ್ದಾಳೆ; ಹಿಂದಿ–ಸಂಸ್ಕೃತಗಳ ಪರಿಚಯವಿದೆ. ಆದರೆ ಅವಳ ಹಣೇಬರಹ ಕೆಟ್ಟದು. ಅಥವಾ ಪ್ರಾಯದ ಸೊಕ್ಕು. ಏನೋ ಮಾಡಿಕೊಂಡು ಎಲ್ಲೋ ಇರುವಂತೆ ಆಯಿತು. ಪಾಪ, ಎಷ್ಟೋ ಕಷ್ಟ ಪಡುತ್ತಿರುವಳು. ಏನಾದರೂ ತನ್ನ ಮಗಳಷ್ಟೆ. ಅವಳ ಕರುಣಕಥೆಯನ್ನು ಕೇಳುವುದಕ್ಕಾಗುವುದಿಲ್ಲ. ಆದರೆ ಮಾಡಲೇನು? ಸಮಾಜದ ಭಯ, ಪರಲೋಕದ ದಂಡನೆಯ ಭಯಗಳಿಂದ ಅವಳನ್ನು ಮನೆಯಿಂದ ಹೊರಡಿಸಬೇಕಾಯಿತು. ಅವಳಲ್ಲಿ ತಂದೆಗಿರಬೇಕಾದ ದಯೆ ತನ್ನಲ್ಲೂ ಇದೆ. ಅವಳು ಮಾಡಿದ ತಪ್ಪಿಗೆ ಮಾತ್ರ ಆ ರೀತಿ ಮಾಡಿದರು. ಈಗ ಅವಳನ್ನು ಬಾಲವಿಹಾರದಲ್ಲಿ ಮಾಡಿದರೇನು? ಸುಖವಾಗಿದ್ದಾಳು. ಮತ್ತೂ ಒಂದು ಲಾಭವಿದೆ: ಶಂಕರನು ಬಯಸುವಂತಹ ಜನ ಕೊಟ್ಟು, ಅವನಿಗೆ ಹಿತವಂತನಾದರೆ ತನ್ನ ಮಾತನ್ನು ಕೇಳದಿದ್ದಾನೇ? ಅವನು ಯಾವುದಕ್ಕೂ ಒಪ್ಪದಿದ್ದರೆ "ಶಂಕರ, ನೀನು ನನ್ನ ಶಿಷ್ಯ, ನಾನು ನಿನ್ನ ಗುರು. ನನ್ನ ಮಾತನ್ನು ತಿರಸ್ಕರಿಸಲಾಗದು; ನನ್ನ ಮಗಳನ್ನು ಕೈಹಿಡಿಯಲೇ ಬೇಕು" ಎಂದಾಗ ಒಪ್ಪದಿರುವನೇ? ಈ ರೀತಿಯಿಂದಲಾದರೂ ಶಂಕರರಾಯರನ್ನು ಹಿಡಿಯುವ ಬಲೆಯನ್ನು ಹೆಣೆಯುತ್ತಿದ್ದರು.

ಶಾಸ್ತ್ರಿಗಳ ಉಪನ್ಯಾಸಕ್ಕಿಂತಲೂ, ತನ್ನ ಮನಸ್ಸಿಗರಿವಾಗದಿದ್ದ, ಆಗಾಗ ಮನಸ್ಸಿಗೆ ವ್ಯಥೆಯನ್ನೀಯುತ್ತಿದ್ದ ಕೊರತೆಗಳು ಶಂಕರರಾಯರಿಗೆ ಮೆಲ್ಲಮೆಲ್ಲನೆ ಕಾಣತೊಡಗಿದುವು. ರಮೆಯು ಕಾಲಕ್ಕೆ ಮನೆಗೆ ಬರುವಾಗ, ಮನೆಯು ಸ್ವಾಗತಕ್ಕಾಗಿ ನಿಂತ ಸುಂದರಿಯಂತೆ ತೋರುತ್ತಿತ್ತು. ಈಗ ಊರುಗೋಲು ಹಿಡಿದ ಮುದುಕಿಯಂತೆ ತೋರುತ್ತಿದೆ. ಕೋಣೆ, ಮಂಚ, ಕಿಟಕಿ, ತೋಟ ಎಲ್ಲವೂ ರಮೆಯಿಲ್ಲವೆಂದು ಸಾರಿ ಹೇಳುತ್ತಿವೆ. ಮೀಯುವುದಕ್ಕೆ ಹೋದಾಗ ಸೀರೆ ಇರುವುದಿಲ್ಲ. ಊಟವಾಗಿ ಏಳುವಾಗ ಕೈ ತೊಳೆಯುವುದಕ್ಕೆ ನೀರಿರುವುದಿಲ್ಲ. ಮಲಗುವುದಕ್ಕೆ ಹೋದಾಗ ಮಂಚದ ಹಾಸುಗೆಯು ಅಸ್ತವ್ಯಸ್ತ. ಮೇಜಿನ ಮೇಲೆ ಹಾಲಿರುವುದಿಲ್ಲ. ರಮೆ ಇರುವಾಗ ಈ ರೀತಿ ಆಗುತ್ತಿರಲಿಲ್ಲ. ಈಗ ಆಳುಗಳು ದುಡ್ಡಿಗಾಗಿ ಮಾಡುವ ಕೆಲಸ; ಹೇಳಿದ ಮೇಲೆ ಮಾಡುವರು. ಮೊದಲು ಮನೆಯು ಬಾಯೆಂದು ಕರೆಯುತ್ತಿದ್ದರೆ, ಈಗ ಮನೆಯಿಂದ ಓಡಿಹೋಗೋಣವೆಂದು ತೋರುವುದು, ಇದಕ್ಕೆಲ್ಲಾ ಪರಿಹಾರ, ಶಾಸ್ತ್ರಿಗಳೆಂದಂತೆ ಪುನಃ ಮದುವೆಯಾಗುವುದೇ? ಹೀಗೆ ಮಾಡಿದರೆ ರಮೆಗೆ ಅಪಚಾರ ಮಾಡಿದಂತಾಗಲಿಲ್ಲವೇ? "ರಮಾ, ನೀನು ನನ್ನ ಸ್ವರ್ಗ"ವೆಂದು ಹೇಳಿ, ಈಗ ನಾನು ಬೇರೊಬ್ಬಳನ್ನು ಕೈ ಹಿಡಿದರೆ ಸ್ವರ್ಗದಲ್ಲಿರುವ ಅವಳು ಏನೆಂದಾಳು! ಎಂದಿಗೂ ಆಗದ ಮಾತು ಎಂದು ಎಣಿಸುವರೊಮ್ಮೆ. ಒಂದು ವೇಳೆ ಇನ್ನೊಂದು ಮದುವೆಯಾದರೆ ಆಗ ಜೀವನವು ಹೇಗಿರಬಹುದು ಎಂದು ಊಹಿಸಿಕೊಂಡರು. ತಲೆ ಕೊಡಹಿ ಆ ವಿಚಾರವನ್ನೇ ಜಾಡಿಸಿದರು. ಸಂಜೆಯ ನಾಲ್ಕು ಗಂಟೆಯು ಬಡಿದು ಬಾಲವಿಹಾರದ ನೆನಪನ್ನಿತ್ತಿತು. ಬಾಲವಿಹಾರದಲ್ಲಾಡುವ, ರಮೆಯ ಪ್ರತಿರೂಪ ಭರತನ ನೆನಪು ಅವರನ್ನು ಕರೆಯಿತು. ಬ್ಯಾಕ್ ಕಾರನ್ನೇರಿದರು.

೬

ನೀರಾರಿದ ಕೆರೆಯ ಮೀನಿನಂತಾಯಿತು ಶಾರದೆಯ ಸ್ಥಿತಿ. ಇಲ್ಲಿಂದ ಹೋಗುವುದಕ್ಕೂ ಅಲ್ಲ, ಇಲ್ಲಿರುವುದಕ್ಕೂ ಅಲ್ಲ. ಇಲ್ಲಿದ್ದರೆ ಜೀವಿಸುವುದೂ ಕಷ್ಟ. ಈಗ ತಾನೇ ತಂದೆಯವರು ಬಂದು ಬಾಲವಿಹಾರದ ಸುದ್ದಿ

ಯನ್ನು ತಿಳಿಸಿ ಹೋದರು. ಆದರೆ ಹೇಗೆ ಮಾಡಲಿ ಎಂದು ನಿರ್ಧಾರ ವಾಗಲಿಲ್ಲ. ಅಲ್ಲಿಗೆ ಹೋದರೇನೋ ಸುಖವಾಗಬಹುದು. ಆದರೆ ಅಲ್ಲಿ ನಾನಾ ಜಾತಿಯ ಗಂಡುದೃಷ್ಟಿಗಳಿರುವುವು. ಅವುಗಳಲ್ಲಿ ಹಲವು ಚೂರಿ ಮುಳ್ಳಿಗಿಂತಲೂ ಹೆಚ್ಚು ಚುಚ್ಚಬಹುದು; ಕೆಲವು ಅಮೃತವನ್ನು ತೋರ ಬಹುದು. ನನ್ನ ಹಿಂದಿನ ಘಟನೆಯಿಂದ ನಾನು ಜನರೆದುರಲ್ಲಿ ಸೂಳೆಯಾ ಗಿರುವೆನು. ಈ ಹೇಸಿಗೆಯ ನೆಲೆಯಲ್ಲಿರುವುದಾದರೂ, ಅನೇಕರು ವಿನಾ ಕಾರಣ ನನ್ನ ಕಡೆಗೆ ದೃಷ್ಟಿಹಾಯಿಸುವರು. ನನ್ನೀರೂಪಕ್ಕೆ ಮೋಹಿಸಿ, ಮುಗುಳು ನಗುತ್ತಾ "ಪಿಯಾ ಮಿಲನಕೋ ಜಾನಾ" ಎನುತ್ತಾ ತಿರುಗಾಡು ವರು. ಅಯ್ಯೋ, ಅವರ ಸ್ವಭಾವವೇ? ನನ್ನ ಆದರ್ಶವೇನಿತ್ತೆಂದು ಅವರು ತಿಳಿಯಲಾರರು.

ಎಲ್ಲರಂತೆ ನಾನು ಪತ್ನಿಯಾಗಿ, ಗೃಹಿಣಿಯಾಗಿ, ಮಾತೆಯಾಗಿ, ಸಂಸಾರಸಾಗರದಲ್ಲಿ ಈಸಾಡಬೇಕೆಂದು ಭಾವಿಸಿದ್ದೆ. ಅದೇ ಆಸೆಯಿಂದ ನಾರಾಯಣನ ರಮಿಸುವ ನುಡಿಯನ್ನು, ಸಮಾಗಮವನ್ನು ತಿರಸ್ಕರಿಸಲಿಲ್ಲ. ಅವನು ಹಳೆಯ ಸಂಪ್ರದಾಯವನ್ನು ತುಳಿದು, ನೂತನ ಮಾರ್ಗವನ್ನು ರಚಿಸಿ ವಿಧವೆಯರ ಉದ್ಧಾರದ ಮಾರ್ಗದರ್ಶಕನಾಗುವನು ಎಂದು ಭಾವಿ ಸಿದ್ದೆ: ಅಂತೂ ಅವನಿಗೆ ನನ್ನನ್ನೊಪ್ಪಿಸಿದೆ. ಆದರೆ ಕಾಲನು ಅವನನ್ನು ಸೆಳೆದೊಯ್ದು ನನ್ನ ಕುತ್ತಿಗೆ ಕೊಯ್ದ. ಅವನ ಘನೋದ್ದೇಶವೂ ಮಣ್ಣು ಪಾಲಾಯ್ತು. ಆದರೆ ಜನರ ದೃಷ್ಟಿಯಲ್ಲಿ ನಾನು ಸೂಳೆ. ವಿಲಾಸಿಗಳ ದೃಷ್ಟಿಯಲ್ಲಿ ನಾನು ಸೂಳೆ. ಏನೆನ್ನಲಿ ಈ ಜಗತ್ತಿಗೆ, ಈ ಸಮಾಜಕ್ಕೆ, ಈ ಮನುಷ್ಯ ಜಾತಿಗೆ! ವಿಧವೆ, ಸೂಳೆ ಎಂದು ಪ್ರಕಟವಾಗಿ ತಿರಸ್ಕರಿಸಿದರೂ, ಕಳ್ಳತನದಿಂದ ಜನರು ಅವರ ಬೆನ್ನು ಬಿಡುವುದಿಲ್ಲ. ಆದರೂ ಅವರು ಬೇಕಾದವರು. ಆದುದರಿಂದಲೇ ಈ ಠಕ್ಕು ಧರ್ಮಶಾಸ್ತ್ರವನ್ನು ಬರೆದ ಪಕ್ಷಪಾತಿ ಗಂಡುಸರು—ಧಾರ್ಮಿಕರು!—ಗುಟ್ಟಾಗಿ ತಮ್ಮ ಲಾಲಸೆಯನ್ನು ತೀರಿಸಿಕೊಳ್ಳುವುದಕ್ಕೆ ವಿಧವೆಯರಿರಲಿ ಎಂದು, ಅವರಿಗೆ ದ್ವಿತೀಯ ವಿವಾ ಹದ ಅಧಿಕಾರವನ್ನು ಬರೆದಿರಲಾರರಷ್ಟೆ? ಸಕೇಶಿ ವಿಧವೆಯರಿರುವ ಮನೆಯ ನೀರನ್ನೇ ಮುಟ್ಟಲಾರೆವೆಂದ ಧರ್ಮರಕ್ಷಕರೂ, ದೇವರೆದುರಲ್ಲಿ ಕುಳಿತು, ಪೂಜಾನಾಟಕವಾಡುವಾಗ, ಪರಿಚಾರಕರಿಗೆ ಬಂದ ಬಾಲವಿಧವೆ

ಯರ ಸೆರಗನ್ನೆಳೆದ ಕಥೆಯನ್ನು ನಾನೂ ಕೇಳಿರುವೆನು. ನರಪಿಶಾಚಿಗಳ ವರು! ಒಂದು ದಿನದ ಅಧಿಕಾರಸೂತ್ರವು ನನ್ನ ಕೈಗೆ ಬಂದರೆ, ಅವೇ ಶಾಸ್ತ್ರಗ್ರಂಥಗಳ ಕಾಷ್ಠವನ್ನೇರ್ಪಡಿಸಿ ಈ ಪಶುಗಳನ್ನು ಸುಟ್ಟು ಬೊಟ್ಟಿ ಡುತ್ತಿದ್ದೆ. ವಿಧವೆಯರೆಲ್ಲಾ ಮದುವೆಯಾಗಿಯೇ ತೀರಬೇಕೆಂದು ಕಾನೂನು ಜಾರಿ ಮಾಡುತ್ತಿದ್ದೆ. ಎಂದು ಸಮಾಜದ ಮೇಲೆ ಕಿಡಿ ಕಾರಿದಳು.

ಮತ್ತು ಯೋಚಿಸಿದಳು: ಈ ನರಕಕೂಪದಿಂದ, ಈ ತಿಮಿರರಾಶಿ ಯಿಂದ ಪಾರಾಗಬೇಕು. ಆದರೆ ಇಲ್ಲೆ ಜನರು ಚುಚ್ಚುವಾಗ, ಅಲ್ಲಿ ಆ ಶಹರಿನ ನಡುವಿನಲ್ಲಿ, ಆ ವಿಲಾಸರಾಶಿಯಲ್ಲಿ ಹೇಗಿರಲಿ? ನನ್ನ ಶೀಲವನ್ನು ಕಾಪಾಡಿಕೊಂಡಿರಬಹುದೇ? ಬಾಲವಿಹಾರವೆಂದರೆ ನಾಲ್ಕಾರು ಜನರು ಆಗಾಗ ಸುಳಿದಾಡುವ ಸ್ಥಳ. ನಾನು ಹೀಗಾದವಳೆಂದು ಎಲ್ಲರೂ ತಿಳಿ ದಿರುವರು. ಅವರೆಲ್ಲರೂ ನನ್ನನ್ನು ಕೆಣಕಲಾರರೇ? ನಾನು ಅವರಿಂದ ಪಾರಾಗಬಹುದೇ? ಎಂದು ಮುಂತಾಗಿ ಯೋಚಿಸಿದಳು. ಆದರೂ ಇಲ್ಲಿಂದ ಹೋಗಬೇಕೆಂಬ ಅವಳ ಇಚ್ಛೆಯು ಬಲಿಯುತ್ತಿತ್ತು. ಶಂಕರ ರಾಯರ ಗುಣವನ್ನು ಅವಳು ಕೇಳದವಳಲ್ಲ. ಆ ಒಳ್ಳೆಯತನವು ಅವ ಳಿಗೆ ಪ್ರೋತ್ಸಾಹವನ್ನೀಯುತ್ತಿತ್ತು. ಅವಳ ಸದ್ಭಾವನೆಯು "ನೀನು ಅಲ್ಲಿಗೆ ಹೋಗು; ನಿನ್ನ ಕಲ್ಯಾಣವಾಗುವುದು" ಎಂದು ಹುರಿದುಂಬಿಸಿತು. ತನ್ನಿಂದ ಕೂಡಿದಷ್ಟು ಜಗತ್ತಿಗೆ ಒಳ್ಳೆಯದನ್ನೇ ಮಾಡುವೆನು ಎಂದು ಭಾವಿಸಿದಳು. ಬಾಲವಿಹಾರವನ್ನು ಸೇರುವೆನೆಂದು ನಿರ್ಧರಿಸಿದಳು. ಅವಳ ಮಾತೃ ಹೃದಯವು ಮಕ್ಕಳ ಲಾಲನೆಪಾಲನೆಯನ್ನು ಸಾಕಷ್ಟು ತೃಪ್ತಿಕರವಾಗಿ ಮಾಡಬಹುದೆಂದು ಭರವಸೆಯನ್ನಿತ್ತಿತು. ಆ ವೃದ್ಧೆ ಯಾದ ಸೂಲಗಿತ್ತಿಯನ್ನು ವಂದಿಸಿ, ಅವಳನ್ನು ಆಲಿಂಗಿಸಿ ಕಣ್ಣೀರು ಸುರಿಸುತ್ತಾ "ಅವ್ವಾ....." ಎಂದು ಗದ್ಗದಕಂಠದಿಂದ ಮತ್ತೇನನ್ನೂ ಹೇಳಲಾರದೆ, ಮರುದಿನ ಬಾಲವಿಹಾರಕ್ಕೆ ಹೋಗಲು ಸಜ್ಜಾದಳು.

2

ಶಾರದೆಯು ಸೇರಿದಂದಿನಿಂದ ಬಾಲವಿಹಾರದ ಸರ್ವತೋಮುಖ ಅಭಿ ವೃದ್ಧಿಯಾಯಿತು. ಶಂಕರರಾಯರ ಪ್ರಯತ್ನದಿಂದ ಬಳೆಯಬೇಕಾಗಿ

ದ್ದುದು, ಈಗ ತಾನಾಗಿಯೇ ಬಳೆಯಿತು. ಕೆಲವೇ ದಿನಗಳಲ್ಲಿ ಅವಳು ಅದರ ಮುಖ್ಯಾಧಿಕಾರಿಣಿಯಾದಳು. ಅದರ ದೈನಂದಿನ ಕಾರ್ಯಗಳು ಅವಳ ದಿಗ್ದರ್ಶಕತೆಯಿಂದಲೇ ನಡೆಯುವುವು. ಪ್ರತಿ ಸಿರಿವಂತ-ಬಡವರ ಮಕ್ಕಳೂ ಅವರ ಪ್ರವೇಶದೊರೆಯುವುದಕ್ಕಾಗಿ ಹಾತೊರೆಯುವವರೇ. ಅದರಿಂದ ಹೆಚ್ಚಿನ ಸಹಾಯಪಡೆಯುವವರು ಬಡಮಕ್ಕಳ ತಾಯಂದಿರು: ತಮ್ಮ ಮಕ್ಕಳನ್ನು ಅಲ್ಲಿ ಬಿಟ್ಟು ತಮ್ಮ ಕೆಲಸಗಳಿಗೆ ಹಾಯಾಗಿ ಹೋಗಬಹುದು. ಹಿಂದಿನಂತೆ "ಮನೆಯಲ್ಲಿ ಕುಳಿತರೆ ಕೂಳಿಗೆ ಗತಿಯಿಲ್ಲ; ಮನೆಯಿಂದ ಸಣ್ಣ ಹುಡುಗರನ್ನು ಬಿಟ್ಟು ಹೋಗುವುದಕ್ಕೂ ಆಗುವುದಿಲ್ಲವೆ"ಂಬ ಸಂದಿಗ್ಧ ಪರಿಸ್ಥಿತಿ ಈಗಿಲ್ಲ. ತಮಗಿಂತಲೂ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುವ ದಾದಿಯರು ಅಲ್ಲಿರುವರು. ಸಂಜೆ ಮನೆಗೆ ಬರುವಾಗ ಹುಡುಗರನ್ನು ಕರೆತಂದರಾಯಿತು. ಸಣ್ಣ ಶಿಶುಗಳಿಂದ ಹಿಡಿದು ಹದಿನಾರು ವರ್ಷದ ಕಿಶೋರರ ವರೆಗೂ ಅಲ್ಲಿ ಪ್ರವೇಶವಿದೆ; ವಸತಿಯಿದೆ; ಪಾಠಪ್ರವಚನವಿದೆ; ಆಡುವ ಸ್ಥಳವಿದೆ; ವಿಹಾರದ ಉದ್ಯಾನವಿದೆ. ಹುಡುಗರೆಲ್ಲರೂ ಸಂತೋಷದಿಂದ ಅಲ್ಲಿರುತ್ತಿದ್ದರು.

ಸಂಜೆಯ ಹೊತ್ತು ವಿಹಾರಕ್ಕಾಗಿ ಪೇಟೆಯ ಜನರೂ ಬರುತ್ತಿದ್ದರು. ಬಾರದೆ, ಅದರಷ್ಟು ಸಂತೋಷದಾಯಿ ಸ್ಥಳವು ಬೇರೊಂದಿಲ್ಲ. ಅಷ್ಟು ಹೊತ್ತಿಗೆ ಹುಡುಗರ ಆಟದ ಸಮಯವಾಗುವುದು. ಕೆಲ ಹುಡುಗರು ಜಾರುಗುಪ್ಪೆಯಲ್ಲಿ ಜಾರಿ ಮಳಲ ರಾಶಿಗೆ ಬೀಳುತ್ತಿದ್ದರು. ಕೆಲವರು ಉದ್ಯಾನದಲ್ಲಿ ತಿರುಗುತ್ತಿರುವ ಸಾಧುಪ್ರಾಣಿಗಳನ್ನು ಪೀಡಿಸುತ್ತಿರುವರು. ಕೆಲವರು ಕಾರಂಜಿಗೆ ತಲೆಯೊಡ್ಡಿ, ಮೈಯಿಡೀ ಒದ್ದೆಮಾಡುವರು. ಹಲವರು ಹಲವು ರೀತಿಯಲ್ಲಿ ಹಾರಾಡುವಾಗ, ಈ ಮಂಗಚೇಷ್ಟೆಯ ಮಕ್ಕಳಾಟವು ಯಾರಿಗೆ ಬೇಡವಾಗುವುದು?

ಹುಡುಗರು ಎಷ್ಟೇ ತಂಟೆ ಮಾಡಿದರೂ ದಾದಿಯರು ಹೊಡೆಯುತ್ತಿದ್ದಿಲ್ಲ; ಬಯ್ಯುತ್ತಿದ್ದಿಲ್ಲ. ಈ ಬಾಲವೃಂದದ ಹುಡುಗಾಟವನ್ನು ಸಹಿಸುವುದಕ್ಕೆ ಮಾತೃಹೃದಯದ ಮಾನಿನಿಯರೇ ಆಗಬೇಕೆಂದು ತಿಳಿದು, ಶಾರದೆಯು ಕೆಲವೇ ತಿಂಗಳುಗಳಲ್ಲಿ, ಅಲ್ಲಿ ಕೆಲಸ ಮಾಡುತ್ತಿದ್ದ ಉಪಾಧ್ಯಾಯರನ್ನು ನಿವೃತ್ತಿಗೊಳಿಸಿ, ಸ್ತ್ರೀಯರನ್ನು ನೇಮಿಸಿದ್ದಳು. ಮಕ್ಕಳು

ಇವರನ್ನು "ಅಮ್ಮಾ" ಎಂದು ಸಂಬೋಧಿಸುತ್ತಿದ್ದರು. ಶಾರದೆಯನ್ನು "ದೊಡ್ಡಮ್ಮ" ಎಂದು ಕರೆಯುತ್ತಿದ್ದರು. ಅವರಿಗೆ ದೊಡ್ಡಮ್ಮನೆಂದರೆ ಬಲು ಅಕ್ಕರೆ. ಭರತನಿಗಂತೂ ದೊಡ್ಡಮ್ಮ ಬಂದಂದಿನಿಂದ ಬೇರೆ ಯಾವುದೂ ಬೇಡ; ಅವಳನ್ನು ಬಿಟ್ಟು ಮನೆಗೆ ಹೋಗುವುದಕ್ಕೂ ಮನಸ್ಸಿಲ್ಲ. ತಂದೆಯು ಕಾರಿನಲ್ಲಿ ಕುಳಿತು ಮನೆಗೆ ಹೋದರೂ ದೊಡ್ಡಮ್ಮನಿಗಾಗಿ ಹಲುಬುತ್ತಿದ್ದನು. ಅಂತೂ ಶಾರದೆಯು ಬಂದು ಒಂದು ವರ್ಷದಲ್ಲಿಯೇ ಬಾಲವಿಹಾರವು ಎಲ್ಲರಿಗೂ ಬೇಕಾದ ಸಂಸ್ಥೆಯಾಯಿತು. ಈಗ ಶಂಕರರಾಯರು ನಿಶ್ಚಿಂತರಾದರು. ಬಾಲವಿಹಾರದ ದೈನಂದಿನದ ಆಡಳಿತೆಯಲ್ಲಿ ಅವರು ಕೈಹಾಕುವ ಅವಶ್ಯವಿಲ್ಲ. ಹೊರಗೆ ನಿಂತು, ಬೇಕಾದ ದ್ರವ್ಯ ಸಹಾಯದ ದಾರಿಯನ್ನು ಹುಡುಕಿದರಾಯಿತು. ಅದಕ್ಕಾಗಿ ಅವರು ಊರೂರು ತಿರುಗಾಡಿ, ಶ್ರೀಮಂತರನ್ನು ಕಂಡು ಅಪಾರ ದ್ರವ್ಯವನ್ನು ಸಂಗ್ರಹಿಸುತ್ತಿದ್ದರು.

ಶಾರದೆಯ ದೃಷ್ಟಿಯಲ್ಲಿ ತಾನು ಇಲ್ಲಿಗೆ ಬಂದುದು ಯೋಗ್ಯವೇ ಆಯಿತೆಂದು ಕಂಡುಬಂತು. ಅವಳಿಗೆ ಆವರಣದೊಳಗೆ ಪ್ರತ್ಯೇಕವಾದ ಮನೆಯಿದೆ. ಬಾಲವಿಹಾರದ ಕೆಲಸಗಳು ಮುಗಿದ ಬಳಿಕ, ತನ್ನ ಮನೆಯಲ್ಲಿದ್ದುಕೊಂಡು, ಯಾವುದಾದರೂ ಶೋಧನೆಯಲ್ಲಿರುವಳು. ಬಾಲವಿಹಾರದ ಅಭಿವೃದ್ಧಿಯ ಕುರಿತು ಏನೇನು ಮಾಡಲಿ ಎಂದು ಆಲೋಚಿಸುವಳು. ಅಲ್ಲದೆ ತನ್ನ ಹಿಂದಿ–ಸಂಸ್ಕೃತ ಅಭ್ಯಾಸವನ್ನು ಮುಂದುವರಿಸುವಳು; ಇಲ್ಲವೆ ತಾನು ಕಲಿತ ಕಸೂತಿಯಿಂದ ಏನಾದರೂ ಮಾಡುವಳು. ಅಥವಾ ತನ್ನ ಏಳಿಗೆಗೆ ಅನುಕೂಲವಾಗಲೆಂದು ಆಫೀಸಿನ ಕಾರ್ಯದರ್ಶಿಯನ್ನು ಕರೆಯಿಸಿ ಇಂಗ್ಲಿಷ್ ಕಲಿಯುವಳು. ಯಾರೊಡನಾದರೂ ವಿಹಾರದ ಕುರಿತು ಮಾತಾಡುವುದಿದ್ದರೆ, ನಿಯಮಿತವಾಗಿ, ಬೇಕಾದಷ್ಟೇ ಮಾತಾಡುವಳು. ಆಗಾಗ ಶಂಕರರಾಯರೊಡನೆ ಮಾತಾಡುವ ಸಂದರ್ಭವೊದಗಿದರೂ ತನ್ನ ಗಾಂಭೀರ್ಯವನ್ನು ಬಿಡದೆ ವರ್ತಿಸುತ್ತಿದ್ದಳು.

ಬಾಲವಿಹಾರವು ಏಳಿಗೆಗೆ ಬಂದಂತೆ ಶಾರದೆಯ ಘನತೆಯು ಕೀರ್ತಿಗಗನಕ್ಕೇರತೊಡಗಿತು. ಅವಳ ಮೇಲೆ ಹಿಂದೆ ಹಬ್ಬಿದ್ದ ಅಪವಾದದ

ಕಪ್ಪುಕಲೆಯು ಮಾಯವಾಗಿ, ಹಿಂದಿನದು ಕಟ್ಟುಕತೆಯಂತೆ ಪರಿಣಮಿಸಿತು. ಇಂತಹ ಗುಣವತಿಯು ದಾರಿತಪ್ಪಿ ನಡೆದಿರಲಾರಳು; ಇದರಲ್ಲಿ ಏನೋ ಗೌಪ್ಯವಿದೆ ಎಂದು ಕೆಲವರು ಭಾವಿಸಿದರು.

೮

"ನಿನ್ನ ಮಾತಿಗೆ ನಾನೊಪ್ಪಲಾರೆ, ಶಂಕರ"

"ಶಾಸ್ತ್ರಿಗಳೇ, ನಿಮ್ಮ ಅಭಿಪ್ರಾಯವು ನನಗೆ ಸರಿದೋರುವುದಿಲ್ಲ. ರಮೆಯೊಡನೆ ನಾನು ಕಳೆದ ಕಾಲವೆಂದರೆ ಅದು ಸ್ವರ್ಗ ಸಮಾನ. ಬೇರೊಬ್ಬಳು ಬಂದರೆ ಅಂತಹ ಅನುಪಮ ಪ್ರೇಮವನ್ನೀಯಲಾರಳು. ಅವಳೊಂದು ರತ್ನ. ಅಂತಹ ರತ್ನದ ಬದಲಿಗೆ ಹರಳುಕಲ್ಲನ್ನು ಧರಿಸಬೇಕೆ?"

"ಶಂಕರಾ, ನೀನು ಹೇಳುವುದೇನು? ಪ್ರಪಂಚದಲ್ಲಿ ಕೊಹಿನೂರೆಂಬ ಹೆಸರಿನ ವಜ್ರವೊಂದೇ ಇರುವುದಾದರೂ, ಅದಕ್ಕೆ ಸರಿಯಾದ ವಜ್ರ ಬೇರೆ ಇಲ್ಲವೇ? ಹಾಗೆ ತಿಳಿಯುವುದೇ ನಿನ್ನದು ತಪ್ಪಭಿಪ್ರಾಯ. ರಮೆಯೆಂಬವಳು ಬೇರೆ ಇರಲಾರಳಾದರೂ ಅವಳ ಗುಣದವರು ಬೇರಿರಲಾರರೇ? ಅವಳ ಗುಣವನ್ನೇ ತಿಳಿದ, ಅವಳ ಸಹವಾಸವನ್ನು ಅರಿತ ನಿನಗೆ ಹಾಗೆ ತೋರುವುದು ಸಹಜವೇ! ನೀನು ಮದುವೆಯಾಗು, ಆಗದಿರು; ನನಗೇನು? ಆದರೆ ನಿನ್ನಂತಹ ಅನುಪಮ ಪ್ರಭಾವವಿರುವವನು ಕೊರಗುವುದನ್ನು ನೋಡಿದರೆ, ನನಗೇ ಬೇಸರವಾಗುವುದು. ಹಾಗೆಂದು ನನ್ನದೇನೂ ಒತ್ತಾಯವಿಲ್ಲ. ನಿನ್ನ ಏಕಾಂತಜೀವನಕ್ಕೂ, ಮುಂದೆ ಪತ್ನಿಯೊಡಗೂಡುವ ಜೀವನಕ್ಕೂ ಅಜಗಜಾಂತರವಿದೆ. ಆಗ ನೀನೇ ಹೇಳುವೆ."

ಶಂಕರರಾಯರು ಮಾತಾಡಲಿಲ್ಲ; ಶಾಸ್ತ್ರಿಗಳ ಮಾತನ್ನು ತೂಗಿ ನೋಡಿದರು. ಏನೋ ತಥ್ಯಾಂಶವಿದೆಯೆಂದು ಮನಸ್ಸಿನ ಅಂತರಾಳದಲ್ಲಿ ಮೂಡಿದರೂ, ತನ್ನ ಧ್ಯೇಯವನ್ನು ಬಿಡುವುದಕ್ಕೆ ಮನಸ್ಸಿಲ್ಲ. ಈ ದಾರಿಯಲ್ಲಿ ಹೋದರಾಗದೆಂದು ತಿಳಿದು ಬೇರೊಂದು ರೀತಿಯಲ್ಲಿ ಮಾತಾಡಿ ಶಾಸ್ತ್ರಿಗಳನ್ನು ಸೋಲಿಸಬೇಕೆಂದು "ಶಾಸ್ತ್ರಿಗಳೇ, ಎರಡನೆಯ ಹೆಂಡತಿ

ಬಂದರೆ. ನನಗೆ ಒಂದು ವೇಳೆ ಸುಖವಾಗಲೂ ಬಹುದು. ಆದರೆ ಮಲತಾಯಿಯಿಂದ ಭರತನಿಗೇನು ಸುಖವಿದೆ? ಆಲೋಚಿಸಿರಿ. ಊರಿನ ಎಷ್ಟೋ ಕತೆ ಕೇಳಿರುವೆವಲ್ಲ: ಒಬ್ಬ ಮಲತಾಯಿಯಾದರೂ ಸವತಿಯ ಮಕ್ಕಳನ್ನು ಪ್ರೀತಿಸಿದುದೆಂದಿದೆಯೆ?" ಎಂದರು.

"ಎಲ್ಲರೂ ಸುರುಚಿ, ಕೈಕೇಯಿಗಳೆಂದು ತಿಳಿಯಬೇಡ. ಯಶೋದೆಯಂತಹರೂ ಇದ್ದಾರು......ಶಂಕರ, ನಾನಿನ್ನು ಹೋಗುವೆನು. ನಿನಗೆ ರುಚಿಸದ ಮಾತನ್ನು ನಾನಿನ್ನು ಆಡುವುದಿಲ್ಲ."

"ನಿಲ್ಲಿ ಶಾಸ್ತ್ರಿಗಳೇ, ಕೋಪಿಸಬೇಡಿರಿ. ನಾನು ಚರ್ಚಿಸುವುದು, ಅಷ್ಟೆ. ಸಿಟ್ಟಿನಿಂದ ಮಾತಾಡುವುದೆಂದು ಭಾವಿಸಬೇಡಿರಿ. ಒಂದು ವೇಳೆ, ನೀವೆಂದಂತೆ ಯಶೋದೆಯೊಬ್ಬಳಿರುವಳೆಂದೇ ತಿಳಿಯೋಣ. ಆದರೆ ನನ್ನಂತಹ ಮುದುಕರಿಗೆ ಹೆಣ್ಣು ಕೊಡುವವರಾರು?"

ಶಾಸ್ತ್ರಿಗಳಿಗೆ ರಾಯರು ಹಾದಿಗೆ ಬರುವರೆಂದು ತಿಳಿಯಿತು. ಈಗಲೇ ಇವನನ್ನು ಇಕ್ಕಳದಲ್ಲಿ ಹಿಡಿಯಬೇಕೆಂದು ಆಲೋಚಿಸಿ, "ಇದು ನಿನ್ನ ಬುದ್ಧಿಶೂನ್ಯತೆ. ನಿನಗೆ ಹುಡುಗಿಕೊಡುವವರಿರರೇ? ರಾಮ, ರಾಮ! ಯಾರೂ ಕೊಟ್ಟಾರು! ಮುಖ್ಯ, ನೀನು ಮದುವೆಯಾಗುವೆನೆಂದು ಹೇಳು. ಮೂರೇ ಮೂರು ದಿನಗಳಲ್ಲಿ ನೂರಾರು ಹುಡುಗಿಯರು ನಿನ್ನ ಕಾಲಬುಡದಲ್ಲಿ ಹೊರಳಾಡಿಯಾರು. ಈ ಮೊದಲೇ ನನ್ನಲ್ಲಿಯ ವರೆಗೆ ಅನೇಕ ವರಸಂಧಾನ ಪ್ರಸ್ತಾವಗಳು ಬಂದಿವೆ. ಆದರೆ ನಿನ್ನ ಅಭಿಪ್ರಾಯ ತಿಳಿಯದೆ ಸುಮ್ಮನಿದ್ದೆ. ಯಾರೂ ಕೊಡುವುದಿಲ್ಲವೆಂದರೂ, ನಾನಂತೂ ಸಿದ್ಧನೇ. ಆದರೆ ನನ್ನಂತಹ ಗರೀಬರ ಹೆಣ್ಣು ನಿನಗಾಗುವುದೇ? ನಿನಗೆ ಮಹಾರಾಜರಂತಹರ ಹೆಣ್ಣಾದರೆ, ನಿನ್ನ ಅಂತಸ್ತಿಗೆ ಸರಿಯೆನಿಸೀತು. ಇದೊಂದು ಹೊರತು ನಮ್ಮ ಹುಡುಗಿಗೆ ಬೇರೇನೂ ಕೊರತೆಯಿಲ್ಲ. ನಿನ್ನ ಧ್ಯೇಯಕ್ಕೊಪ್ಪುವ ಹೆಣ್ಣು. ಅವಳನ್ನು ಮದುವೆಯಾದರೆ, ನಿನಗೆ ಯಾವ ರೀತಿಯ ಕೊರತೆಯೂ ಆಗಲಾರದು......"

ಅಷ್ಟರಲ್ಲಿ ಫೋನಿನ ಗಂಟೆ ಕೇಳಿಸಿತು. ಅದರ ರಿಸೀವರಿಗೆ ಕಿವಿಯಿಟ್ಟು ಆಲಿಸಿ ಸಂತೋಷಭರಿತರಾಗಿ ರಾಯರು "ಶಾಸ್ತ್ರಿಗಳೇ, ನಾನೀಗ ಹೋಗಬೇಕಾಗಿದೆ. ಮೆಂಬರಿಕೆಯ ಓಟಿನ ಲೆಕ್ಕ ಮಾಡುವಾಗ ನನಗೇ

ಅಧಿಕವಂತೆ” ಎಂದು ಗಡಿಬಿಡಿಯಿಂದ ಹೊರಗೆ ಹೋದರು. ಇನ್ನು ಇಲ್ಲಿ ನಿಂತು ಏನು ಪ್ರಯೋಜನವೆಂದು ಭಾವಿಸಿ ಶಾಸ್ತ್ರಿಗಳು ಮೆಲ್ಲನೆ ಮನೆಯ ಕಡೆಗೆ ಎದ್ದರು. ಇಂದಿನ ಸಂವಾದದಲ್ಲಿ ಆಸೆಯ ರೇಖೆಯೊಂದು ಕಂಡಿತು. ಆದರೆ ಆ ಹಾಳು ಫೋನಿನಿಂದಾಗಿ ಮಾತು ಅರ್ಧದಲ್ಲೇ ನಿಂತಿತು; ಎಂದು ಅದನ್ನು ಶಪಿಸಿದರು. ಆದರೂ ತನ್ನ ಒಕ್ಕಣ್ಣಿನ ರತ್ನಾ ಶಂಕರನ ಹೆಂಡತಿಯೆಂದೇ ಭಾವಿಸಿದರು. ಈ ಸಂಬಂಧವು ಕೂಡಿದ ಮೇಲೆ ಏನೇನು ಮಾಡಬೇಕೆಂದು ಕನಸಿನ ಗೋಪುರವನ್ನು ಕಟ್ಟ ತೊಡಗಿದರು. ತನ್ನ ಮಗಳು ಪೀತಾಂಬರವನ್ನುಟ್ಟು, ರತ್ನಾಭರಣಗಳಿಂದ ಅಲಂಕೃತೆಯಾಗಿ ಒಯ್ಯಾರದಿಂದ ತಿರುಗಾಡುವ ಸೊಬಗನ್ನು ಊಹಿಸಿಕೊಂಡರು. ಅವಳೇಕೆ? ತನ್ನ ಹೆಂಡತಿಯೂ ಅಲಂಕಾರ ಮೂರ್ತಿಯಾಗುವಳು. ಮತ್ತೆ ತಮಗೆ ಹಳ್ಳಿಯ ಆ ಹಾಳು ಮನೆಯೇಕೆ? ಇಲ್ಲೇ ಬಂದು ಇದ್ದು ಬಿಟ್ಟರಾಯಿತು. ಇದ್ದು ಬಿಟ್ಟರೆ ಎಂದೇಕೆ? ಇಲ್ಲಿರದೆ ನಿರ್ವಾಹವೇ ಇಲ್ಲ. ಇವನು ಶಾಸನಸಭೆ, ಬಾಲವಿಹಾರ, ಮತ್ತೊಂದು ಮೊದಲೊಂದು ಎನ್ನುತ್ತಾ ಊರೂರು ಅಲೆದಾಡುವವನಾದರೆ, ಈ ಮನೆ, ಈ ಸಂಪತ್ತನ್ನು ಕಾಯುವವರಾರು? ಅದರ “ಮೇಕು ಬಂದಿ” ನೋಡುವವರಾರು? ನನ್ನ ಮಗಳನ್ನು ಕೊಟ್ಟ ಮೇಲೆ, ಮನೆಯ ಅಧಿಕಾರಿಣಿಯಾದವಳ ಒತ್ತಾಸೆಗಾಗಿ ನಾನಿಲ್ಲಿಯೇ ಇರಬೇಕಾಗುವುದು. . ಎಂದು ಮುಂತಾಗಿ ಆಲೋಚಿಸುತ್ತಾ ತಮ್ಮ ಬಿಡಾರವನ್ನು ಇಲ್ಲಿಗೆ ಸಾಗಿಸಿದ ಕನಸು ಕಂಡರು.

ಯಾವುದಕ್ಕೂ ಆ ಹಾಳು ಫೋನು ಅಡ್ಡಿಮಾಡಿತಲ್ಲ. ಅಲ್ಲವಾದರೆ ಎಲ್ಲ ಇಂದೇ ನಿಷ್ಕರ್ಷೆಯಾಗುತ್ತಿತ್ತು. ಅದಕ್ಕಾಗಿ ಇನ್ನೊಮ್ಮೆ ಬರಬೇಕಾಯಿತು; ಎಂದೆಣಿಸಿ ಚಾವಡಿಯಿಂದಿಳಿದರು. ತನ್ನ ಮಗಳ ಮನೆಯನ್ನೊಮ್ಮೆ ಗರ್ವದಿಂದ ನೋಡಿದರು. ಆಳುಗಳನ್ನೊಮ್ಮೆ ಹೆಣ್ಣು ಕೊಟ್ಟ ಮಾವನ ಠೀವಿಯಿಂದ ನೋಡಿದರು. ಕೊಟ್ಟಿಗೆಯಲ್ಲಿ ಸುಮ್ಮನೆ ಕುಳಿತಿದ್ದ ಕೆಲವರನ್ನು ನೋಡಿ ಸಿಟ್ಟಿನಿಂದ “ಎಲ್ಲಾ ಹಾಳು. ಇವರನ್ನು ಕೇಳುವವರೇ ಇಲ್ಲ. ಕೇಳುವುದಾದರೂ ಯಾರು? ಇವನಿಗೆ ಊರೂರು ಅಲೆದಾಟವಾಯಿತು. ಹೀಗೆ ಮಾಡಿದರಾಗದು. ನಾನೇ

ಸ್ವಲ್ಪ ವಿಚಾರಿಸಬೇಕೆ"ಂದು ಸಂಕಲ್ಪಿಸಿದರು. ರಾಯರ ಅಡಿಗೆ ಹೇಗು ಸಿನೊಡನೆ ಈ ಸಂತಸದ ಸುದ್ದಿಯನ್ನು ಗುಟ್ಟೆಂದು ಅರುಹಿ ಮೆಲ್ಲನೆ ತಲೆ ಬಾಗಿಲನ್ನಿಳಿದರು. ಅಲ್ಲೇ ಎದುರಾಗಿ ಸಿಕ್ಕಿದ ಭರತನನ್ನು ಕಂಡು ಅವ ನನ್ನೊಮ್ಮೆ ತಬ್ಬಿಕೊಂಡು "ಮಗೂ, ಬೇಗನೆ ನಿನಗೊಬ್ಬಳು ಚಿಕ್ಕಮ್ಮ ಬರುವಳು" ಎಂದು ಹೇಳಿ ಹೋದರು.

ಶಂಕರರಾಯರು ರಾತ್ರಿ ಎಂಟು ಗಂಟೆಗೆ ಮರಳಿದವರು ಊಟ ವಾಗಿ, ತಮ್ಮ ವಿಶ್ರಾಂತಿಗೃಹದಲ್ಲಿ ಕುಳಿತಿರುವರು. ಮನಸ್ಸು ಆಹ್ಲಾದ ಮಯವಾಗಿದೆ. ಶಾಸನಸಭೆಯ ಮೆಂಬರಿಕೆಯಲ್ಲಿ ಜಯವು ಲಭಿಸಿದೆ. ಎಷ್ಟೋ ಅಭಿನಂದನಪತ್ರಗಳು ಮೇಜಿನ ಮೇಲಿವೆ. ಹೊರಗೆ ಶುಭ್ರ ವಾದ ಬೆಳ್ದಿಂಗಳು ಹರಡಿತ್ತು. ಪಾರಿಜಾತದ ಪರಿಮಳವು ಕಳ್ಳ ಹಜ್ಜೆ ಯಿಂದ ಒಳಗೆ ನುಸುಳುತ್ತಿತ್ತು. ಅಷ್ಟರಲ್ಲಿ ಭರತನು ಬಂದು "ನನಗೊ ಬ್ಬಳು ಚಿಕ್ಕಮ್ಮ ಬರುವಳಂತೆ, ಹೌದೇ? "ತಾತ್ರಿ" ಹೇಳಿದ. ಅಪ್ಪಾ, ನನಗೆ ಚಿಕ್ಕಮ್ಮ ಬೇಡ, ದೊಡ್ಡಮ್ಮನೇ ಆಗಬಹುದು" ಎಂದನು. ಇದನ್ನು ಕೇಳಿ ರಾಯರಿಗೆ ಮೊದಲಿಗೆ ಏನೆಂದು ಅರ್ಥವಾಗಲಿಲ್ಲ. ಕೊನೆಗೆ, ಬೆಳಗ್ಗೆ ತನಗೂ ಶಾಸ್ತ್ರಿಗಳಿಗೂ ಆದ ಸಂವಾದವು ಜ್ಞಾಪಕಕ್ಕೆ ಬಂದು "ಹೂಂ ನೋಡೋಣ" ಎಂದು ಭರತನನ್ನು ತೊಡೆಯಲ್ಲಿ ಒರಗಿಸಿದರು. ತಲೆ ಬೆಳಗಿನ ಸಂವಾದದ ಕಡೆ ತಿರುಗಿತು. ಮದುವೆಯ ವಿಷಯವಾ ಗಿಯೇ ತನ್ನ ಮೆದುಳು ಕೆಲಸ ಮಾಡುತ್ತಿದೆ. ತಾನದಕ್ಕೆ ಪ್ರತಿಕೂಲ ನಾದರೂ, ಮೆದುಳು ಆ ಕಡೆಗೆ ಜಗ್ಗುತ್ತಿದೆ. ಪಾರಿಜಾತದ ಪರಿಮಳ ದಂತೆ ಮನೋಹರವಾದ ಆಲೋಚನೆಗಳು ತಲೆಯೊಳಗೆ ನುಸುಳುತ್ತಿವೆ. ಸುಂದರವಾದ ಬೆಳದಿಂಗಳು, ಪಾರಿಜಾತದ ಸುವಾಸನೆ ಯಾರಿಗೆ ಬೇಡ ವಾಗುವುದು? ಅದರಂತೆ ಸುಂದರ ರಮ್ಯ ಯೋಚನೆಗಳು ಬೇಡವಾಗು ವುವೆ? ಕಳೆದ ದಿನಗಳಲ್ಲಿ ಇಂತಹದೇ ಸುಂದರ ರಾತ್ರಿಗಳನ್ನು ಕಳೆದ ದಿನಗಳ ಕಡೆಗೆ ಮನಸ್ಸು ಹರಿದಾಡಿತು. ಅಂತಹ ದಿನಗಳು ಇನ್ನೂ ಬೇಡವೆಂದಾಗುವುವೇ? ರಮೆ......ಅಲ್ಲ......ಹೌದು......ಬೇಕು.

ಬಾಗಿಲಿನಲ್ಲಿ ತೂಗಾಡುವ ಮಣಿಮಾಲೆಗಳನ್ನು ಸರಿಸಿದ ಸದ್ದಾ ಯಿತು. ಆಶಾದೃಷ್ಟಿಯಿಂದ ನೋಡಿದರು. ಅಲ್ಲ; ಬೇಕಾದ ವ್ಯಕ್ತಿ

ಯಲ್ಲ. ಆಳೊಬ್ಬನು ಕಪ್ಪಿನಲ್ಲಿ ಹಾಲು ತುಂಬಿ ಒಳ ಬಂದನು. ಮನಸ್ಸಿನಲ್ಲಿ ಅವನ ಮೇಲೆ ತಿರಸ್ಕಾರವುಂಟಾಯಿತು. ಈಗ ಬೇಕಾದದ್ದು ಆಳಲ್ಲ; ಹಾಲಿನಂತೆ ಶುಭ್ರವಾದ ವಸನವನ್ನುಟ್ಟ ಕನಕಾಂಗಿಯಾಗಬೇಕಿತ್ತು. ಪಾರಿಜಾತದ ದಂಡೆಯನ್ನು ಮುಡಿದ, ತುಂಬುತುರುಬಿನ, ಚಂದ್ರಮನಂತೆ ಬೆಳಗುವ ಕಪೋಲಗಳುಳ್ಳ, ಮೃಗನೇತ್ರೆಯಿರಬೇಕಿತ್ತು....... ಚೆಕ್! ಏನು ಹಾಳು ಕಲ್ಪನೆ ಎಂದು ತಲೆಯನ್ನು ಜಾಡಿಸಿದರು. "ಮೊಟ್ಟೆ" (ಮಡಿಲು) ಯಲ್ಲಿ ಮಲಗಿದ್ದ ಭರತನನ್ನು ಹಾಸುಗೆಯಲ್ಲಿ ಮಲಗಿಸುವಂತೆ ಆಳಿನೊಡನೆ ಹೇಳಿದರು. ತಾವೂ ಹಾಸುಗೆಯಲ್ಲಿ ಮಲಗಿಕೊಂಡು ವೃತ್ತ ಪತ್ರಿಕೆಯನ್ನು ಬಿಡಿಸಿದರು. ಅದರ ಮುಖಪತ್ರದಲ್ಲಿ ಚಾರುದತ್ತ ವಸಂತಸೇನೆಯರು ಉದ್ಯಾನದಲ್ಲಿ ಕುಳಿತು ಮಾತಾಡುವ ದೃಶ್ಯದ ಚಿತ್ರವೊಂದು ಕಣ್ಣಿಗೆ ಕಾಣಿಸಿತು....ಇಂದು ಎಲ್ಲಿ ನೋಡಿದರೂ, ಏನು ಮಾಡಿದರೂ, ಎಷ್ಟು ತಡೆದರೂ ಅವರ ಕಣ್ಣೆದುರು ಮನಸ್ಸಿನೆದುರು ಕಾಣುವುದು ಬಾಲಿಕೆಯರ ಮುಖವೇ! ಅದಕ್ಕೆ ಕಾರಣ "ನನ್ನ ಮಗಳನ್ನು ಮದುವೆಯಾಗು" ಎಂದ ಶಾಸ್ತ್ರಿಗಳ ಮಾತೇ. ಶಾಸ್ತ್ರಿಗಳು ಇಂತಹ ಸುಧಾರಕರೆಂದು ತಿಳಿದಿದ್ದಿಲ್ಲ. ತನ್ನ ಮಗಳು ವಿಧವೆ ಶಾರದೆಯನ್ನು ಕೊಡುವೆನೆಂದರಲ್ಲ. ಇದಕ್ಕಿಂತ ಹೆಚ್ಚಿನ ಸುಧಾರಣೆಯಿದೆಯೇ?.....ಅಲ್ಲ, ಬೇರೆ ಮಗಳಿರಬಹುದೇ? ಹಾಗಿದ್ದರೆ "ನಿನ್ನ ಧ್ಯೇಯಕ್ಕೆ ಒಪ್ಪುವ ಹೆಣ್ಣುವಳು" ಎನ್ನುವ ಅಗತ್ಯವೇನು? ನಾನು ಪುನಃ ಮದುವೆಯಾಗುವುದಿದ್ದರೆ ವಿಧವೆಯನ್ನೇ ಎಂದು ಅವರೊಡನೆ ಹೇಳಿರುವೆನು. ಬೇರೆಯಾರೂ ಅಲ್ಲ. ನನ್ನ ಧ್ಯೇಯ ಅವರಿಗರಿತಿದೆ. ಆದುದರಿಂದಲೇ ಅವರು "ನಿನ್ನ ಧ್ಯೇಯಕ್ಕೆ ಸರಿಯಾದ ಹೆಣ್ಣು" ಎಂದು ಹೇಳಿದುದು. ಶಾರದೆ ನನ್ನವಳಾಗುವುದಾದರೆ, ಅವಳಿಗೆ ಬೇರೆ ಮದುವೆಯಾಗುವ ಅಭಿಪ್ರಾಯವಿದ್ದರೆ, ಅದರ ಸಂಧಾನಕ್ಕೆ ಬೇರೊಬ್ಬನ ಅವಶ್ಯವಿದೆಯೇ? ನಾನೇ ಅವಳೊಡನೆ ಯಥಾರ್ಥವಾಗಿ ಮಾತಾಡಲಾರೆನೇ? ಅವಳು ನನ್ನ......

ಹೀಗೆ ಎಣಿಸುವುದೂ ತಪ್ಪೆಂದು ಕಂಡಿತೊಮ್ಮೆ. ಬಳಿಕ, ಇದರಲ್ಲಿ ತಪ್ಪೇನು? ಈ ವಿಷಯದಲ್ಲಿ ಶಾಸ್ತ್ರಿಗಳು ಒಪ್ಪುವರೆಂದರ್ಥ. ಅವಳು ಒಪ್ಪುವುದಾದರೆ ಅಡ್ಡಿಯೇನು? ಅವಳ ಯಥಾರ್ಥ ಅಭಿಪ್ರಾಯವನ್ನು

ಕೇಳಿ ನೋಡೋಣ, ಎಂದಾಲೋಚಿಸಿದರು. ಶಾರದೆಯ ಸೌಂದರ್ಯ ಬುದ್ಧಿಶಕ್ತಿ ಅವರನ್ನು ಮೋಹಿಸಿದ್ದುವು. ಅಂತೂ ಶಾರದೆಯನ್ನು ವರಿಸುವುದಾದರೆ ಆಗಬಹುದು. ಭರತನೂ ದೊಡ್ಡಮ್ಮ ಆಗಬಹುದು ಎಂದಿರುವನು. ಅಂತಹ ಹಸುಳೆಗಳ ಮಾತು ಸತ್ಯ. ಹೇಗೂ ಈ ಘಟನೆಯು ನೆರವೇರುವುದೆಂದು ಶಕುನವನ್ನು ಕಲ್ಪಿಸಿಕೊಂಡರು.

X

ಈ ದಿನ ಬಾಲವಿಹಾರಕ್ಕೆ ಹೋಗುವಾಗ ಶಂಕರರಾಯರು ಶಾರದೆಯೊಡನೆ ಮಾತಾಡಬೇಕೆಂದು ಭಾವಿಸಿದ್ದರು. ಅವಳೊಡನೆ ಬಹಳ ಹೊತ್ತು ಮಾತಾಡುತ್ತಾ ಕುಳಿತಿದ್ದರೂ ಈ ವಿಷಯ ಪ್ರಸ್ತಾವಿಸುವುದಕ್ಕೆ ಸಂಕೋಚವೆನಿಸಿತು. "ಈ ಮಾತನ್ನೆತ್ತಿದರೆ, ನನ್ನನ್ನು ಏನೆಂದು ತಿಳಿದುಕೊಳ್ಳುವಳೋ? ಅವಳಿಗೆ ಈ ಅಭಿಪ್ರಾಯವಿದ್ದರೆ ಸರಿ. ಇಲ್ಲವಾದರೆ ನನ್ನ ಮೇಲೆ ಅಸಹ್ಯಪಟ್ಟುಕೊಳ್ಳುವಳೋ" ಎಂದು ಯೋಚಿಸಿದರು. ಆದಷ್ಟು ಬೇಗನೆ ಅವಳ ಅಭಿಮತವನ್ನು ತಿಳಿಯಬೇಕು. ಆದರೆ ಹೇಗೆ? ಅವಳನ್ನು ಕಂಡು ಮಾತಾಡುವ ಎಂದರೆ, ಉಸಿರೆತ್ತುವುದಕ್ಕೆ ಸಾಹಸವಾಗುವುದಿಲ್ಲ. ಕಾಗದ ಬರೆಯುವ ಎಂದರೆ, ನಾನು ಇಲ್ಲೇ ಇದ್ದು ಹೇಗೆ ಬರೆಯಲಿ?.....ಸರಿ. ಕಾಗದ ಬರೆದು ವಿಹಾರಕ್ಕೆ ಧನ ಸಂಗ್ರಹದ ಸಲುವಾಗಿ ಒಂದೆರಡು ವಾರ ಹೊರಗೆ ಹೋಗುವೆನು. ನಾನು ಬರುವಾಗ, ಅವಳು ಆಲೋಚಿಸಿ ತಯಾರಾದಾಳು ಎಂದು ಕೊಂಡರು.

೬

ಶಾರದೆಗೆ ಶಂಕರರಾಯರ ಪತ್ರ ನೋಡಿ ಒಮ್ಮೆ ಸಿಟ್ಟು ಬಂತು. ಅವರು ಇಂತಹ ನೀಚರೆಂದು ತಿಳಿದಿರಲಿಲ್ಲ. ನನ್ನನ್ನು ಮದುವೆಯಾಗುವರಂತೆ; ಘನ ಉದ್ದೇಶವಂತೆ!...ಗಂಡುಸರೆಲ್ಲರೂ ಹೀಗೆಯೇ ಏನು? ನಿರಾಧಾರಿ ಅಬಲೆಯರು ದೊರೆತರೆ ಏನಾದರೂ "ಡೋಂಗಿ" (ಮೋಸ) ಮಾಡಿ ಅವರನ್ನು ಬಲಿಗೆ ಹಾಕುವ ಯೋಚನೆಯೇ? ಹಿಂದೆ ನನಗೆ ನಾರಾಯಣನು ಆವಿಷವನ್ನು ತೋರಿಸಿ, ಸಮಾಜವನ್ನು ನೂತನ

ಪಥದಲ್ಲಿ ನಡೆಯಿಸುವೆನೆಂದು ಹೇಳಿ, ಕಡೆಗೆ ತಾನೇ ತೀರಿಕೊಂಡು, ನನ್ನನ್ನೊಂದು ಪಾಪಕೂಪಕ್ಕೆ ದೂಡಿದನು; ಅವನಿಗೆ ನನ್ನನ್ನು ವರಿಸುವ ಧೈರ್ಯವಿತ್ತೊ, ಇಲ್ಲವೋ, ಅದು ತಿಳಿಯದು. ಆದರೆ ಬಾಯಲ್ಲಿ ಉದ್ದುದ್ದ ಮಾತಾಡುತ್ತಿದ್ದನು. ಅವನೆಂದಂತೆ ಆಗಿದ್ದರೆ ಪರಿಣಾಮವೇನಾಗುತ್ತಿತೋ ಹೇಳಲಾರೆ. ಈಗ ದೂರಿಕೊಂಡು ಏನು ಪ್ರಯೋಜನ?...... ನನಗೂ ಆಗ ಬುದ್ಧಿಯಿರದೆ ಹೋಯಿತು. ಆ ದಿನದ ಅವನ ಸುಂದರ ಮುಖವನ್ನು ನೋಡಿ ಮೋಹಿಸಿದೆ, ಅವನ ಮೊಗದಲ್ಲಿ ಮೂಡಿದ ಮುತ್ತಿನಂತಹ ಬೆವರಮಣಿಗಳು ನನ್ನ ಬಾಯನ್ನು ಮುಚ್ಚಿಸಿದ್ದುವು. ನನ್ನ ಯೌವನವೂ ನನ್ನನ್ನು ವಂಚಿಸಿತ್ತು. ಈಗ ನಾರಾಯಣನನ್ನು ದೂರಿ ಫಲವಿಲ್ಲ. ನಾನೇ ಅಪರಾಧಿನಿ.....ಅವನೂ ಅಪರಾಧಿ. ಹೋಗಲಿ. ಇಲ್ಲಿ ಬಂದರೆ ಈ ಪ್ರೌಢ, ಸಂಸಾರ ಸಾಗರದಲ್ಲಿ ಈಜಾಡಿ ಬಳಲಿದ ಈ ಗಂಡು ಶಂಕರರಾಯರದೂ ಅದೇ ಅವಸ್ಥೆ. ಆದರೆ ಒಂದು: ಅವಗುಣದಲ್ಲಿ ಗುಣ: ಅವನಂತೆ ದುಡುಕಲಿಲ್ಲ. ನನ್ನೊಡನೆ ಅಂಗಲಾಚಿರುವರು. "ನಿನಗೆ ಇಷ್ಟವಿದ್ದರೆ ಮಾತ್ರ ಈ ಮಾತು" ಎಂದಿರುವರು. ಹಾಗೆ ಬರೆಯದೆ ನಾರಾಯಣನಂತೆ, ಯೌವನದ ಹುಚ್ಚಾಟವಾಡಲಿಲ್ಲ. ಸಾಗರದಂತೆ ಗಂಭೀರರಾದವರು. ಆದುದರಿಂದ ಇವರ ಮೇಲೆ ಸಿಟ್ಟಿಗಿಂತಲೂ ದಯೆಯುಂಟಾಗುತ್ತಿದೆ....

ಶಾರದೆಯ ಸಿಟ್ಟು ಕಡಮೆಯಾಯಿತು.......ಅವರಿಗೇನು ತಿಳಿಯುವುದು? ನಾರಾಯಣನ ಘಟನೆಯಾದ ಮೇಲೆ ನನ್ನ ಮನಸ್ಸೇ ಮುರುಟಿದೆಯೆಂದು ಅವರಿಗೆ ತಿಳಿಯದು. ನಾನು ಗೃಹಿಣಿಯಾಗಬೇಕೆಂದಿದ್ದ ಆಸೆ ಕಮರಿ ಹೋಗಿದೆ. ಪತ್ನಿಯಾಗಬೇಕೆಂದು ಬಯಸಿ ಏನೆಲ್ಲಾ ಆಯಿತು! ಇನ್ನು ಇಂತಹ ಬಣ್ಣದ ನುಣ್ಣನೆಯ ಮಾತನ್ನು ನಂಬಲಾರೆ. ಪಾಪ, ಅವರ ಆಶೆಯನ್ನು ತಿಳಿಸಿರುವರು. ತಿಳಿಸಲಿ, ನನಗೇನು?......ಇವರೆಲ್ಲರೂ, ವಿಧವೆಯರನ್ನು ವರಿಸುವುದಾದರೆ, ಸಮಾಜದ ಮುಖವನ್ನೇ ತಿರುಗಿಸುವುದೆಂದು ಗ್ರಹಿಸಿರುವರಲ್ಲ. ಏನು ಅವಿವೇಕ? ಒಬ್ಬನು ಒಬ್ಬಳು ವಿಧವೆಯನ್ನು ಕೈಹಿಡಿದರೆ, ಸಾಮಾಜಿಕ ಬುದ್ಧಿಗೆ ಕಲ್ಲುಹಾಕಿದಂತಾಗುವುದೇ? ಅದಕ್ಕೆ ಹಿಡಿದ ಕಿಲುಬು ತೊಳೆದು ಹೋಗುವುದೇ?

ಅವರಿಬ್ಬರಿಗೂ ಗತಿ ಇಲ್ಲದಂತಾಗುವುದು ನಿಜ. ಕರ್ಮಠ ಬ್ರಾಹ್ಮಣರು, ಗುರುಮಠದವರು ಬಹಿಷ್ಕಾರದ ಬ್ರಹ್ಮಾಸ್ತ್ರವೆತ್ತದಿರಲಾರರೇ? ಕರ್ಮಠರ ತಲೆಗಡಿಯಬೇಕು; ಅದು ಸಾಧಿಸದ ಮಾತು. ಸರಕಾರವೇ ಈ ಕಾರ್ಯ ವನ್ನು ನಡೆಯಿಸುವ ಹೊಣೆ ಹೊತ್ತರೆ ಸರಿಹೋದೀತು. "ವಿಧವೆಯರು ವಿವಾಹವಾದರೆ, ಅದಕ್ಕೆ ಯಾರೂ ಪ್ರತಿಹೇಳಕೂಡದು. ಅವರನ್ನು ಸಮಾಜದಲ್ಲಿ ಸೇರಿಸುವುದಕ್ಕೆ ಯಾರೂ ಆತಂಕಿಸಕೂಡದು. ಸಮಾಜದ ಇತರ ಜನರಂತೆಯೇ ಅವರನ್ನು ನಡೆಸಬೇಕು" ಎಂದು ಕಾಯಿದೆ ಯನ್ನು ತಂದರೆ ಈ ಸಮಸ್ಯೆಯು ಪರಿಹಾರವಾದೀತು. ಈ ಶಂಕರರಾಯರಂತೆ "ನಿನ್ನನ್ನು ಮದುವೆಯಾಗುವೆನೆ"ಂದರೆ, ಅದಕ್ಕೆ ಇಂದ್ರಿಯಗಳ ತೀಟೆ ಎಂದು ಮಾತ್ರ ಹೆಸರು.....

ಶಂಕರರಾಯರ ಪತ್ರಕ್ಕೆ ಅವಳ ಮನಸ್ಸು ಉತ್ತರ ಹೇಳತೊಡಗಿತು. "ನಿಮಗೆ ನಿಜವಾಗಿಯೂ ಈ ಸಮಸ್ಯೆಯನ್ನು ಬಿಡಿಸುವ ಮನಸ್ಸಿದ್ದರೆ ನೀವು ಶಾಸನಸಭೆಯ ಸದಸ್ಯರಷ್ಟೆ!–ಈ ರೀತಿಯ ಕಾಯದೆಯನ್ನು ಮಾಡಿರಿ. ಅಂದರೆ ನಿಮಗೆ ಅಜರಾಮರ ಕೀರ್ತಿಯಿದೆ. ಹಿಂದೆ ಆದ, ಈಗಿರುವ, ಮುಂದೆ ಆಗಲಿರುವ ವಿಧವಾವೃಂದವು ನಿಮ್ಮ ಪುತ್ತಳಿಯನ್ನು ರಚಿಸಿ ಪೂಜಿಸೀತು. ಬರೀ ನನ್ನನ್ನು ಮದುವೆಯಾದರೆ ಪ್ರಯೋಜನ ವಿಲ್ಲ. ಹೀಗೆ ಮಾಡಿ ಬಂದ ಮರುದಿನವೇ ಶಾರದೆಯ ಹೂಮಾಲೆ ನಿಮ್ಮ ಕಂಠದಲ್ಲಿ ಬೀಳುವುದು ....."

ಕೋಣೆಯ ದೀಪವೆಲ್ಲಾ ಒಮ್ಮೆಯೇ ಆರಿತು. ಇದೇನೆಂದು ಹೊರಗೆ ನೋಡಿದಳು. ಬೀದಿಯೆಲ್ಲಾ ಕತ್ತಲೆ. ಇದೇನೋ ವಿಂಚಿನ ಶಕ್ತಿಯ ತೊಡಕು ಎಂದು ತಿಳಿದುಕೊಂಡಳು. ಅವಳ ಯೋಚನೆಗಳು ದಿಕ್ಪಾಲು ಚದರಿದುವು. ಅವಳು ಬೇರೆ ದೀಪದ ವ್ಯವಸ್ಥೆ ಮಾಡ ಬೇಕೆಂದು ಹವಣಿಸಿದಳು. ವಿದ್ಯುದ್ದೀಪವಿದೆಯೆಂದು, ಬೇರೆ ಚಿಮಿಣಿ ದೀಪವಿಡುವವರಾರು? ಒಟ್ಟು ಗಡಿಬಿಡಿಯಲ್ಲಿ ಬಿದ್ದಳು. ಏನೂ ದೊರೆ ಯದೆ ಕಡೆಗೆ ತಲೆಗೆ ಹಾಕಲು ತಂದಿದ್ದ ಕೇಸ್ಟರೋಯಿಲನ್ನು, ಪೌಡರಿನ ಕರಡಿಗೆಯಲ್ಲಿ ಸುರಿದು, ಕರವಸ್ತ್ರವನ್ನು ಹರಿದು ಬತ್ತಿಮಾಡಿ ದೀಪವುರಿ ಸಿದಳು. ಆ ದೀಪದಿಂದ ಸರಿಯಾದ ಬೆಳಕು ದೊರೆಯಲಿಲ್ಲ. ಈ

ದೀಪದಲ್ಲೇನು ಮಾಡಲಿ? ಎಂದು ಮಲಗಿದಳು. ನಿದ್ದೆ ಬರುವವರೆಗೂ ಶಂಕರರಾಯರದೇ ಯೋಚನೆ. ಅವಳೂ ಮನುಷ್ಯ ವರ್ಗಕ್ಕೆ ಸೇರಿದ ವಳೇ. ಎಲ್ಲರಂತೆ ಅವಳಿಗೂ ಕಾಮನ ಬಾಣ ನಾಟುವುದು. ಅವಳೂ ಮದುವೆ ಬೇಡವೆಂಬ ಭಾವನೆಯುವಳಲ್ಲ. ಆದರೆ ಬುದ್ಧಿಶಕ್ತಿ ಹಿಂದಿನಂ ತಲ್ಲ; ಎಷ್ಟೋ ಬಳೆದಿದೆ. ನಾರಾಯಣನ ಅಂದವಾದ ಮುಖದಲ್ಲಿ ಬಿರಿಯುವ ಮುಗುಳಾದ ಕಿರುನಗೆಯನ್ನು ಅಂದು ಅವಳ ಬಾಲಿಶ ಮನವು ಆಶಿಸಿದ್ದರೆ, ಇಂದು ಶಂಕರರಾಯರ ಗಂಭೀರವದನದ ಸುಂದರ ಮಂದ ಹಾಸವನ್ನು ಪ್ರೌಢ ಚಿತ್ತವು ಆಶಿಸುವುದು. ಆದರೂ ದುಡುಕದೆ, ತನ್ನಿಂದಾಗಿ ಇತರರು ಉದ್ಧಾರವಾದರೆ ಆಗಲಿ ಎಂದು ತಾಳ್ಮೆಯಿಂದಿರು ವಳು. ಸಮಾಜದ ಭಯವಲ್ಲವಾದರೆ, ತನ್ನಂತೆ ಎಷ್ಟೋ ತರುಣ ವಿಧವೆ ಯರು ಸಂಸಾರ ಕಟ್ಟಿಕೊಳ್ಳಲು ಸಿದ್ಧರಿರುವರೆಂದು ಅವಳು ಅರಿತಿರು ವಳು. ಸಮಾಜದ ಭಯವು ಸರಕಾರದ ಕಾನೂನಿಂದ ಮಾಯವಾದರೆ ಎಷ್ಟೋ ಮಂದಿ ಸಂಸಾರಿಗರಾದಾರು ಎಂದು ಅವಳ ಚಿಕಿತ್ಸಕ ಬುದ್ಧಿ ಶೋಧಿಸಿದೆ. ಆದುದರಿಂದ ಶಾಸನ ಸಭೆಯಲ್ಲಿ ಸವ್ಯಸಾಚಿಯಂತಿರುವ, ವಾಕ್‌ಶಕ್ತಿಯುಳ್ಳ ಶಂಕರರಾಯರು ಇದೊಂದು ಕಾರ್ಯವನ್ನು ಮಾಡಿ ದರೆ, ಅವರನ್ನು ವರಿಸುವುದು ನಿಶ್ಚಯ ಎಂದು ಅವಳು ನಿಶ್ಚಯಿಸಿದಳು...

ನಿದ್ದೆಬಂದ ಶಾರದೆಗೆ ಕನಸೊಂದು ಕಾಣುತ್ತಲಿದೆ: ಶಾಸನಸಭೆಯ ಅಧಿವೇಶನವು ಆರಂಭವಾಗಿದೆ. ಶಂಕರರಾಯರು ಈ ಮಸೂದೆಯನ್ನು ಮಂಡಿಸಿದರು. ಅನೇಕರು ಆಕ್ಷೇಪವನ್ನೆತ್ತಿದ್ದರು. ಶಂಕರರಾಯರು ಅವರೆಲ್ಲರ ಆಕ್ಷೇಪಕ್ಕೆ ಸಮರ್ಪಕವಾದ ಉತ್ತರವನ್ನೀಯುತ್ತಿದ್ದಾರೆ. ಜಲಧಾರೆಯಂತೆ ಅವರ ವಾಕ್ಪ್ರವಾಹವು ಹರಿಯುತ್ತಿದೆ. ಅದನ್ನು ಕೇಳಿ ಸಭಾಸದರೆಲ್ಲರೂ ಸ್ತಬ್ಧರಾದರು. ಅವಿರೋಧವಾಗಿ ಮಸೂದೆಯು ಪಾಸಾಯಿತು.......ಶಂಕರ ಶಾರದೆಯರು ಊರಿಗೆ ಮರಳುತ್ತಿದ್ದಾರೆ. ವಿಮಾನ ನಿಲ್ದಾಣದಲ್ಲಿ ಅನೇಕರು ಶಂಕರರಾಯರನ್ನು ಸ್ವಾಗತಿಸುವುದಕ್ಕೆ ನೆರೆದಿದ್ದಾರೆ. ಅನೇಕ ವಿಧವೆಯರು ತಮ್ಮ ನೂತನ ಪತಿಗಳೊಡನೆ ಬಣ್ಣ ಬಣ್ಣದ ಸೀರೆ ಕುಪ್ಪಸಗಳನ್ನು ತೊಟ್ಟು ನಿಂತಿರುವರು. ದೂಳಿಸಿಂದಾ ವೃತವಾದ ಬಣ್ಣದ ಗಿಡಗಳು ಮಳೆಯಲ್ಲಿ ತೊಯ್ದು ಮೇಲೆ ಕಂಗೊಳಿಸು

ವಂತೆ ಕಂಗೊಳಿಸುತ್ತಿದ್ದಾರೆ. ಎಲ್ಲ ಹದಿನಾರು ವರ್ಷದೊಳಗಿನ ತರುಣ ವಿಧವೆಯರು. ಹಿಂದಿನ ಅವರ ರೂಪ-ಬೂದಿಗುಂಬಳದಂತೆ ತಲೆ, ಉಡುವುದಕ್ಕೆ ಕೆಂಪು ವಸ್ತ್ರ-ಮಾಯವಾಗಿ ಈಗ ಕಾಳನಾಗನಂತೆ ಜಡೆ. ಅರುಣ ಕಿರಣದಿಂದ ನೆಯ್ದಿರುವಂತಹ ವಸನ ಶೋಭಿಸುತ್ತಿದೆ. ಹಿಂದೆ ಮಣ್ಣಗೊಂಬೆಗಳಾಗಿದ್ದರೆ ಈಗ ಹೊನ್ನ ಪುತ್ತಳಿಗಳು. ಎಲ್ಲರೂ ಶಾರದೆಯ ಕಡೆಗೆ ಕೃತಜ್ಞತಾ ದೃಷ್ಟಿಯಿಂದ ನೋಡುತ್ತಿದ್ದಾರೆ. ಅವರನ್ನು ಬೆನ್ನಟ್ಟಿಕೊಂಡು, ಹಳೆಯ ಆಚಾರವು ವಿಚಿತ್ರ ರೂಪಿನಿಂದ ಬರುತ್ತಿದೆ. ಆದರೆ ಅದೇನೂ ಮಾಡದಂತೆ ಪೋಲೀಸರು ದಂಡಧಾರಿಗಳಾಗಿ ಕಾಯುತ್ತಿರುವರು. ಶಂಕರರಾಯರಿಗೆ ಅನೇಕರು ಹೊರೆ ಹೊರೆ ಹೂಮಾಲೆಗಳನ್ನು ಅರ್ಪಿಸಿದರು. ಮತ್ತೂ ಬರುತ್ತಿದೆ. ಸಾವಿರಗಟ್ಟಲೆಯಲ್ಲಿ ಬರುತ್ತಿದೆ. ಮಾಯಾಬಜಾರಿನಂತೆ ನೋಡಿದಲ್ಲಿ ಹೂಗಳ ರಾಶಿ. ಕೊನೆಗೆ ಶಂಕರರಾಯರು "ಸ್ನೇಹಿತರೇ, ನನಗಿನ್ನು ತಡೆಯುವ ಶಕ್ತಿಯಿಲ್ಲ. ನನ್ನ ಸಹಚರಿಯಾದ ಶಾರದೆಯಲ್ಲವಾದರೆ ಈ ಶಾಸನ ಉಂಟಾಗುತ್ತಿರಲಿಲ್ಲ. ಆದುದರಿಂದ ನನ್ನ ಬಗೆಗೆ, ಅವಳಿಗೆ ಮಾಲೆಯನ್ನರ್ಪಿಸಿರಿ" ಎಂದರು. ಅಷ್ಟು ಹೇಳಿದುದೇ ತಡ ಜಿರ್‍ರನೆ ಮುಖಕ್ಕೆ ಏನೋ ಬಿದ್ದಿತು; ಎಚ್ಚರವಾಯಿತು. ಮುಖದಲ್ಲಿ ಏನೋ ಹರಿದಾಡುತ್ತಿದೆ; ಜಿರಳೆಯೆಂದು ತಿಳಿಯಿತು.

೧೦

"ಶಾಸ್ತ್ರಿಗಳೇ ನೀವು ಬಾರದೆ ಮೂರು ತಿಂಗಳಾಯಿತು. ಏನೆಲ್ಲಾ ಮಾರ್ಪಾಟಗಳಾದುವು! ನಾನು ಈಗ ಒಂದು ನಿರ್ಧಾರಕ್ಕೆ ಬಂದಿರುವೆನು. ನಿಮ್ಮ ಮಗಳನ್ನು ಮದುವೆಯಾಗುವ ಏರ್ಪಾಡಿನಲ್ಲಿರುವೆನು."

ಶಾಸ್ತ್ರಿಗಳಿಗೆ ಇದನ್ನು ಕೇಳಿ ಸ್ವರ್ಗಲೋಕವು ಮೂರೇ ಗೇಣಿನಲ್ಲಿದೆಯೆಂದು ತೋರಿತು. "ಓಹೋ ಹಾಗೆ ನಿರ್ಣಯಿಸಿದೆಯಾ? ಬಹು ಸಂತೋಷ. ಹಾಗಾದರೆ ಅದರ ಸಿದ್ಧತೆಯನ್ನೇ ಮಾಡಬಹುದಲ್ಲ."

ಅದೇ ಸಿದ್ಧತೆಯಲ್ಲಿದ್ದೆ; ಪೂರ್ತಿಯಾಯಿತು. ಅದಕ್ಕಾಗಿಯೇ ನಾನು ಮದರಾಸಿಗೆ ಹೋದುದು."

"ಹಾಗಾದರೆ ನನ್ನ ಮಗಳು, ರತ್ನ ಕೃತಾರ್ಥಳು. ಅವಳ ಮನಸ್ಸಿನಲ್ಲಿಯೂ ನೀನೇ ಪತಿಯಾಗಬೇಕೆಂದಿದೆಯೆಂದು ತೋರುವುದು. ನಿನ್ನ ವರ್ತಮಾನ ಮಾತಾಡುತ್ತಿರುವಾಗ, ಅವಳು ಬಾಗಿಲ ಸಂದಿನಲ್ಲಿ ನಿಂತು ಕಿವಿಗೊಟ್ಟು ಕೇಳುವಳು"

"ಯಾವ ರತ್ನ? ಅದೊಂದೂ ನನಗರಿಯದು. ನಾನು ನಿಮ್ಮ ಪುತ್ರಿ ಶಾರದೆಯನ್ನು ವಿವಾಹವಾಗುವುದೆಂದು ನಿರ್ಣಯಿಸಿದ್ದೇನೆ."

ಶಾಸ್ತ್ರಿಗಳಿಗೆ ಇದನ್ನು ನಂಬಬಹುದೇ ಎಂಬ ಸಂದೇಹ ತೋರಿತು. ಮೊದಲು ನಂಬಿಕೆ ಬಾರದಿದ್ದರೂ, ಶಾರದೆ ಹಿಂದೊಮ್ಮೆ ಇದೇ ರೀತಿಯುವರನ್ನೇ ಬಲೆಗೆ ಹಾಕಿದವಳೆಂದು ಖಂಡಿತ ತಿಳಿದಿದ್ದುದರಿಂದ, ಈಗ ನಂಬಬೇಕಾಯಿತು. ಅವರ ಆಶಾಗೋಪುರವು ಜರಿದು ಬಿದ್ದಿತು. ಶಾರದೆ ಅಂತಹವಳೇ; ಆದರೆ ಈ ದೇವತಾ ಮನುಷ್ಯ ಶಂಕರರಾಯರು ಈ ಕಾರ್ಯಕ್ಕೆ ಒಪ್ಪಿದರೇ? ಈವರೆಗೆ ಸಚ್ಚರಿತ್ರರು ಎಂದು ಹೆಸರು ಗಳಿಸಿದವರು, ಈಗ ಇಂತಹ ನೀಚ ಕೃತ್ಯವನ್ನು ಎಸಗುವರಲ್ಲಾ ಎಂದು ಭಾವಿಸಿ ಸಿಟ್ಟಿನಿಂದ "ಏನೂ ಹುಡುಗಾಟಿಕೆಯಲ್ಲ ತಾನೇ? ನಿನ್ನ ವಂಶಪರಂಪರೆಯನ್ನು ಆಲೋಚಿಸು. ನಿನ್ನ ಪೂರ್ವಜರು ಇಂತಹ ಕಾರ್ಯವನ್ನು ಮಾಡಿದವರಲ್ಲ. ಹಾಗಿದ್ದು ನೀನು ವಿಧವೆಯನ್ನು, ಅದರಲ್ಲೂ ಜಾರೆಯಾದ ಕೆಟ್ಟ ಸೂಳೆಯನ್ನು ಮದುವೆಯಾಗುವೆಯಾ? ಸ್ವರ್ಗದಲ್ಲಿ ವಾಸ ಮಾಡುವ ನಿನ್ನ ಪೂರ್ವಜರ ಹಿಂದಿನ ಏಳು ತಲೆಮಾರಿನವರನ್ನೂ, ಮುಂದಿನ ಪೀಳಿಗೆಯ ಏಳು ತಲೆಮಾರಿನವರನ್ನೂ ನರಕಕ್ಕೆ ತಳ್ಳುವೆಯಾ? ಅಷ್ಟು ಮಾತ್ರವಲ್ಲ, ನಮ್ಮ ಗುರುಗಳ ಆಸ್ಥಾನದಲ್ಲಿ ನೀನು ಮುಖಂಡ; ಶ್ರೀಪಾದದಿಂದ ನಿನಗೆ ಏನು ಶಿಕ್ಷೆಯಾದೀತೆಂದು ಆಲೋಚಿಸಿರುವೆಯಾ? ಏನಾದರೂ ಹುಡುಗಾಟ ಮಾಡಬೇಡ. ಇನ್ನೊಮ್ಮೆ ಚೆನ್ನಾಗಿ ಯೋಚಿಸು" ಎಂದರು.

"ಚೆನ್ನಾಗಿ ಯೋಚಿಸಿರುವೆನು. ಶ್ರೀಪಾದಕ್ಕೆ ಶಿಕ್ಷೆಯನ್ನೀಯುವ ಅಧಿಕಾರವಿಲ್ಲವೆಂದೂ ನಾನು ಬಲ್ಲೆ; ನೀವು ತಿಳಿಯಲಿಲ್ಲ. ಅದನ್ನರಿಯದೆ, ಏನಾದರೂ ಮಾತಾಡಿ, ಕಾನೂನಿಗೆ ವಿರೋಧವಾಗಿ ನಡೆದು, ಜೈಲಿಗೆ ಹೋಗಬೇಡಿರಿ. ನಾನು ಈ ಕಾರ್ಯಕ್ಕೆ ಕೈಯಿಕ್ಕುವ ಮೊದಲೇ

"ಯಾರಾದರೂ ವಿಧವಾವಿವಾಹ ಕಾರ್ಯಕ್ಕೆ ಅಸ್ತಿಯಾದರೆ ಅವರನ್ನು ಸರಕಾರವು ಉಗ್ರವಾಗಿ ದಂಡಿಸುವುದು" ಎಂಬ ಶಾಸನವನ್ನು ರಚಿಸಿರುವೆನು ಎಂದು ನೀವು ಅರಿತಿಲ್ಲ. ಇನ್ನೆಲ್ಲಿ ನಿಮ್ಮ ಸಮಾಜ, ಎಲ್ಲಿಯ ಮತ, ಎಲ್ಲಿಯ ಸ್ವರ್ಗ–ನರಕ? ಆ ಶಾಸನಕ್ಕೆ ಇನ್ನೂ ಅಧಿಕಾರದ ಮುದ್ರೆಯಾಗಿಲ್ಲ. ಇಷ್ಟರಲ್ಲಿ ಆಗಿರಲೂ ಬಹುದು. ಆವರಿಗೆ ಮಾತಾಡಿಕೊಳ್ಳಿ. ಮತ್ತೆ ಮಾತ್ರ ಜೈಲಿನ ಅನ್ನ ಉಣ್ಣಬೇಕಾದೀತು. ಇನ್ನು ಸ್ವರ್ಗ–ನರಕದ ಹೆದರಿಕೆಯನ್ನು ತೋರಿಸಿದಿರಿ. ನಿಮಗೆ ಆ ಹೆದರಿಕೆಯಿದೆಯೇ? ನಿಮ್ಮ ಹಿಂದಿನ ಕತೆ ಮರೆತಿದೆಯೇ? ಹಾಗಿದ್ದರೆ ನಾನೇ ನೆನಪು ಮಾಡಿಕೊಡುತ್ತೇನೆ. ಕೆಲವು ವರ್ಷಗಳ ಹಿಂದೆ, ನಿಮ್ಮ ಹೆಂಡತಿ ಹಡೆದಿದ್ದಾಗ ಅವಳ ಶುಶ್ರೂಷೆಗೆಂದು ಬಂದಿದ್ದ, ಆ ದಿಕ್ಕಿಲ್ಲದ ವಿಧವೆಯನ್ನು "ಮಂಕಾಡಿಸಿ" ನಿಮ್ಮ ಕಾಮಲಾಲಸೆಯನ್ನು ತೀರಿಸಿಕೊಂಡು ಅವಳು ಗರ್ಭಿಣಿಯಾದ ಮೇಲೆ ನಿಮ್ಮ ಹೆಸರನ್ನವಳು ಹೇಳಿಯಾಳೆಂದು ಹೆದರಿ, ನಿಮ್ಮ ಹಿತ್ತಲಿನ ಬಾವಿಗೆ ದೂಡಿ, ಕಾಲು ಜಾರಿ ಬಿದ್ದಳೆಂದು ವದಂತಿಯನ್ನು ಹಬ್ಬಿಸಿ, ಆ ತಪ್ಪಿನಿಂದ ಪಾರಾದುದರ ಅರಿವಿದೆಯೆ? ಎಷ್ಟು ಹಣ ವೆಚ್ಚಮಾಡಿದಿರಿ! ಹೋಗಲಿ. ಆಗ ನಿಮಗೆ ಪಾಪದ ಭೀತಿಯಿರಲಿಲ್ಲ! ನಿಮ್ಮ ಸ್ವರ್ಗದ ಬಾಗಿಲು ಆಗ ಮುಚ್ಚಿತ್ತೆ? ನರಕ ಸ್ಥಾಪನೆಯಾಗಿದ್ದಿಲ್ಲವೆ? ಅದು ಹಿಂದಿನ ಕತೆ. ಪಾಪ, ಆ ಶಾರದೆಯ ಸಂಪತ್ತನ್ನೆಲ್ಲಾ ದೋಚಿಕೊಂಡು, ಅವಳನ್ನು ಹೊಲೆಗೇರಿಯಲ್ಲಿರಿಸುವಾಗಲೂ ನಿಮಗೆ ಪಾಪದ ಭೀತಿಯಿದ್ದಿಲ್ಲ. ಅಲ್ಲವೆ?"

ಶಾಸ್ತ್ರಿಗಳಿಗೂ ಸಿಟ್ಟು ಬಂದಿತ್ತು. "ಅವಳು ಮಾಡಿದ ತಪ್ಪಿಗೆ ಹಾಗೆ ಮಾಡಿದೆ. ಅವಳಂತಹ ತಾಟಕಿಯರು ಬೇರಿಲ್ಲ. ನಿನ್ನನ್ನೂ ಬಲಿಗೆ ಹಾಕಿಕೊಂಡಿರುವಳು" ಎಂದು ಕನಲಿದರು.

"ಅವಳ ಕತೆಯನ್ನು ನಾನು ಅವಳಿಂದಲೇ ಕೇಳಿ ಅರಿತಿರುವೆನು. ತಾನು ಹೀಗಾದವಳು ಎಂದು ಹೇಳಿ, ನಿಮ್ಮ ಇಚ್ಛೆಯಿದ್ದರೆ ಆಗಿರಿ ಎಂದು ಹೇಳಿರುವಳು. ಇದು ಅವಳ ತಪ್ಪಲ್ಲ. ಸ್ವಲ್ಪ ಅವಳ ಪ್ರಾಯದ ತಪ್ಪು. ನಿಮ್ಮಂತಹ "ಧಾರ್ಮಿಕ"ರ ತಪ್ಪು. ಸ್ವಲ್ಪ ನಾರಾಯಣನ ತಪ್ಪು. ನಾರಾಯಣನು "ಮದುವೆ ಕೆಲದಿನಗಳ ಅನಂತರ" ಎಂದಾಗ ಒಪ್ಪಿದುದು

ಇವಳ ತಪ್ಪು. ವಿಧವೆಯರಿಗೆ ಪುನರ್ವಿವಾಹದ ಅಧಿಕಾರವೀಯದಿದ್ದುದು ಧಾರ್ಮಿಕರ ತಪ್ಪು. ಅವಳನ್ನು ರಮ್ಯ ವಚನಗಳಿಂದ ರಮಿಸಿದುದು ನಾರಾಯಣನ ತಪ್ಪು"

ಇದು ಕೊನೆಯ ಉಪಾಯವೆಂದು "ಯಾರೋ ಒಬ್ಬನೊಡನೆ ಕಳ್ಳ ವ್ಯವಹಾರವನ್ನು ನಡೆಯಿಸಿದವಳನ್ನು ನೀವು ಮದುವೆಯಾಗುವಿರಿ! ನೀವು ವಿವಾಹವೆಂಬ ಪೂಜ್ಯ ಕಾರ್ಯವನ್ನು ಮಾಡುವಿರಾ ಅಥವಾ ಸೂಳೆಯನ್ನಿಡಿಸಿಕೊಳ್ಳುವಿರಾ? ಮನುಷ್ಯನಿಗೆ ಮುಖ್ಯ ನಾಚಿಕೆಯಿರಬೇಕು" ಎಂದು ವ್ಯಂಗ್ಯವಾಗಿ ನುಡಿದರು.

"ಸಾಕು ಮಾಡಿರಿ. ನನ್ನ ಉದ್ದೇಶವೇ ಹಾಗಿತ್ತು. ವಿಧವೆ, ಅದರಲ್ಲೂ ಪತಿತೆ, ಹೆತ್ತತಾಯಿತಂದೆಯವರಿಂದ ಬೇಡವೆಂದು ತಿರಸ್ಕರಿಸಲ್ಪಟ್ಟವಳು,—ಅಂಥವಳೇ ಆಗಬೇಕೆಂದಿದ್ದೆ. ಅವಳು ದೊರೆತುದೇ ನನ್ನ ಭಾಗ್ಯ. ನೀವು ಇನ್ನೊಮ್ಮೆ ಈ ರೀತಿ ಕೊಂಕಾಗಿ ನುಡಿದರೆ, ಇನ್ನೂ ನಿಮ್ಮಬುದ್ಧಿಯ ಮಂಕಳಿಸದಿದ್ದರೆ, ಕಾನೂನಿನ ಮೂಲಕ ನಿಮ್ಮನ್ನು ಎಚ್ಚರಿಸಬೇಕಾದೀತು; ಜಾಗ್ರತೆ. ನನ್ನಂತಹ ಪಾಪಿಯ ಮನೆಯಲ್ಲಿ ನೀವಿರಕೂಡದು. ನಿಮಗೂ ಪಾಪದ ಕಲಂಕವು ಅಂಟಿಹೋದೀತು. ಜಾಗ್ರತೆಯಾಗಿ ಹೊರಡಿರಿ" ಎಂದು ಗದರಿಸಿದರು. ಶಾಸ್ತ್ರಿಗಳು ಮೆಲ್ಲನೆ ಕಾಲಿಗೆ ಬುದ್ಧಿ ಹೇಳಿದರು. "ಏನು ಕಾನೂನೋ, ಏನು ಸರಕಾರವೋ? ಯಾವ ಸರಕಾರವಾದರೂ ಗುರುಮಠಕ್ಕೆ ಎದುರು ನಿಂತುದಿಲ್ಲ. ಇನ್ನಾದರೂ ಇವನ ಸರಕಾರ ಏನು ಮಾಡುವುದೋ ನೋಡೋಣ. ಇವನ ತಲೆಗೇರಿದ ಪಿತ್ತವನ್ನಿಳಿಸಿಯೇ ತೀರುವೆನು. ಇವನ ತಾಯಿಯ ವೈದಿಕಕ್ಕೆ ಯಾವ ಬ್ರಾಹ್ಮಣರು ಬರುವರೋ ನೋಡುತ್ತೇನೆ" ಎಂಬ ಪ್ರತೀಕಾರ ಬುದ್ಧಿಯಿಂದ ಹೋದರು.

೧೧

ತಾ. 24—6—1949 "ನವಜೀವನ"ವೆಂಬ ಪತ್ರಿಕೆ ಈ ರೀತಿ ಸುದ್ದಿಯನ್ನು ಬೀರಿತು:

"ನಿನ್ನೆ ಪ್ರಾತಃಕಾಲ ಬಾಲವಿಹಾರದ ಸಭಾಭವನದಲ್ಲಿ, ನಮ್ಮೂರ ಪ್ರಸಿದ್ಧ ಮುಂದಾಳುಗಳಾದ ಶಂಕರರಾಯರಿಗೆ, ಬಾಲವಿಹಾರದ ಅಧ್ಯ

ಶಾರದಾದೇವಿಯೊಡನೆ ವಿವಾಹ ಸಮಾರಂಭವು ಜರಗಿತು. ಅರ್ಥ ತಿಳಿಯದ ಮಂತ್ರಗಳ ಸುರಿಮಳೆಯಿಲ್ಲದೆ, ನವೀನ ರೀತಿಯಿಂದ ನಿರಾಡಂಬರವಾಗಿ ಈ ಕಾರ್ಯವು ನೆರವೇರಿತು. ಇದು ಸುಧಾರಣೆಯ ಪ್ರಥಮ ಸೋಪಾನವೆನ್ನಬಹುದು. ಅಷ್ಟು ಮಾತ್ರವಲ್ಲ, ಅದೇ ಕಾಲಕ್ಕೆ ಸರಿಯಾಗಿ, ವಿಧವಾವಿವಾಹಕ್ಕೆ ಅಡ್ಡಿಯಾಗುವಂತಹ ಸನಾತನಿಗಳನ್ನು ದಿಗ್ಬಂಧಿಸುವಂತಹ, ಅವರ ಬಾಯಿಗೆ ಬೀಗ ಹಾಕುವಂತಹ, ಮನಸ್ಸಿರುವ ವಿಧವೆಯರ ಭೀತಿಯನ್ನು ಕಳೆದೊಗೆಯುವಂತಹ ಮಸೂದೆಯು ಅಧಿಕಾರದ ಮುದ್ರೆಯನ್ನು ಪಡೆಯಿತೆಂಬ ತಂತಿಯು ಬಂದುದು ಸಂತೋಷದ ಸಮಾಚಾರ. ಪಿಷ್ಕರಸಮಾಜವು ಹೊರತಳ್ಳಿದ್ದ ಯಾರಿಗೂ ಬೇಡವಾಗಿದ್ದ ಶಾರದಾದೇವಿಯವರನ್ನು ಶಂಕರರಾಯರು ಕೈಹಿಡಿದುದು ಅಭಿನಂದನೀಯ. ನೂತನ ದಂಪತಿಗಳಿಗೆ ದೀರ್ಘಾಯುಷ್ಯವಿರಲಿ ಎಂಬುದು ನಮ್ಮ ಪ್ರಾರ್ಥನೆ"

ತಾ 26-6-49ರ "ವೇದವಾಕ್ಯ"ವು ಈ ರೀತಿ ಪ್ರಕಟಿಸಿತು:

"ಈ ದಿನ ಸ್ಥಳೀಯ ಮಹಾಬಲೇಶ್ವರ ದೇವಸ್ಥಾನದಲ್ಲಿ ಊರ ಘನ ಪಂಡಿತರ, ಶಾಸ್ತ್ರಿಗಳ ಮಹಾಸಭೆ ಜರಗಿತ್ತು. ನೂತನವಾಗಿ ನಡೆದ ಈ ವಿಧವಾವಿವಾಹವನ್ನು ಖಂಡಿಸುವುದೇ ಸಭೆಯ ಉದ್ದೇಶವಾಗಿತ್ತು. ಸಭಾಧ್ಯಕ್ಷರಾದ ಚಂದ್ರಶೇಖರ ಶಾಸ್ತ್ರಿಗಳು ಮೂರು ಗಂಟೆಯ ಕಾಲ "ವಿಧವಾವಿವಾಹಕ್ಕೆ ವೇದವು ಅಧಿಕಾರ ಕೊಟ್ಟಿಲ್ಲ. ಆದುದರಿಂದ ಇದು ಕೂಡದು. ಇದನ್ನು ಈಗಲೇ ನಿಲ್ಲಿಸಬೇಕು" ಇತ್ಯಾದಿಯಾಗಿ ನಿರರ್ಗಳಭಾಷಣ ಮಾಡಿದರು. ಈ ಕಾರ್ಯ ನಡೆದುದಕ್ಕೆ, ಆಯಾ ಜನರನ್ನು ನಮ್ಮಿಂದಾದಷ್ಟು ಶಿಕ್ಷಿಸಬೇಕು. ಉಳಿದ ಶಿಕ್ಷೆಯನ್ನು ಭಗವಂತನು ಪರಲೋಕದಲ್ಲಿ ವಿಧಿಸಿಯಾನು ಎಂದು ಸರ್ವಾನುಮತದಿಂದ ನಿರ್ಣಯಿಸಿದರು."

"ಸರ್ವಾಸ್ತ"ವೆಂಬ ಪತ್ರಿಕೆ ಈ ರೀತಿ ಬರೆಯಿತು:

"ನಮ್ಮ ನಗರದಲ್ಲಿ ನೂತನವಾಗಿ ಜರಗಿದ ವಿಧವಾವಿವಾಹವನ್ನು ಖಂಡಿಸುವುದಕ್ಕಾಗಿ ಸೇರಿದ್ದ ಸನಾತನಿ ಮುಖಂಡರನ್ನು, ನೂತನವಾಗಿ ಜಾರಿಗೆ ಬಂದ ಶಂಕರನುಸೂದೆಯನ್ವಯವಾಗಿ ನಗರದ ಪೋಲೀಸರು ಸೆರೆಹಿಡಿದಿರುವರು. ಅವರಲ್ಲಿ ಶಾರದಾದೇವಿಯವರ ತಂದೆ ರಾಮಶಾಸ್ತ್ರಿ

ಗಳೂ ಸೇರಿರುವರು. ಡಾಂಭಿಕ ಸನಾತನಿಗಳಿಗೆ ಇನ್ನಾದರೂ ತಿಳುವಳಿಕೆ ಬಂದೀತೇ?

ಸುಂದರವಾದ ಮುಂಜಾನೆ ನೇಸರುದಿಸುವುದನ್ನು ಮಂಜಿನೆಡೆಯಲ್ಲಿ ಚೆಂಗುಲಾಬಿಯರಳುವುದನ್ನು, ಎಳೆ ಬಿಸಿಲಿಗೆ ನಳನಳಿಸಿ ಬಿರಿಯುವ ತಾವರೆಯನ್ನು, ಆಪ್ಯಾಯಮಾನವಾಗಿ ಬೀಸುವ ಮಂದಾನಿಲವನ್ನು, ಶೀತಲವಾದ ಕಿರಣವನ್ನು ಬೀರುವ ಚಂದ್ರಮನನ್ನು, ನಿಮ್ಮ ಕಾರ್ಯವಾದ ಬೇಡಿರಿಂದು ನಿಲ್ಲಿಸುವ ಶಕ್ತಿ ಮನುಷ್ಯನಿಗಿದೆಯೇ? ಅದು ಪ್ರಕೃತಿ; ಅದು ಆಗಿಯೇ ತೀರುವುದು. ಅದರಂತೆ ಗಂಡ ತೀರಿದ ಬಾಲಿಕೆಯರ ತಲೆ ಬೋಳಿಸಿ, ಕಾವಿಬಟ್ಟೆಯುಡಿಸಿದರೆ, ಅವರ ದೇಹದ ಕಾಮವು ತಗ್ಗುವುದೇ? ಪ್ರಕೃತಿಯು ಅವರನ್ನು ಪ್ರಚೋದಿಸುವುದಿಲ್ಲವೆ? ಕಾಮನೆಯು ಬಣ್ಣಬಣ್ಣದ ಪತಂಗದಂತೆ ಮನೋಮಂದಿರದ ಮುಂದೆ ಹಾರಾಡುವುದಿಲ್ಲವೆ? ಇನ್ನಾದರೂ ಅವರಿಗೆ ಸರಿಯಾದ ದಾರಿಯನ್ನು ತೋರುವುದು ಲೇಸು.

ಶಾರದಾಶಂಕರರೇ, ಅವರ ದಾರಿಯಲ್ಲಿ ಕಂಟಕಗಳನ್ನು ಹೊಸ ಮಸೂದೆಯಿಂದ ತೊಡೆದು ಹಾಕಿರುವಿರಿ. ಆಚಂದ್ರಾರ್ಕವಾದ ಕೀರ್ತಿ ನಿಮಗೆ!"

ಪುರಸ್ಕಾರ

ಸಂಜೆ ರಾಮನು "ರಾಷ್ಟ್ರೀಯವಿದ್ಯಾಪೀಠ"ದಿಂದ ಮನೆಯ ಕಡೆ ಹೊರಟನು. ಎಲ್ಲೆಲ್ಲಿ ನೋಡಿದರೂ ತನ್ನ ಹೆಸರೇ ಕಾಣುವುದು. ಗೋಡೆಯಲ್ಲಿ ಅಂಟಿಸಿದ ಭಿತ್ತಿಪತ್ರದಲ್ಲಿ, ತನ್ನ ಹೆಸರು ದಪ್ಪ ಅಕ್ಷರಗಳಲ್ಲಿ ಅಚ್ಚಾಗಿರುವುದು. ಎಲ್ಲರೂ ತನ್ನ ವಿಷಯವಾಗಿಯೇ ಮಾತನಾಡುವರು. "ನಮ್ಮ ರಾಮು-- ಶಂಕರಭಟ್ರ ಮಗ ರಾಮು!-- ಇವನು ಯಾವಾಗಲಪ್ಪ ಭರತನಾಟ್ಯವನ್ನು ಅಭ್ಯಾಸಮಾಡಿದುದು" ಎಂಬ ಮಾತು ಕೇಳುವುದು. ಉಲ್ಲಾಸಭರಿತನಾಗಿ ರಾಮನು ಮುಂದೆ ಮುಂದೆ ನಡೆದನು.

ಆಳಿಕೆ ಎಂದರೆ ನೂರಿನ್ನೂರು ಮನೆಗಳಿರುವ ಪೇಟೆ. ಅಲ್ಲಿ ಎಷ್ಟೋ ವರುಷಗಳಿಂದ "ರಾಷ್ಟ್ರೀಯವಿದ್ಯಾಪೀಠ"ವೆಂಬ ಶಾಲೆಯಿತ್ತು. ಅದು ಬಡತನದಲ್ಲೇ ಕುಂಟುತ್ತಾ, ಹೇಗೂ ಈವರೆಗೆ ಕಾಲಕಳೆಯಿತು. ಈಗ ಕೆಲವು ಬಿಸಿರಕುತದ ನವತರುಣರು, ಏನೇನೋ ಕನಸು ಕಂಡು, "ನಮ್ಮ ಶಾಲೆಯು ಹಾಗಿರಬೇಕು, ಹೀಗಿರಬೇಕು" ಎಂದು ಅದನ್ನು ರೂಪಿಸತೊಡಗಿದರು. ಆದರೆ ಅದು ಹಳೆ ಹೊಸತರ ಸಂಕ್ರಾಂತಿಯ ಕಾಲ. "ಹೇಗೂ ಶಾಲೆಯು ನಡೆಯುತ್ತಿದೆ. ಸರಕಾರದ ಗ್ರೇಂಟು ಬರುತ್ತಿದೆ. ಇನ್ನು ನಾವು ಯಾಕೆ ಇದಕ್ಕೆ ಖರ್ಚುಮಾಡಬೇಕು" ಎಂದು ಹಳಬರು ತರುಣರ ಕಾರ್ಯಕ್ಕೆ ಹಿಂದೇಟು ಹಾಕಿದರೆ, ತರುಣರೇನು ಬಿಡುವರೇ? "ಇನ್ನೊಂದು ಪ್ರಯತ್ನವೆಂದು ಒಂದು ನಾಟಕ ಪ್ರದರ್ಶನವನ್ನಿತ್ತಾದರೂ ಹಣ ಸಂಗ್ರಹವಾಗುವುದೋ ನೋಡಿ ಬಿಡೋಣ" ಎಂದು ಆಲೋಚಿಸಿ ಕಾರ್ಯೋನ್ಮುಖರಾದರು. ಅದು ನಾಟಕವೆನ್ನುವುದಕ್ಕಿಂತಲೂ ಕಲಸು ಮೇಲೋಗರವೆಂಬ ಹೆಸರಿಗೇ ಯೋಗ್ಯ. ಸರಿಯಾದ ವೇಷಭೂಷಣಗಳಿಲ್ಲದೆ, ರಂಗರಚನೆಯಿಲ್ಲದೆ, ನಿರ್ದೇಶಕರಿಲ್ಲದೆ ನಾಟಕವಾದೀತೆ? ಆದರೆ ಈ ಕಲಸು ನಾಟಕವು ಹಳ್ಳಿಗರನ್ನು ತೃಪ್ತಿಪಡಿಸುವುದಕ್ಕೆ ಸಾಕು. ಅದರಲ್ಲಿ ಎಲ್ಲಾ ವೇಷವೂ ಇದೆ; ಅವುಗಳ ಪೈಕಿ ರಾಮನ ಭರತನಾಟ್ಯವೊಂದು. ರಾಮನು ಸಾಧಾರಣ ತರಬೇತಾದವರಂತೆಯೇ ನಾಟ್ಯಮಾಡುತ್ತಿದ್ದನು. ಮೊದಲಿನಿಂದಲೂ ನಾಟ್ಯಪ್ರೇಮಿಯಾತ.

ಸಿನೆಮಾದಲ್ಲಿ, ನರ್ತನವನ್ನು ಕಂಡರೆ, ಅದರಂತೆ ಮನೆಯಲ್ಲಿ ಮಾಡಿ, ತನ್ನ ಸ್ನೇಹಿತರೆದುರಲ್ಲಿ ತೋರಿಸಿ ಅವರಿಂದ ಬೆನ್ನು ಚಪ್ಪರಿಸಿಕೊಳ್ಳುವನು.

ಈಗಲೂ ರಾಮನ ಸ್ನೇಹಿತರು, ರಾಮನ ನಾಟ್ಯಪ್ರದರ್ಶನವನ್ನು ನಾಟಕದೆಡೆಯಲ್ಲಿ ಮಾಡಿ ತೋರಿಸಬೇಕೆಂದು ಒತ್ತಾಯಿಸಿದರು. ರಾಮನು ಅರೆಮನಸ್ಸಿನಿಂದ, ಅಂದರೆ, ಜನರ ಅಭಿರುಚಿ ಎಂತಿರುವುದೋ ಎಂದು ಅನುಮಾನಿಸಿ ಕಡೆಗೆ, "ಆಗಲಿ. "ಕಾಮದಹನ" ಎಂಬ ಭಾಗವನ್ನು ಅಭಿನಯಿಸುವೆನೆ"ಂದನು. ತಾನು ಅಂತರಂಗದಲ್ಲಿ ಸಾಧಿಸಿದುದನ್ನು, ಬಹಿರಂಗಪಡಿಸಲು ಸಂದರ್ಭ ಒದಗಿದುದಕ್ಕೆ ಸಮಾಧಾನ ಪಟ್ಟುಕೊಂಡನು. ತಾನು ಒಂದು ಸಂಸ್ಥೆಗೆ ತನ್ನಿಂದಾದ ಸಹಾಯವನ್ನು ಸಲ್ಲಿಸುತ್ತಿರುವೆನಲ್ಲಾ ಎಂದು ಭಾವಿಸಿದನು.

ನಾಳದಿನ ದಿನವೇ ತನ್ನ ಪ್ರದರ್ಶನವಿದ್ದುದರಿಂದ, ಅದಕ್ಕಿರುವ ಪೂರ್ವ ಸಿದ್ಧತೆಯನ್ನು ಮಾಡಲು, ಮಧ್ಯಾಹ್ನ ಶಾಲೆಯ ಕಡೆ ಹೋಗಿದ್ದ ರಾಮನು ಈಗ, ಕತ್ತಲಾಗುವುದೆಂದು ಮನೆಗೆ ಹೋಗುತ್ತಿದ್ದಾನೆ. ಪೇಟೆಯಲ್ಲಿ ತನ್ನ ವಿಷಯವನ್ನು ಮಾತಾಡುವುದು ಕೇಳುತ್ತಿದೆ. "ಇವನಿಗೇನು ಗೊತ್ತು? ಧರ್ಮ ಶಾಸ್ತ್ರದಲ್ಲಿ ಹಾಗಿದೆ, ಹೀಗಿದೆ ಎಂದು ಶಾಸ್ತ್ರದ ಕಂತೆಗಳನ್ನು ಮಗುಚುವ ಶಂಕರಭಟ್ರ ಮಗ ರಾಮು, ಭರತನಾಟ್ಯ ಮಾಡುವುದೆಂದರೇನು? ಅದೂ ಯಾವಾಗ ಕಲಿತುದು ಆತ? ಕಲಿಯದೆ ಬರುವುದು ಹೇಗೆ?" ಮುಂತಾಗಿ ಹೇಳುತ್ತಿದ್ದರು. "ಅವನು ಮಾಡಿದರೆ ಅದು ನಾಟ್ಯದ ಕೊಲೆಯಾದೀತು" ಎನ್ನುವುದೂ ಕೇಳುತ್ತಿದೆ. ತಾನು ಎಷ್ಟರ ಮಟ್ಟಿನ ಅಭ್ಯಾಸಿ ಎನ್ನುವುದು ಅವನಿಗೆ ಗೊತ್ತಿದೆ. ಕಲಾವಿದನಲ್ಲವಾದರೂ ಈ ಊರಿನ ಜನರನ್ನು ಮಂಕುಗೂಳಿಸುವುದಕ್ಕೆ ಸಾಕು. ಎಂಬ ಧೈರ್ಯವು ಅವನಲ್ಲಿದೆ. ಕಲೆಯೆಂದರೆ, ಸತತ ಅಭ್ಯಾಸದಿಂದ ಸಿದ್ಧಿಯಾಗುವ ವಿಷಯವೆಂದು ಅವನ ತಿಳುವಳಿಕೆ. ತಾನು ನೋಡಿದ ನಾಟ್ಯದಲ್ಲಿ, ಅವರು ಮಾಡಿದಂತೆಯೇ, ತಾನು ಕೂಡಾ ಅಭ್ಯಾಸ ಬಲದಿಂದ ಸಾಧಿಸಿರುವೆನೆಂಬ ಧೈರ್ಯವು ಅವನಲ್ಲಿತ್ತು. ಅವರ ಮಾತು ಕೇಳಿ ಹೀಗೆ ಆಲೋಚಿಸಿದನು:—"ಆಗಲಿ. ನಾಳದು ಇವರೇ ನೋಡುವರಲ್ಲ. ಮತ್ತೆ ಏನು ಹೇಳುವರೋ ನೋಡೋಣ. ಶಂಕರಭಟ್ರು ಧರ್ಮ

ಶಾಸ್ತ್ರದ ಕಟ್ಟಿನಲ್ಲಿ ಬಿದ್ದಿದ್ದರೆ, ಅವರ ಮಗನ ಬಳಿಯಲ್ಲಿ ನಾಟ್ಯಕಲೆಯು ಸುಳಿಯಕೂಡದೆಂದಿಲ್ಲ" ಎಂದು ಮುಂದುವರಿದನು. ಅವನು ಅಭ್ಯಾಸ ಮಾಡಿದವುಗಳಲ್ಲೆಲ್ಲಾ "ಕಾಮನಹಬ್ಬ"ವು ಉತ್ಕೃಷ್ಟವಾದುದು ಎಂದ ಮೇಲೆ ಅವನೇಕೆ ಹೆದರುವನು?

ಮನೆಯ ಅಂಗಳವನ್ನು ಮುಟ್ಟಿದನು. ಒಳಗಿನಿಂದ ಗದ್ದಲದ ಮಾತು ಕೇಳಿತು. ಮೆಲ್ಲಗೆ ಜಗಲಿಗೆ ಕಾಲಿಟ್ಟನು. ಒಳಗಡೆ ತನ್ನ ತಂದೆಯೂ, ತಾಯಿಯೂ ಮಾತಾಡುವುದು ಕೇಳುವುದು. ತನ್ನ ತಂದೆಯ ಕೋಪದ ಸ್ವರ ಕೇಳುತ್ತಲೇ ರಾಮನು ಸ್ವಲ್ಪ ಭೀತಿಗೊಳಗಾದನು. ತನ್ನ ತಂದೆಯ ಕೋಪವೆಂದರೆ ಜಗತ್ಪ್ರಸಿದ್ಧ: ಹೇಳಿದುದು ಹೇಳಿದಂತೆಯೇ ಆಗಬೇಕು. ಅಂತಹ ಹಟಮಾರಿಗಳು ಕೂಡಾ. "ಇದೇನು ಗ್ರಹಚಾರ" ಎಂದು ಕೊಂಡನು. ಗಿಳಿಬಾಗಿಲಿನಲ್ಲಿ ಕಿವಿಗೊಟ್ಟು ಆಲಿಸಿದನು. ಮತ್ತಷ್ಟು ಭೀತನಾದನು. ತನ್ನ ವಿಷಯವಾಗಿಯೇ ಮಾತಾಡುತ್ತಿದ್ದಾರೆ. "ಅವನು ಹೀಗೆಲ್ಲಾ ಮಾಡುವುದು ನನ್ನ ಹೆಸರು ಹೇಳಿಸಲಿಕ್ಕೆ. ಈ ಮನೆಯವರು ಈ ಮೊದಲು ಹೀಗೆ ಮಾಡಿದವರುಂಟೆ? ಇಡೀ ಹೋಬಳಿಗೆ ಧರ್ಮ ಶಾಸ್ತ್ರ ಹೇಳಬೇಕಾದವನು, ಇಡೀ ನಮ್ಮ ಸಮಾಜಕ್ಕೆ "ಗುರಿಕಾರ"ನಾಗು ವವನು, ಮುಂದಕ್ಕೆ ರಾಮಭಟ್ಟ ಎಂದು ಎನಿಸಿಕೊಳ್ಳತಕ್ಕವನು. ಹೀ ಗೆಲ್ಲಾ ಮಾಡುವುದು ಯೋಗ್ಯವೆ? ಸರ್ವಥಾ ಮಾಡಕೂಡದು" ರಾಮನು ಸ್ವಲ್ಪ ನಡುಗಿದನು.

"ಅದರಲ್ಲೇನಿದೆಯೀಗ. ಏನೋ ಹುಡುಗಾಟಿಕೆ. ಒಂದು ವಿನೋದ. ಏನಾದರೂ ಕಳೆಯುವ ಪಂಚ್ಯಾತಿಕೆ ಅಲ್ಲವಷ್ಟೆ" ಎಂದು ರಾಮನ ತಾಯಿ ಉಸುರಿದಳು. ರಾಮನಿಗೆ ಸ್ವಲ್ಪ ಧೈರ್ಯ ಉಂಟಾ ಯಿತು.

ರಾಮನ ತಂದೆ "ಏನು ಹುಡುಗಾಟಿಕೆ? ವರುಷ ಹದಿನೆಂಟು ಆಯಿತು. ನಾನು ಈ ಪ್ರಾಯದಲ್ಲಿ ಎಷ್ಟು ಘನಸ್ತಿಕೆಯಲ್ಲಿದ್ದೆ ಬಲ್ಲೆಯಾ? ಈ ದಿನ ನಾನು ಪೇಟೆಗೆ ಹೋಗಿದ್ದೆ. ಅಲ್ಲಿ ಪ್ರತಿಯೊಬ್ಬರೂ ನನ್ನೊಡನೆ "ನಿಮ್ಮ ಮಗ ನಾಳದು ಕುಣಿಯುತ್ತಾರಂತೆ, ಹೌದೆ?" ಎಂದು ಕೇಳುವ ವರೇ. "ಇದನ್ನು ಅವನು ಯಾವಾಗ ಕಲಿತುದಪ್ಪ" ಎಂದು ಅಣಕಿಸು

ವವರೆ. ಇದನ್ನೆಲ್ಲಾ ಕೇಳಿ ನನಗೆ ತಲೆ ಕಡಿದಂತೆ ಆಯಿತು. ನಾನು ಈವರೆಗೆ ಇಂತಹ ಮಾತುಗಳನ್ನು ಕೇಳಿದವನಲ್ಲ. ನಮ್ಮ ಹಿರಿಯರೂ ಕೇಳಿದವರಲ್ಲ. ಹಾಗಾದರೆ ಇವನು ಮಾಡಿದ ಕೆಲಸ ಸರಿಯೇನೊ? ನೀನೇ ಹೇಳು." ಎಂದು ಗುಡುಗಿದರು.

"ಏನು?"

"ಏನೊ? ನೀನು ಎಷ್ಟಾದರೂ ಆ ಮಗನ ತಾಯಿಯಲ್ಲವೆ? ನೀನು ಹೇಳಿಕೊಟ್ಟ ಬುದ್ಧಿ ಅವನಿಗೆ. ಎಷ್ಟಾದರೂ "ಸ್ತ್ರೀಬುದ್ಧಿಃ ಪ್ರಲಯಾಂತಕಃ" ಎಂಬಂತೆ ನೀನು ಅವನಿಗೆ ಬುದ್ಧಿ ಕಲಿಸಿದರೆ ಬರುವ ವರುಷ ದಶಾವತಾರ (ಬಯಲಾಟದವರ) ಮೇಳಕ್ಕೆ ಸೇರುವೆನೆಂದಾನು.

"ಕೂಡದು! ನನ್ನ ಕಣ್ಣೆದುರಲ್ಲಿ ಇಂತಹ ಕೆಲಸವಾಗಕೂಡದು. ಇವನೊಡನೆ ನೀನು ಇಷ್ಟು ಕೇಳಬೇಕು. "ಒಂದೋ ಅವನು ವೇಷ ಹಾಕಕೂಡದು. ಅಥವಾ ಅವನು ಮನೆಯಲ್ಲಿ ಕಾಲಿಡಕೂಡದು." ಇದು ರಾಮುನ ತಂದೆಯ ಕೊನೆಯ ತೀರ್ಮಾನ. ಇದರಂತೆ ಆಗಲೇ ಬೇಕು. ಸಪ್ತಸಾಗರಗಳು ಮೇರೆದಪ್ಪಿ ಹರಿದರೂ, ಆಕಾಶವೇ ಹರಿದು ಕೆಳಗೆ ಬಿದ್ದರೂ ಶಂಕರಭಟ್ಟರ ಮಾತು ನಡೆಯಲೇಬೇಕು. ರಾಮುನ ತಲೆಯು ಗಿರ್ರನೆ ಸುತ್ತತೊಡಗಿತು. ಕಾಲುಗಳಿಗೆ ಶಕ್ತಿ ಕಡಿಮೆಯಾಯಿತು. ಮುಂದಿನ ಮಾತುಗಳನ್ನು ಕೇಳುವುದಾಗಲಿಲ್ಲ. ಅವಶ್ಯವೂ ಇಲ್ಲ. ತನ್ನ ಕೋಣೆಗೆ ನಡೆದು ಕದವಿಕ್ಕಿ ಕುಳಿತನು.

* * *

ಗಂಟೆ ಗಂಟೆ ಸರಿದರೂ, ರಾಮುನ ಮನಸ್ಸು ಸ್ತಿಮಿತಕ್ಕೆ ಬರಲೇ ಇಲ್ಲ. ರಾಮುನ ತಾಯಿ ಬಂದು ಊಟಕ್ಕೆ ಕರೆದರು; ಏಳಬೇಕೆನಿಸಲಿಲ್ಲ. "ಹಸಿವೆ ಇಲ್ಲ" ಎಂದು ಕಳುಹಿಸಿದನು. ಒಮ್ಮೆ ಕಣ್ಣೆದುರಲ್ಲಿ ಕರಪತ್ರವು ಬಂದು ನಿಲ್ಲುವುದು. "ಕಾಮದಹನ" ಎಂದು ಕಾಣಿಸುವುದು. ಕೂಡಲೇ ಅದು ಮಾಸಿ, ತನ್ನ ಮನೆಯ ಚಿತ್ರವು ಕಾಣಿಸುವುದು. ತನ್ನ ಕೀರ್ತಿಯನ್ನು ಸಾರಿ ಹೇಳುತ್ತಿದೆ. "ಇದು ಯೋಗ್ಯವಲ್ಲ" ಎನ್ನುತ್ತಿದೆ. "ಘನ ಪಂಡಿತ, ಆಚಾರವಿಚಾರಾಧಿಕಾರಿ, ಹೋಬಳಿಯ ಗುರಿಕಾರನಾದ ನಿನ್ನ ತಂದೆಯ ಕೀರ್ತಿಯನ್ನು ನೋಡು" ಎನ್ನುತ್ತಿದೆ. ಕ್ಷಣದಲ್ಲಿ ಅದು

ಮಾಯ! ಯಾವದೋ ಒಂದು ನಾಟ್ಯಮೂರ್ತಿಯು ತನ್ನೆಡೆಗೆ ಕರೆಯುತ್ತಿದೆ: "ಈ ಮನೆಯ ದ್ವಾರವು ನಿನಗೆ ಮುಚ್ಚಿದರೆ, ನನ್ನ ಹೃದಯ ಮಂದಿರದ ಬಾಗಿಲು ತೆರೆಯುವೆ"ನೆನ್ನುತ್ತಿದೆ. ಮನಮೋಹಕ ರೀತಿಯಲ್ಲಿ ಕುಣಿಕುಣಿದು ಕೈಯೆತ್ತಿ ಕರೆಯುತ್ತಿದೆ. ಅಲ್ಲಿಯೇ ಇನ್ನೊಂದು ಬದಿಯಲ್ಲಿ ತನ್ನ ಮನೆಯು, "ಇದೋ, ಬಾಗಿಲು ಮುಚ್ಚುವೆನು; ಬರುವುದಾದರೆ ಬೇಗ ಬಾ" ಎನ್ನುತ್ತಿದೆ. ಯಾವುದರ ಕಡೆಗೆ ಹರಿಯಬೇಕೆಂದು ರಾಮನ ಮನಸ್ಸು ಅತ್ತಿತ್ತ ಸುಳಿಯುತ್ತಿದೆ. ಯಾವುದೋ ಒಂದು ಗಂಧರ್ವ ಲೋಕದ ಕೀರ್ತಿಕಿರಣಕ್ಕಾಗಿ ತನ್ನ ಮನೆಯ ಸೊಡರನ್ನು ನಂದಿಸಬೇಕೆ? ಮುಂದಿನ ಆಶೆಯಿಂದ, ಇಂದಿನ ಠಾವನ್ನು ಬಿಡಬೇಕೆ? ಎಷ್ಟಾದರೂ, ಏನಾದರೂ, ಮಕ್ಕಳ ಒಳ್ಳೆಯದು ಕೆಟ್ಟುದು ತಂದೆತಾಯಿಗಳಿಗೆ ತಾನೆ. ಅವರು ಬೇಡವೆಂದರೆ ನನಗೇನು. ನಾಳೆಯೇ ಹೋಗಿ, ಕಾರ್ಯಾಧ್ಯಕ್ಷ ಗೋಪಾಲನೊಡನೆ ನನ್ನ ಹೆಸರಳಿಸಿಬಿಡು ಎಂದರೇನು? ಹಾಗೆ ಹೇಳುವುದು ಯಾವ ಮುಖದಲ್ಲಿ. ಆದರಿಂದ ಒಂದು ಕಾಗದ ಬರೆದು ಕಳುಹಿಸಿದರೆ ಯಾವ ಕೊರತೆಯೂ ಇಲ್ಲ; ಎಂದು ಆಲೋಚಿಸಿ ಅದೇ ಅಭಿಪ್ರಾಯ ಬರುವಂತೆ ಒಂದು ಪತ್ರವನ್ನು ಬರೆದನು. ಪತ್ರವನ್ನು ಇನ್ನೊಮ್ಮೆ ಓದಿದನು. ಉಸ್ಸೆಂದು ಒರಗಿ ಕುಳಿತನು. ಪುನಃ ಆಲೋಚನೆಗಳು ನಾಮುಂದು ನಾಮುಂದು ಎಂದು ಸುಳಿಯತೊಡಗಿದುವು:—ಛೆಃ! ಇಂತಹ ಸಂದರ್ಭವು ಇನ್ನೊಮ್ಮೆ ದೊರೆಕೀತೆ? ತಾನು ಇಷ್ಟು ಅಭಿಮಾನವನ್ನು ತಳೆದು ಕಲ್ಪಿಸಿದ ತನ್ನ ನಾಟ್ಯವನ್ನು ಇನ್ನೆಲ್ಲಿ ತೋರಿಸಲಿ?— ತೋರಿಸುವುದಾದರೂ ಎಂತು?— ತಾನು ನಾಟ್ಯ ಮಾಡಿದ ಮರುದಿನವೇ ಮನೆಯನ್ನು ತ್ಯಜಿಸಬೇಕಲ್ಲಾ............ಯಾವುದೂ ರಾಮನಿಗೆ ಬಗೆಹರಿಯಲಿಲ್ಲ. ಅಲ್ಲೇ ನಿದ್ದೆಯು ಅವನನ್ನು ಆವರಿಸಿ ಸ್ವಲ್ಪ ಶಾಂತಿಯನ್ನು ಕೊಟ್ಟಿತು. ಆಗ ಗಂಟೆ ಒಂದು ಬಾರಿಸಿತು.

* * *

ಗಂಟೆಯು ಮೂರು ತೋರಿಸುತ್ತಿತ್ತು. ಜೀವರಾಶಿಗಳೆಲ್ಲವೂ ನಿದ್ದೆ ಮಾಡುತ್ತಿದ್ದುವು. ಆದರೆ ರಾಮನು ಮಾತ್ರ ತನ್ನ ಕೋಣೆಯಲ್ಲಿ ಕುಳಿತು ಕೈಯಲ್ಲೊಂದು ಕಾಗದವನ್ನು ಹಿಡಿದು ಆಲೋಚಿಸುತ್ತಿರುವನು. ಪತ್ರ

ವನ್ನೊಮ್ಮೆ ಓದಿದನು—ತೀರ್ಥರೂಪರ ಚರಣಾರವಿಂದಗಳಲ್ಲಿ:-ನೀವು ನನ್ನ ಬಗ್ಗೆ ವಿಧಿಸಿದ ವಿಧಿಯು ತಿಳಿದಿದ್ದೂ ನಾನು ನಿನ್ನೆ ನನ್ನ ಪ್ರದರ್ಶನ ವನ್ನು ಮಾಡಿದೆ. ಇದು ನಿಮ್ಮ ಆಜ್ಞೋಲ್ಲಂಘನೆಗಾಗಿ ಅಲ್ಲ. ನನ್ನ ಸಫಲತೆಯನ್ನು ಕಂಡಮೇಲಾದರೂ, ನನಗೆ ಜನರಿಂದ ಸಿಗುವ ಪ್ರಶಂಸೆ ಯಿಂದಲಾದರೂ, ನಿಮ್ಮ ಮನಸ್ಸು ಪರಿವರ್ತನೆ ಹೊಂದೀತು. ಕುಣಿ ತವು ಒಂದು ಕಲೆ. ಇದರಲ್ಲಿಯೂ ಒಂದು ಹಿರಿತನವಿದೆ. ತಾನು ತನ್ನ ಮಗನಿಗೆ ಮನೆಯಿಂದ ಹೊರಡಬೇಕೆಂದುದು ಸರಿಯಲ್ಲವೆಂಬ ಭಾವ ನೆಯು ನಿಮ್ಮಲ್ಲಿ ಉಂಟಾದೀತೆಂದು ತಿಳಿದಿದ್ದೆ. ಆದರೆ ನನ್ನ ತಿಳುವಳಿಕೆ ತಪ್ಪು. ನನಗೆ ಪುರಸ್ಕಾರ ದೊರೆತರೂ, ನನ್ನ ಕಲೆಗೆ ತಿರಸ್ಕಾರವೇ ದೊರ ಕಿತು. ಅದಕ್ಕೂ ಕಾರಣವಿದೆ. ಇನ್ನೂ ಜನತೆಯ ಮನಸ್ಸು ಬದಲಾಗ ಲಿಲ್ಲ. ಹಳೆತನವನ್ನು ಹೊಸತನವು ಕೊಚ್ಚಿಕೊಂಡು ಹೋಗಲಿಲ್ಲ. ಇನ್ನೂ ನಮ್ಮ ಊರಿನ ಜನರ ಮನಸ್ಸಿನಲ್ಲಿ ಕುಣಿತವೆಂದರೆ ದಶಾವತಾರದ ಕುಣಿತವೆಂದೇ ಭಾವನೆಯಷ್ಟೆ! ಇವರ ತಿಳುವಳಿಕೆಯಂತೆ ಅದರಿಂದ ಮೇಲ್ಮಟ್ಟಕ್ಕೆ ಕುಣಿತವು ಇನ್ನೂ ಮುಟ್ಟಿಲ್ಲ.—ಇಡೀ ಜನತೆಯೇ ನನ್ನನ್ನು ತಿರಸ್ಕರಿಸುತ್ತಿದೆ. ನನ್ನನ್ನು ಕಂಡರೆ ಆಟದ ದೂಮುಪ್ಪು ಎಂಬಂತೆ ಭಾವಿಸುತ್ತಿರುವರು. ಅದು ಅಲ್ಲ. ಅದಕ್ಕೂ ಒಂದು ಸ್ಥಾನವಿದೆ. ಹಿಮಗಿರಿಯಂತೆ ಅತ್ಯುನ್ನತವಾದ ಸ್ಥಾನವಿದೆ. ಪರಮೇಶ್ವರನು, ತಾಂಡವ ನೃತ್ಯಮಾಡಿದುದು ಪುರಾಣದ ಸುಳ್ಳು ಕಂತೆಗಳಲ್ಲಿ ಮಾತ್ರವಲ್ಲ. ನಿಜ ಲೋಕದಲ್ಲಿಯೂ ಅದಕ್ಕೆ ಮಾನ್ಯತೆಯಿದೆಯೆಂಬ ಭಾವನೆಯು ನಮ್ಮ ಜನರಲ್ಲಿ ಉದಿಸುವ ಕಾಲವು ಇನ್ನೂ ದೂರವಿದೆ. ಅಲ್ಲಿಯ ವರೆಗೆ ನನಗೆ ಈ ಊರಲ್ಲಿ ಸ್ಥಾನವಿಲ್ಲ. ಯಾಕೆ? ನನ್ನ ಮನೆಯಲ್ಲಿಯೂ ಸ್ಥಾನವಿಲ್ಲ.

ಅಪ್ಪ, ಬೇಡ; ನನಗೆ ಈ ಊರೇ ಬೇಡ. ಈ ಮನೆಯೂ ಬೇಡ. ಬೇರೆ ಊರಲ್ಲಿ ಹೋಟೇಲಿನ ಮಾಣಿಯಾಗಿರುವುದಾದರೂ ಆದೀತು. ಈ ಊರಿನಲ್ಲಿರಲಾರೆ. ಊರ ಜನ, ಬಂಧುಬಳಗ, ಹೆತ್ತ ತಂದೆ, ಭಾವೀ ಪತ್ನಿ ಪಾರ್ವತಿ ಎಲ್ಲರೂ ನನ್ನನ್ನು ತಿರಸ್ಕರಿಸುವವರೆ! ಯಾರಿಗಾಗಿ ನಾನಿಲ್ಲಿ ರಬೇಕು.

ನನಗೆ ಒಂದು ಸ್ಥಾನವಿದೆಯೆಂದು ತಿಳಿಯುವವರಿಗೆ ನಾನೀ ಊರಿಗೆ ಕಾಲಿಕ್ಕಲಾರೆ.

ಎಂದು

ನಿಮ್ಮ ಆಶೀರ್ವಾದವನ್ನು ಬೇಡುವ

ಬಾಲಕ ರಾಮು.

ಪತ್ರವನ್ನು ಎದುರು ಕಾಣುವಂತೆ ಇಟ್ಟು, ತನ್ನ ಒಂದೊಂದೇ ಒಡವೆಗಳನ್ನು ಟ್ರಂಕಿಗೆ ಸೇರಿಸಿದನು. ನಿನ್ನೆ ಪಾರಿತೋಷಿಕವಾಗಿ ದೊರೆತಿದ್ದ ಕೆಲವು ಒಡವೆಗಳನ್ನೂ ತುಂಬಿಸಿದನು. ಅವನ್ನು ಕೊಡುವಾಗ ಕೆಲವರೆಂದ ಮಾತುಗಳು ನೆನಪಾದುವು. ಅದಕ್ಕೆ ಅವನ ಮನಸ್ಸು ಈಗ ಉತ್ತರ ಹೇಳಿತು. ಒಬ್ಬರೆಂದಿದ್ದರು:—"ಇವನು ಈ ಊರಿನ ಕೀರ್ತಿ ಕಿರಣ." ಅದು ಈಗಿನಿಂದ ನಂದಿಹೋಯಿತಲ್ಲ. ಮತ್ತೊಬ್ಬರು:—ಇದು ಪುಟವಿಡದ ಚಿನ್ನ. ಕಡೆಯದ ರತ್ನ. ಇದನ್ನು ಪುಟಕ್ಕಿಟ್ಟರೆ, ಕೆತ್ತಿದರೆ ಇನ್ನೂ ಪ್ರಕಾಶಮಾನವಾಗಲಿದೆ." ಈಗ ಊರವರೆಲ್ಲರೂ ಸ್ಫುಟಕ್ಕಿಟ್ಟಿರುವರು ತಾನೆ. ಇನ್ನೊಬ್ಬರು, "ಇವನೊಬ್ಬ ಕಲಾವಿದ. ಇವನನ್ನು ಕಲಾದೇವಿಯು ಕರೆಯುತ್ತಿದ್ದಾಳೆ. ಕಲಿಸಬೇಕು—ನೃತ್ಯ ಶಾಸ್ತ್ರದಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಗಳಿಸುವ ವರೆಗೆ ಕಲಿಸಬೇಕು. ಅನುಕರಣೆಯಿಂದ ಇಷ್ಟು ಮಾಡಿದವನು, ಪಾಂಡಿತ್ಯವನ್ನು ಗಳಿಸಿದ ಮೇಲೆ, ಭರತಖಂಡವನ್ನೇ—ಏಕೆ? ಭೂಮಂಡಲವನ್ನೇ ತನ್ನ ಕಲಾ ಪ್ರದರ್ಶನದಿಂದ ಮುಗ್ಧಗೊಳಿಸಲಿರುವನು"—ಹೌದು. ನನ್ನನ್ನು ಕಲಿಯಲು ಕಳಿಸಿರುವರು. ನನ್ನಂತಹ ನಾಲ್ಕು ಹರುಕುಮುರುಕು ಅಕ್ಷರಗಳುಳ್ಳವರಿಗೆ ಕಲಾದೇವಿಯು ಒಲಿಯುವಳೇ. ಅಥವಾ ಅವಳನ್ನು ಒಲಿಸುವುದಾದರೂ ಹೇಗೆ?" ಇನೆಲ್ಲಾ ಮುಖಸ್ತುತಿ. ವಾಸ್ತವವಾದ ಮಾತಲ್ಲ. ಎಲ್ಲಾ ಕೆಲಸಗಳು ತೀರಿದುವು. ಹೊರಡುವುದಕ್ಕೆ ಸಜ್ಜಾಗಿ ನಿಂತನು. ಆದರೆ ಮನಸ್ಸು ಹಿಂದೇಟು ಹಾಕುವುದಕ್ಕೆ ತೊಡಗಿತು. "ನಿನ್ನಿಂದ ಸಾಗಲಾರದು. ನೀನು ಈ ಮನೆಯಲ್ಲಿ ಇರುವುದೇ ಲೇಸು. ಈ ಮನೆಯನ್ನು ತೊರೆದರೆ ನೀನು ಹೋಟೇಲಿನ ಮಾಣಿಯಾಗಬೇಕಾದೀತು. ನೃತ್ಯಕಲಾವಿದರೊಡನೆ

ಅಭ್ಯಾಸಮಾಡುವಷ್ಟು ವಿದ್ಯಾಭ್ಯಾಸವು ನಿನ್ನಲ್ಲಿಲ್ಲ. ಹಣವೂ ಇಲ್ಲ. ಹಣವಿಲ್ಲದೆ ನಿನಗೆ ಯಾರೂ ಕಲಿಸುವಂತೆ ಇಲ್ಲ" ಎಂದು ಹಿಂದೆ ಜಗ್ಗಿತು. ಆದರೆ ಕಲೆಯು ಮೂರ್ತಿಮತ್ತಾಗಿ ಎದುರು ನಿಂತು, "ಬಾ. ನನ್ನ ಬಳಿಗೆ ಬಾ. ಎಷ್ಟೋ ಜನರಿಗೆ ನಾನು ಒಲಿದಿರುವೆನು. ಅವರು ನಿನಗೆ ಕಲಿಸಿಯಾರು. ನೀನು ಒಂದೊಂದೇ ಸೋಪಾನವನ್ನು ಏರುತ್ತಾ ಬಂದೆ ಯೆಂದರೆ, ಮತ್ತೆ ನಾನು ನಿನ್ನ ಒಡನಾಡಿಯಾಗುವೆ." ಎಂದು ಕೈಯೆತ್ತಿ ಕರೆಯಿತು. ಹೋಟೇಲಿನ ಬೋರ್ಡ್—"ನನ್ನ ಬಳಿಗೆ ಬಾ. ನೀನು ಕಲೆ, ಕಲೆಯೆಂದರೆ ಆಗಲಾರದು. ನಾನು ಬೇಕಾದಷ್ಟು ಹಣವನ್ನು ಕೊಡು ವೆನು. ಆ ಮೇಲೆ ನೀನು ಕಲೆಯನ್ನು ವರಿಸು ಅಥವಾ ನನ್ನನ್ನೇ ವರಿಸಿ ಲಕ್ಷಾಧೀಶನಾಗು" ಎಂದು ತನ್ನ ಬಾಹುಗಳನ್ನು ನೀಡಿತು. ರಾಮನು ಈ ಮೂವರಿಂದ ಘಾಸಿಹೊಂದುತ್ತಾ, ನಿಧಾನವಾಗಿ, ತನ್ನ ಟ್ರಂಕಿನೊಂ ದಿಗೆ ಒಂದೊಂದೇ ಮೆಟ್ಟಲನ್ನಿಳಿದು ಕತ್ತಲಲ್ಲಿ ಮಾಯವಾದನು.

* * *

ರಾಮನು ಹೋಗಿ ಎಷ್ಟೋ ಕಾಲವಾಯಿತು. ಕ್ರಮೇಣ ಶಂಕರ ಭಟ್ರ ಸಿಟ್ಟು ಶಾಂತವಾಯಿತು. "ಅಯ್ಯೋ! ಏನಾದರೂ ಮಾಡಿಕೊಂಡು ಇದೇ ಊರಲ್ಲಿಯೇ ಇರುತ್ತಿದ್ದ. ಅವನನ್ನು ಮನೆಯಿಂದ ಅಟ್ಟಬೇಕೆಂ ದಿರಲಿಲ್ಲ. ನಾನು ಸಿಟ್ಟಿನ ಭರದಲ್ಲಿ ನಾಲ್ಕು ಮಾತು ಹೇಳಿದರೆ, ಅವನು ಮನೆಯನ್ನೇ ಬಿಡಬೇಕಿತ್ತೆ?" ಎಂಬೀ ಭಾವನೆಗೆ ಮೊದಲಾಯಿತು. ಮತ್ತೂ ಕೆಲವು ಕಾಲದ ಮೇಲೆ-"ಅವನು ಹೋಗಿ ವರ್ಷ ಐದಾರು ಕಳೆ ಯಿತು. ಇನ್ನೂ ಆತನ ಪತ್ತೆಯೇ ಇಲ್ಲವಲ್ಲ. ಇರುವನೋ ಅಥವಾ ಇಲ್ಲವೋ ಒಂದೂ ತಿಳಿಯದು. ನಾನು ಒಂದು ಮಾತು ಹೇಳಿದುದಕ್ಕೆ ನನಗೆ ಕಾಗದವನ್ನೂ ಹಾಕದಷ್ಟು ಸಿಟ್ಟೆ?" ಎಂದು ಭಾವಿಸಿದರು. ಯಾರಾದರೂ ಅವರೊಡನೆ ರಾಮನ ವಿಷಯ ಮಾತಾಡಿದರೆ "ಎಲ್ಲಿ ಯಾದರೂ ಹೋಟೇಲಿನಲ್ಲಿ ಗ್ಲಾಸು ತೊಳೆಯುತ್ತಿರಬಹುದು" ಎನ್ನು ತ್ತಿದ್ದರು.

ಅವರ ಹಳೆತನವನ್ನು ಹೊಸತನವು ಸ್ವಲ್ಪಸ್ವಲ್ಪವೇ ತೊಳೆಯು ತ್ತಿತ್ತು. ಮೊದಲನಿಂದ ಸ್ವಲ್ಪ ಸಂಸ್ಕಾರ ಹೊಂದಿರುವರು. ಒಂದೆರಡು

ಪೇಪರುಗಳು ಅವರ ಮನೆಗೆ ಬರುತ್ತಿದ್ದುವು. ಆಗೀಗ ಮಂಗಳೂರಿಗೆ ನಾಟಕ ಬಂದರೆ ನೋಡುತ್ತಿದ್ದಾರೆ. ಸಿನೆಮಾವನ್ನು ತೆಗಳುತ್ತಿದ್ದಿಲ್ಲ. ಒಂದೆರಡು ನೋಡಿದುದೂ ಉಂಟು. ಅದರಲ್ಲಿ ಪ್ರಸಿದ್ಧ ಕಲಾವಿದರ ಭರತನಾಟ್ಯವನ್ನು ನೋಡಿದುದೂ ಉಂಟು. ಅದನ್ನು ಕಂಡು ಅದರಲ್ಲಿ ತನ್ಮಯರಾಗಿರುವರು. ಊರಿಗೆ ಬಂದು ತನ್ನ ಭಾವನೊಡನೆ, "ಭಾವಾ! ಅಂದು ನಮ್ಮ ಮಾಣಿ ಭರತನಾಟ್ಯವೆಂದು ಬಾಯ್ಬಿಟ್ಟುದು ಸುಮ್ಮನೆ ಅಲ್ಲ. ಅಂತಹ ವರ್ಚಸ್ಸಿದೆ ಅದರಲ್ಲಿ. ಮೊನ್ನೆ ನಾನೊಂದು ನೋಡಿದುದು ಬಹು ಲಾಯಕಾಗಿತ್ತು. ಈಗ ನೋಡುವಾಗ ನಮ್ಮ ರಾಮುನನ್ನು ಅದನ್ನೇ ಕಲಿಯಲು ಕಳುಹಿಸಬೇಕಿತ್ತು ಎಂದು ಕಾಣುತ್ತಿದೆ" ಎಂದರು. ಅದಕ್ಕೆ ಅವರ ಭಾವ ವೆಂಕಣ್ಣನವರು, "ಇಲ್ಲಿಂದ ಹೋಗುವಾಗ ಅವನ ಮನಸ್ಸಿನಲ್ಲಿ ಅದನ್ನೇ ಕಲಿಯಬೇಕೆಂದಿತ್ತು. ಎಲ್ಲಿಯಾದರೂ ಅದನ್ನು ಕಲಿಯಲು ಸೇರಿರುವನೋ ಏನೋ" ಎಂದು ಹೇಳಿದರು.

"ಕಲಿಯಲಿಕ್ಕೆ ಹಣಬೇಕಲ್ಲ. ಹಣಕ್ಕೇನು ಮಾಡಿಯಾನು? ಅವನು ಎಲ್ಲಿಯಾದರೂ ಹೋಟೇಲಿನಲ್ಲಿ ಸೇರಿದ್ದಾನು. ನಮ್ಮ ಊರವರು ಮಾಡುವುದು ಅಷ್ಟೆ. ಚಾಕರಿಗೆ ಸೇರುವುದು ಎಂದರೆ ಹೋಟೇಲಿನ ಕೆಲಸ" ಎಂದರು ಶಂಕರಭಟ್ಟರು. ಮತ್ತೂ ಮುಂದೆ ಬೆಳಸಿ, "ನಮ್ಮ ಊರಲ್ಲಿ ಈವರೆಗೆ ನಾಟ್ಯ ಅಭ್ಯಾಸಮಾಡಿದವರಿಲ್ಲ. ಮೊನ್ನೆ ನಾನು ಪೇಪರಿನಲ್ಲಿ ಓದಿದೆ, ಉದಯಶಂಕರರೆಂಬವರು ಒಬ್ಬರು ಇರುವರಂತೆ. ಬಹು ಪ್ರವೀಣ. ಅವರನ್ನು ಮೀರುವವರು ಈವರೆಗೆ ಇಲ್ಲ. ಹಿಂದೂ ದೇಶದಲ್ಲಿ ಮಾತ್ರವಲ್ಲ. ಹೊರದೇಶದಲ್ಲಿ ಕೂಡಾ ಅವರಿಗೆ ಹೆಸರಿದೆ. ಹ್ಞಾಂ. ಆದರೆ ಒಂದು. ಪುನೆಯವರು ಒಬ್ಬರು "ರಮಾನಾಥ" ಎಂಬವರು ಈಗ ಎದ್ದಿದ್ದಾರೆ. ಅವರು ಈಗ ಎದ್ದವರು. ಹೊರದೇಶಕ್ಕೆ ಪಯಣ ಬೆಳಸಿ ಈಗ ತಾನೆ ಬೊಂಬಾಯಿಗೆ ಹಿಂದಿರುಗಿರುವರು. ಜರ್ಮನಿಯ ಹಿಟ್ಲರ್ ಕೂಡಾ ಅವರ ಕುಣಿತವನ್ನು ಕಂಡು "ಶಾಭಾಸ್" ಎಂದಿರುವನಂತೆ. ಕಂಡೆಯಾ ಬೇರೆ ಊರವರ ಪ್ರತಾಪ! ನಮ್ಮ ರಾಮು ಹೀಗೆಲ್ಲಾ ಆದಾನೆಂದು ನಿನ್ನ ಆಲೋಚನೆಯೋ? ಎಲ್ಲಿ ಉದಯಶಂಕರ!

ಎಲ್ಲಿ ರಮಾನಾಥ! ಎಲ್ಲಿ ನಮ್ಮ ರಾಮು! ಎಲ್ಲಿಂದ ಎಲ್ಲಿಗೆ” ಎಂದು ಯಾವುದೋ ಭಾವನೆಯಿಂದ ಎಲ್ಲಿಗೋ ನೋಡಿದರು.

* * *

ಪೂನಾ ನಗರಿಯ ಸ್ವಲ್ಪ ದೂರದಲ್ಲಿ ಸುಂದರವಾದ ಉದ್ಯಾವನದ ನಡುವೆ ಎ. ಆರ್. ಕಾನಡೆಯವರ ಬಂಗ್ಲೆ. ಬಂಗ್ಲೆಯು ಕಲಾತ್ಮಕವಾಗಿ ಅಲಂಕರಿಸಲ್ಪಟ್ಟಿತ್ತು. ಸಂಜೆ ನಾಲ್ಕು ತಾಸಿನ ಸಮಯ. ದಿವಾಣಖಾನೆಯಲ್ಲಿ ರಮಾನಾಥರು ಪತ್ರಗಳಿಗೆ ರುಜು ಹಾಕುತ್ತಾ ಕುಳಿತಿದ್ದರು. ಹತ್ತಿರದಲ್ಲಿಯೇ ಅವರ ಕಾರ್ಯದರ್ಶಿಯು ಪತ್ರಗಳ ಕಂತೆಯೊಂದಿಗೆ ನಿಂತಿದ್ದನು. ರಮಾನಾಥರ ಸಮೀಪವೇ ಸೋಫಾದಲ್ಲಿ ಮಣಿಮಂಜರಿಯು ಕುಳಿತು ಹಿಂದೀ “ಕಲಾವಾರ್ತೆ” ಪತ್ರಿಕೆಯನ್ನೋದುತ್ತಿದ್ದಳು, ರಮಾನಾಥರು ಆಗಾಗ, ಕಾರ್ಯದರ್ಶಿಯೊಡನೆ, ಉತ್ತರ ಬರೆಯಬೇಕಾದ ಪತ್ರಗಳಿಗೆ ಉತ್ತರದ ಅಭಿಪ್ರಾಯವನ್ನು ತಿಳಿಸುತ್ತಿದ್ದರು. “ಇಗೋ, ಇವುಗಳನ್ನೆಲ್ಲಾ ಟಪಾಲಿಗೆ ಕಳುಹಿಸು. ಸುಮ್ಮನೆ ಸಮಯ ಹಾಳು. ಅವರಿಗೇನು? ನಮ್ಮ ನರ್ತನವನ್ನು ಪ್ರಶಂಸಿಸಿ ಬರೆಯುತ್ತಾರೆ. ಹೀಗೆ ನೂರಿನ್ನೂರು ಪ್ರಶಂಸಾ ಪತ್ರಗಳಿಗೆಲ್ಲಾ ಬರೀ ದಸ್ಕತು ಮಾಡುವುದೆಂದರೂ, ಎಷ್ಟೋ ಸಮಯ ತಗಲುವುದು. ಬೇಡ, ಹೀಗೆ ಮಾಡಿದರಾಗದು: ನಾಳೆಯಿಂದ ಈ ರೀತಿಯ ಕಾಗದಗಳಿಗೆಲ್ಲಾ ನನ್ನ ಬಗ್ಗೆ ನೀನೇ ದಸ್ಕತುಮಾಡು”

“ಸರಿ”

“ಈ ಬಂಗ್ಲೆಯನ್ನು ಮೂರು ಲಕ್ಷಕ್ಕೆ ಮಾರುವೆನೆಂದು ಬರೆದ ಆ ಸೇಟಜೀಗೆ ಆಗಬಹುದು ಎಂದು ನಾಳೆಯೇ ಉತ್ತರ ಬರೆಯಬೇಕು.”

“ಈಗ ಐದು ಗಂಟೆಗೆ ಕಾರಿನ ಏಜಂಟನು ಬಂದಾನಷ್ಟೆ!”

“ಸರಿ. ಈಗ ನಮ್ಮಲ್ಲಿ ಒಂದು ಕಾರು ಇದೆ ತಾನೆ. ಬೇಡವೆಂದು ಹೇಳು. ಈಗಲೇ ನೀನು ಹೋಗಿ ನಮಗೆ ನಾಳೆ ಒಂದು ಸ್ಪೆಷಲ್ ಗಾಡಿಯು ಬೊಂಬಾಯಿಗೆ ಹೋಗುವುದಕ್ಕೆ ಬೇಕೆಂದು ರೈಲಾಫೀಸಿನಲ್ಲಿ ತಿಳಿಸಿ ಬರಬೇಕು. ನಮ್ಮ ಕಲಾಮಂದಿರದ ವಾದ್ಯಗೋಷ್ಠಿಯೆಲ್ಲಾ ಹೋಗಬೇಕಾದರೆ, ಒಂದು ಗಾಡಿಯೇ ಬೇಕಾದೀತು.”

"ಕಲಕತ್ತೆಯ "ಬಸಂತ ಪಿಕ್ಚರ್ಸ್"ನವರು ಅವರ "ಪೂರ್ಣಿಮಾ" ಎಂಬ ಚಿತ್ರಕ್ಕೆ ನೀವು ನೃತ್ಯನಿರ್ದೇಶಕರಾಗಿ ಬರಬೇಕು. ಆ ಚಿತ್ರದ ಆರಂಭವು ಬರುವ ತಿಂಗಳ ಆರಂಭದಲ್ಲಿ ಆಗುವುದು ಎಂದು ಬರೆದಿರುವರು" ಎಂದು ಒಂದು ಕಾಗದವನ್ನು ಕಾರ್ಯದರ್ಶಿಯು ನೀಡಿದನು.

ಗೋಲ್ಡ್‌ಫ್ಲೇಕ್ ಒಂದನ್ನು ಹಚ್ಚುತ್ತಾ, "ಆಗುವುದಿಲ್ಲ. ಬರುವ ತಿಂಗಳಿನ ಮೊದಲಿಗೆ "ಕಲಾಮಂದಿರ"ವು ಕನ್ನಡನಾಡನ್ನು ಒಮ್ಮೆ ಸುತ್ತಿ ಬರಬೇಕೆಂದಿದೆ. ಈಗ ಸದ್ಯಕ್ಕೆ ಅದೊಂದು ಮಾತ್ರ ಬಾಕಿ ಇದೆ" ಎಂದರು. ಅಷ್ಟರಲ್ಲಿ ಮಣಿಮಂಜರಿಯು "ಇಲ್ಲಿ ನೋಡಿರಿ. ಇದರಲ್ಲಿ ಒಂದು ವಿಶೇಷ ವಿಷಯವಿದೆ"ಯೆಂದು ಹೇಳುತ್ತಾ ಪತ್ರಿಕೆಯನ್ನು ಮುನ್ನೊಡ್ಡಿದಳು. ರಮಾನಾಥರು ಕುರ್ಚಿಯಿಂದ ಎದ್ದು, ಅವಳು ಕುಳಿತ ಸೋಫದಲ್ಲಿಯೇ ಕುಳಿತು, "ನೀನು ಓದಿರುವೆಯಷ್ಟೆ. ಅದರ ಅಭಿಪ್ರಾಯವನ್ನು ತಿಳಿಸು" ಎಂದರು. ಕಾರ್ಯದರ್ಶಿಯು ಹೊರಗೆ ಹೋದನು.

"ಮತ್ತೇನಿಲ್ಲ. "ಸಾಬು"ವೆಂಬ ನಟನಿರುವನಲ್ಲ. ಅವನ ಪೂರ್ವ ವೃತ್ತವು ಪ್ರಕಟವಾಗಿದೆ. ಅದನ್ನು ಓದುವಾಗ, ಅವನ ಈಗಣ ಅಂತಸ್ತು ನೋಡುವಾಗ, ಬಹಳ ಆಶ್ಚರ್ಯವಾಗುವುದು."

"ಅಷ್ಟೇ ತಾನೆ"

"ಅಷ್ಟೇ ತಾನೆ. ಇದು ಆಶ್ಚರ್ಯವಲ್ಲವೆ? ಆನೆಯ ಮಾವುತನ ಮಗನೊಬ್ಬನು, ಇಂತಹ ಕೀರ್ತಿಶಾಲಿಯಾಗುವುದೆಂದರೆ?"

"ಅದರಲ್ಲೇನು. ಹೋಟೇಲಿನ ಮಾಣಿಯೊಬ್ಬನು, ನೃತ್ಯವಿಶಾರದನಾದಂತೆ."

"ಅಂದರೆ, ಯಾರಂತಹವರು?"

"ಬೇರೆ ಯಾರೂ ಅಲ್ಲ; ನಾನೆ. ಸಾಕ್ಷಾತ್ ನಾನೆ. ಈ ಮಣಿಮಂಜರಿಯ ಮನೋಹರ ರಮಾನಾಥ."

"ಒಹೋ. ನಿಮ್ಮ ವ್ಯಕ್ತಿತ್ವದ ಹಿಂದೆಯೂ ಅಂತಹ ಮಹತ್ವವಿದೆಯೆ?"

"ಇಲ್ಲದೆ ಮತ್ತೆ? ಮಣಿಪುರದಿಂದ ನಿನ್ನನ್ನು ಹಾರಿಸಿಕೊಂಡು ಬರುವ ಮೊದಲು ನಾನು ಒಂದು ಹೋಟೇಲುಮಾಣಿಯಾಗಿದ್ದೆ."

"ಅಂದರೆ, ಅರ್ಥವಾಗಲಿಲ್ಲ"

"ಹಾಗಿದ್ದರೆ, ಕೇಳುವಂಥವಳಾಗು. ಪೂರ್ವವೃತ್ತಾಂತವಂ ಪೇಳು ವೆನು. ಈ ಧರಣೀಮಂಡಲ ಮಧ್ಯದಲ್ಲಿ, ಢಿಲ್ಲಿ ನಗರಿಯಲ್ಲಿ ನಾನು ಹೋಟೇಲು ಮಾಣಿಯಾಗಿದ್ದೆ. ಬಿಡುವಿನ ಪೊಳ್ತಿನೊಳ್ ಅಲ್ಲೇ ಇದ್ದ "ವ್ರಜನಾಥ" ಎಂಬವರಲ್ಲಿ ನೃತ್ಯಾಭ್ಯಾಸ ಮಾಡುತ್ತಿದ್ದು, ಕೆಲವು ಕಾಲಾ ನಂತರ, ಸಿನೆಮಾದಲ್ಲಿ ನರ್ತಕನಾಗಿ ಸೇರಿ. ಬೇಕಾದಷ್ಟು ಗಳಿಸಿ, ಇನ್ನೂ ಅದರಲ್ಲಿ ಹೆಚ್ಚಿನ ಪಾಂಡಿತ್ಯವಂ ಗಳಿಸಬೇಕೆಂದು, ಬೇರೆ ಬೇರೆ ಊರಿಗೆ ಹೋಗಿ ಅಲ್ಲಲ್ಲಿಯ ನೃತ್ಯ ರೀತಿಯಂ ಕಲಿತು ಕಡೆಗೆ ನಿಮ್ಮ ಮಣಿ ಪುರಕ್ಕೆ ಬಂದು, ಮಣಿಪುರ ನೃತ್ಯವಂ ಅಭ್ಯಸಿಸಿ, ಅದರೊಂದಿಗೆ ನಿನ್ನಿಂದ ಪ್ರೇಮ ಪಾಠವಂ ಕಲಿತು......"

"ಸಾಕು. ಇದೇನು ಬಿರಿಯಿಲ್ಲದ ಗಾಡಿಯೆ?"

"ಅಲ್ಲ ನನ್ನ ಕತೆಯಿದು. ಸಾಕೋ. ಇನ್ನು ನಿನ್ನೊಡಗೂಡಿ ಕಲಾಮಂದಿರವನ್ನು ಸ್ಥಾಪಿಸಿ, ಸಮಗ್ರಭಾರತದಲ್ಲಿ ಸಂಚರಿಸಿ, ಪರದೇಶಂ ಗಳಲ್ಲೂ ಕೀರ್ತಿ ಪತಾಕೆಯಂ ಹಾರಿಸಿ, ಹಿಟ್ಲರ್‌ನಿಂದ ಶಾಬಾಸ್ ಗಿರಿ ಪಡೆದು, ರೂಸ್‌ವೆಲ್ಟರೊಡನೆ, ಚಾ ಕುಡಿದು ಬಂದೆನೆಂಬಲ್ಲಿಗೆ....."

ಹೊರಗಿನಿಂದ ಕರೆಗಂಟೆ (Call Bell) ಯ ಸದ್ದಾಗುವುದು.

"ಯಾರು? ಒಳಗೆ ಬನ್ನಿರಿ."

ರಮಾನಾಥರ "ಕಲಾಮಂದಿರ"ದ ಮೆನೇಜರರು ಬಂದು "ಈ ದಿನ ಆರುಗಂಟೆಗೆ "ಗೋಕುಲ ನಿರ್ಗಮ"ದ ಪ್ರೇಕ್ಟೀಸ್ ಇದೆಯಲ್ಲ" ಎಂದರು.

"ಹೌದು ಬರುವೆನು" ಎಂದು ಅವರನ್ನು ಕಳುಹಿಸಿ, "ಮಂಜರೀ ನಡೆ. ಹೋಗೋಣ. ಈ ದಿನ ನಿನ್ನ ರಾಧೆಗಿಂತ ಮಿಗಿಲೆನಿಸಿದ ಕೃಷ್ಣ ನೆನಿಸಿಕೊಂಡೇನು" ಎಂದರು.

"ಅದೆಂದಿಗೂ ಸಾಧ್ಯವಿಲ್ಲ. ಮಣಿಪುರದಲ್ಲಿ ಮಿಗಿಲೆನಿಸಿದ, ಈ ಮಣಿಮಂಜರಿಯನ್ನು,— ನನ್ನಿಂದಲೇ ಮಣಿಪುರೀ ನೃತ್ಯವನ್ನು ಕಲಿತ ವರು ನನ್ನನ್ನು ಸೋಲಿಸಲುಂಟೇ?"

"ಅದೇಕೆ ಅಸಾಧ್ಯ. ಮಿಗಿಲೆನಿಸಿದ ನಿನ್ನನ್ನೇ ಹಾರಿಸಿದವನಿಗೆ ಅಸಾಧ್ಯವೇ? ಅಲ್ಲಿಯ ನವತರುಣರು ನಿನ್ನ ಮಧುರ ಕಟಾಕ್ಷಕ್ಕಾಗಿ

ಬೆನ್ನ ಹಿಂದೆ ಸುಳಿಯುತ್ತಿರಲಿಲ್ಲೆಷ್ಟು ಮುಂದಿ! ಅವರೆಲ್ಲರನ್ನೂ ತೊರೆದು, ಅನ್ಯಪ್ರಾಂತೀಯನೂ ಅನ್ಯಮತೀಯನೂ ಆದ, ನನಗೆ ಸೋತಿಲ್ಲವೆ ನೀನು?" ಎಂದು ನಸುಕೆಂಪಾಗಿದ್ದ ಅವಳ ಸುಂದರಕಪೋಲಕ್ಕೆ ಬೆರಳಿನಿಂದ ಮೆಲ್ಲಗೆ ಹೊಡೆದನು.

"ಇರಬಹುದು. ಕಲೆಗೆ ಪರಮತ, ಪರಪ್ರಾಂತ್ಯವೆಂದಿದೆಯೆ? ನಿಮ್ಮ ಕಲೆಗೆ ಸೋತಿರುವೆನು. ನಾನೇಕೆ, ಕಲಾದೇವಿಯೇ ಸೋತಿರುವಳು" ಎಂದು ಮಿಂಚುಗೋಲಿನಂತಹ ಕಟಾಕ್ಷವನ್ನು ಬೀರಿದಳು.

"ಈ ಸಂಭಾಷಣೆಯೆಲ್ಲಾ ಈಗ ಸಾಕು. ಗಂಟೆ ಆಯಿತು" ಎಂದು ಇಬ್ಬರೂ ಕಾರಿನ ಬಳಿ ನಡೆದರು.

* * *

ಮಂಗಳೂರಿಗೆ "ಕಲಾಮಂದಿರ"ವು ಬರುತ್ತದೆಂಬ ಸುದ್ದಿಯು ಹರಡಿ ಎಷ್ಟೋ ದಿನಗಳಾದುವು. ಪರದೇಶಗಳಲ್ಲಿ ಜಯಭೇರಿಯನ್ನು ಮೊಳಗಿಸಿದ "ಕಲಾಮಂದಿರ"ದ ಹೆಸರು ಪ್ರತಿಯೊಬ್ಬನ ತಲೆಯಲ್ಲಿ ಸುಳಿಯತೊಡಗಿತು. ಭಾರತವಿಖ್ಯಾತ ರಮಾನಾಥರ ಮೇಲೆ ಅನೇಕ ಕಟ್ಟುಕತೆಗಳು ಉಂಟಾದುವು. "ಬಂಗಾಳಿಯೆಂದರು ಕೆಲವರು. "ಅಲ್ಲ; ಮಣಿಪುರದವನು" ಎಂದರು ಹಲವರು. "ಅದು ಸುಳ್ಳು. ಆತನು ಹುಟ್ಟಿದುದು ಕೇರಳದಲ್ಲಿ" ಎಂದು ಹತ್ತಿರದ ಪರಿಚಿತರಂತೆ ಮಾತಾಡಿದರು ಹಲವರು. ಟಾಗೋರರ ವಂಶಸ್ಥನೆಂದು ವಾದಿಸಿದವರೂ ಉಂಟು. ಉದಯಶಂಕರರ ಸಂಬಂಧಿಕ ಎಂದು ದೃಢವಾಗಿ ಹೇಳಿದವರೂ ಇಲ್ಲದೆ ಇಲ್ಲ. ಅಂತೂ ಅನೇಕ ಕಟ್ಟುಕತೆಗಳು ರಮಾನಾಥರ ವ್ಯಕ್ತಿತ್ವಕ್ಕೆ ಕಳೆಕೊಟ್ಟುವು. ಮತ್ತಷ್ಟು ಸಂತಸದ ವಿಚಾರವೆಂದರೆ, ಅಲ್ಲಿ ಅವರು ಪ್ರದರ್ಶಿಸುವುದು ಸಂಪೂರ್ಣ ನೃತ್ಯ ನಾಟಕಗಳನ್ನೆ. ಅಷ್ಟೇ ಅಲ್ಲ; ಕನ್ನಡ ಕವಿಗಳ ಉತ್ಕೃಷ್ಟ ನಾಟಕಗಳನ್ನು ಎಂಬುದು.

ಕಡೆಗೆ ಇನ್ನೂ ಜನರ ಆತುರವನ್ನು ಕೆರಳಿಸುವುದು ಬೇಡವೆಂದು ಒಂದು ದಿನ "ಕಲಾಮಂದಿರ"ವು ಮಂಗಳೂರಿಗೆ ಬಂದೇ ಬಿಟ್ಟಿತು. ಮೊತ್ತಮೊದಲಿನ ನಾಟಕಕ್ಕೇನೆ ಹದಿನೈದು ದಿನಗಳ ಮೊದಲೇ ಸೀಟು

ಗಳು ರಿಸರ್ವ್ ಆದುವು ಎಷ್ಟೋ ಮಂದಿ ಎಷ್ಟೋ ದಿನಗಳ ವರೆಗೆ ಪ್ರವೇಶ ಸಿಗದೆ ಕಷ್ಟಪಟ್ಟುದೂ ಇದೆ.

ರಮಾನಾಥರಿಗೆ ಮಂಗಳೂರಲ್ಲಿ ಲೈಸನ್ಸು ಸಿಕ್ಕಿದುದು ಒರೇ ಮೂವತ್ತು ದಿನಗಳಿಗೆ ಮಾತ್ರ. ಪ್ರಥಮ ದಿನ ಆಡಿದ ಪು. ತಿ. ನ.ರವರ "ಗೋಕುಲ ನಿರ್ಗಮನ" ಎಂಬ ನಾಟಕವು ಹಲವರ ಮನಸೆಳೆಯಿತು. ಅದೆ ನಾಟಕವನ್ನೇ ಎಡೆಬಿಡದೆ ಹದಿನೈದು ದಿನ ಆಡಿದರೂ ಜನರಿಗೆ ಸಾಕೆನಿಸಲಿಲ್ಲ. ಕಂಡು ದಣಿದವರಿಲ್ಲ. ಮತ್ತು ಅನೇಕ ಕಲಾವಿದರ ಕಲಾಕೃತಿಗಳನ್ನು ಆಡಿ ತೋರಿಸಿದರು.

"ಕಲಾಮಂದಿರ"ದ ಸಫಲತೆಯ ಯಶಸ್ಸು ಇಡೀ ಜಿಲ್ಲೆಯ ಮೂಲೆ ಮೂಲೆಗಳಿಗೆ ಹಬ್ಬಿತು. ಈಗ ಹಳ್ಳಿಯಿಂದಲೂ ಜನಪ್ರವಾಹವು ಹರಿಯತೊಡಗಿತು. ಈ ವರ್ತಮಾನವು ಶಂಕರಭಟ್ರಿಗೂ ಸಿಕ್ಕದಿರಲಿಲ್ಲ. ಮೊದಲೇ ರಮಾನಾಥರ ವರ್ತಮಾನ ತಿಳಿಯದವರಲ್ಲ ಅವರು. ಈಗ ನೋಡಿದವರು ಮತ್ತಷ್ಟು ಬಣ್ಣಕಟ್ಟಿ ಹೊಗಳುತ್ತಿದ್ದಾರೆ. ತಾನೂ ಒಮ್ಮೆ ನೋಡಬೇಕೆನಿಸಿತು. ಅವರು ಹೋಗುವಾಗ ಅವರ ಭಾವ ವೆಂಕಣ್ಣನವರೂ ಹೊರಟರು. ಆಗ ಮನೆಯ ಹುಡುಗರು, ವೆಂಕಣ್ಣನವರ ಮಗಳು ಪಾರ್ವತಿ ಕೂಡಾ; ಇಷ್ಟು ಜನರಿರುವಾಗ ಟೇಕ್ಸಿಮಾಡಿ ಹೋಗುವುದೊಳ್ಳೆಯದೆಂದು ಮಾಪಣ್ಣನ ಟೇಕ್ಸಿಮಾಡಿಕೊಂಡು ಹೊರಟರು.

ಇವರು ನಾಟಕ ನೋಡಲು ಹೊರಟ ದಿನವೇ ಕಡೇ ನಾಟಕವಾಗಿತ್ತು. ಅದೂ ಅವರ ಅತ್ಯುತ್ಕೃಷ್ಟ ನಾಟಕವಾದ "ಗೋಕುಲನಿರ್ಗಮನ". ಆ ದಿನ ಶಂಕರಭಟ್ರಿಗೆ ಟಿಕೇಟು ಸಿಗುವುದೇ ಕಷ್ಟವಾಯಿತು. ನಡೆಯಲೂ ಬಾರದ ಮುದುಕರು ಕೂಡಾ ಸಾಕ್ಷಾತ್ ಕೃಷ್ಣನನ್ನೊಮ್ಮೆ ಕೊನೆಯಬಾರಿ ನೋಡುವೆವೆಂದು ತಮ್ಮ ಮೊಮ್ಮಕ್ಕಳ ಭುಜದ ಹೊರೆಯಾಗಿ ಬಂದವರೂ ಉಂಟು. ಮತ್ತೆ ಸ್ಥಳಸಿಗಲಾರದೆಂದು ಒಂಭತ್ತು ಗಂಟೆಗೇ ಬಂದು ಕುಳಿತವರು, ಸುರುವಾಗಲು ಇನ್ನೂ ಒಂದು ಗಂಟೆಯ ಸಮಯವಿದ್ದರೂ, "ಅಯ್ಯೋ ಇವರಿಗೆ ಎಷ್ಟು ದೊಡ್ಡ ಹೆಸರಿದ್ದರೂ ಸಮಯಶೀಲತೆಯಿಲ್ಲ"ವೆಂದು ಶಪಿಸುತ್ತಿದ್ದರು. ಅಂತೂ ಹತ್ತು ಗಂಟೆಗೆ ಗಂಟೆಯ ಸದ್ದಾಯಿತು. ಹೋಲಿನ ಲೈಟು ನಂದಿತು: ಕತ್ತಲೆಯಾವ

ರಿಸಿದ್ದ ರಂಗಭೂಮಿ. ಕಿರುದನಿಯ ಮೋಹಕ ರಾಗದಲ್ಲಿ ಕೊಳಲ
ಗಾನವು ಮೊದಲಾಗಿ, ಕಿರುದೀಪವೊಂದು ಮಿನುಗಿ, ಅಲ್ಲಿಯೇ ಮಸು
ಕಾದ ಆಕೃತಿಯು ವ್ಯಕ್ತಿಯಾಗಿ ಕವಿಯು ಪ್ರವೇಶವಾಯಿತು. "ಅವನೀ
ಉನ್ಮತ್ತನೀ ಸರಿಯುಹೊತ್ತಿನೊಳು ಕೊಳಲಬಾರಿಸಿ ಮಧುರರಾಗವನು
ರಚಿಪನಿಂತೆ" ಎಂಬಲ್ಲಿಂದ ಆರಂಭವಾಯಿತು. ನಾಟಕವು ಮುಂದೆ
ಮುಂದೆ ಹೋದಂತೆ ಸಭಿಕರನ್ನು ಸಂಪೂರ್ಣ ಸೆರೆ ಹಿಡಿಯಿತು;
ಯಾವುದೋ ಹೊಸಲೋಕಕ್ಕೆ ಕರೆದೊಯ್ದಿತು. ಸುಂದರವಾದ ಉದ್ಯಾನ
ದಲ್ಲಿ ತಿರುಗಾಡಿಸಿತು. ಗಂಧರ್ವರೇ ಬಂದು ಕುಣಿಯುತ್ತಿರುವರು ಎಂದು
ಭಾಸವಾಯಿತು. ಪಕ್ಕವಾದ್ಯ, ಹಾಡು, ಕಲಾವಿದರ ನರ್ತನ ಇವು
ಒಂದೇ ಮೇಳವಾದರೆ ಹೇಗಾಗದು? ಕಡೆಗೆ, ರಾಧಾಕೃಷ್ಣರ ಪ್ರವೇಶ
ವಾದ ಮೇಲಂತೂ ಸಭಿಕರು ಉನ್ಮತ್ತರಂತಾದರು. ಕ್ಷಣಕ್ಷಣಕ್ಕೂ
ಚಪ್ಪಾಳೆಗಳು. ಕೃಷ್ಣನಿಗಿಂತ ರಾಧೆಯು ಮಿಗಿಲೋ, ರಾಧೆಗಿಂತ ಕೃಷ್ಣನು
ಮಿಗಿಲೋ ಎಂದು ಹೇಳುವುದಸಾಧ್ಯ, ಮಣಿಮಂಜರಿ, ರಮಾನಾಥರ
ನೃತ್ಯಾಭಿನಯದಲ್ಲಿ ಇಬ್ಬರಿಗೂ ಕಲಾದೇವಿಯು ಒಲಿದಿರುವಳು. ಮತ್ತೆ
ಕೇಳುವುದೇನು? ರಾಧಾಕೃಷ್ಣರ ಸಂಯೋಗ ಶೃಂಗಾರದ ದೃಶ್ಯವು ಅಚ್ಚ
ಳಿಯದ ದೃಶ್ಯ. ಶಂಕರಭಟ್ಟರು ರಮಾನಾಥರ ನೃತ್ಯವನ್ನು ಕಂಡು ಸಂತ
ಸಗೊಂಡರು. ದುಃಖಪಡದೆಯೂ ಇರಲಿಲ್ಲ. ಇವರ ಕಣ್ಣೆದುರಲ್ಲಿ
ಒಂದು ಕಡೆ ರಮಾನಾಥರ ಚಿತ್ರ; ಇನ್ನೊಂಡೆದೆ ರಾಮನ ಚಿತ್ರ. ರಮಾ
ನಾಥರ ಚಿತ್ರವು ಮುಂಬಂದು ಮೇಲೆ ಮೇಲೇರುತ್ತಿದೆ. ರಾಮನ ಚಿತ್ರವು
ತಲೆತಗ್ಗಿಸಿ ಯಾವುದೋ ಗಾಢಾಂಧಕಾರದ ಕಡೆಗೆ ಹೋಗುತ್ತಿದೆ. ಒಂದು
ಕಡೆ ಗುರಿಕಾರತನವು ಮರ್ಯಾದೆಯ ಹಗ್ಗದಲ್ಲಿ ಕಟ್ಟಲ್ಪಟ್ಟ ಚಿತ್ರ;
ಇನ್ನೊಂದೆಡೆ ನೃತ್ಯವು ಅದನ್ನು ಹೀಯಾಳಿಸುತ್ತಿದೆ......

ಗಂಟೆಯು ಸದ್ದಾಯಿತು. ಎಲ್ಲಾ ದೀಪಗಳೂ ಉರಿದುಕೊಂಡವು.
ಶಂಕರಭಟ್ಟರು ನಿಜಲೋಕಕ್ಕಿಳಿದರು. ಇದೇ ಕಡೆಯ ನಾಟಕವಾದುದ
ರಿಂದ ವಾಡಿಕೆಯಂತೆ ಸಭಿಕರ ಭಾಷಣ, ಪಾರಿತೋಷಿಕ ವಿತರಣ ಮುಂ
ತಾದುವುಗಳಾದುವು. ಇವುಗಳಿಗೆಲ್ಲಾ ಉತ್ತರಕೊಡುವುದಕ್ಕಾಗಿ ಸ್ವತಃ
ರಮಾನಾಥರೇ ಹೊರಬಂದರು. ಬಂದು ನಿಂತೊಡನೆಯೇ ಎಷ್ಟೋ

ಮುಂದಿ ಹೂಮಾಲೆಗಳನ್ನರ್ಪಿಸಿದರು. ಒಂದು ಗಾಡಿ ತುಂಬುವಷ್ಟು ಬೆಳ್ಳಿ ಬಂಗಾರದ ಸಾಮಾನುಗಳು ಪಾರಿತೋಷಕವಾಗಿ ದೊರಕಿದುವು. ಕಡೆಗೆ ರಮಾನಾಥರ ಭಾಷಣಕ್ಕಾರಂಭವಾಯಿತು. "ಕಲಾಭಿಮಾನಿಗಳೆ, ಈಗ ನೀವೆಂದುದೆಲ್ಲಾ ಬರೇ ಸ್ತುತಿ. ಅದಕ್ಕೆಲ್ಲಾ ನಾನು ಪಾತ್ರನಲ್ಲ. ನನ್ನ ಸಂಗಡಿಗರಿಂದ ಮಾತ್ರ ನನಗೀ ಯಶಸ್ಸು ದೊರಕಿತೇ ಹೊರತು, ಅವರಿಲ್ಲದಿರುತ್ತಿದ್ದರೆ ನನ್ನಿಂದ ಏನಾಗುತ್ತಿತ್ತು? ಈ ದಿನದ ನಾಟಕಕ್ಕೆ ಸಿಕ್ಕಿದ ಕೀರ್ತಿಯ ಅರೆವಾಸಿಯೂ ಇದರ ಕವಿಗೆ ಸಲಬೇಕು. ಅವರಿಷ್ಟು ಸುಂದರ ಕೃತಿಯನ್ನು ನಮಗೆ ಕೊಡದಿರುತ್ತಿದ್ದರೆ, ನಮಗೆ ಈ ಗೆಲುವಿತ್ತೆ? ಕನ್ನಡ ಬಂಧುವಾದ ಪು. ತಿ. ನರವರ ಈ ಕೃತಿಯು ನೃತ್ಯಾಭಿನಯಕ್ಕೆ ಅಷ್ಟು ಯೋಗ್ಯವಾಗಿದೆ.

"ಇನ್ನು ಮುಖ್ಯ ವಿಚಾರವೊಂದನ್ನು ತಿಳಿಸಿ ನಾನು ಮರೆಯಾಗುವೆನು. ನಿಮ್ಮೆಲ್ಲರ ಮನಸ್ಥಿತಿಯು ಹೇಗಿರುವುದೋ ಎಂದು ತಿಳಿಯುವ ಮೊದಲು, ನನ್ನ ನಿಜಸ್ಥಿತಿಯನ್ನು ಅರುಹುವ ಧೈರ್ಯವಿದ್ದಿಲ್ಲ. ಈಗ ಬೇಕಾದಷ್ಟು ಪ್ರೋತ್ಸಾಹವು ಸಿಕ್ಕಿದೆ. ಇನ್ನು ನನ್ನ ನಿಜವಾದ ವಿಷಯವನ್ನು ತಿಳಿಸುವೆನು.

"ಈ ರಮಾನಾಥನೆಂದರೆ ಬೇರೆ ಪ್ರಾಂತದವನೆಂದು ಭಾವಿಸಬೇಡಿ. ಬೇರೆ ಊರವನೆಂದೂ ತಿಳಿಯಬೇಡಿ ಕನ್ನಡಿಗ, ಅಚ್ಚ ಕನ್ನಡಿಗ. ನಿಮ್ಮ ಊರಿನವನೇ......"

ಶಂಕರಭಟ್ರು ಏನೋ ಒಂದು ದೃಢಸಿರ್ಧಾರದಿಂದ ಮುಖವೆತ್ತಿದರು. ಮುಖದಲ್ಲಿ ಕುತೂಹಲವೂ, ಸಂತಸವೂ ಮಿನುಗುತ್ತಿವೆ.. ...

"ಮಂಗಳೂರಿಗೆ ನೆರೆಯಾದ ಆಳಿಕೆ ಶಂಕರಭಟ್ರ ಮಗ........"

ಶಂಕರಭಟ್ರು ಎದ್ದು ನಿಂತರು. "ಏನು! ಇವನು ನಮ್ಮ ರಾಮನೇ!!" ಎಂಬ ಭಾವವು ಒಡೆದು ಕಾಣುತ್ತಿದೆ. "ಆ......"ಎಂದು ಬಾಯಿ ಬಿಟ್ಟಿರುವರು.

" .....ರಾಮು. ನಾಲ್ಕಾರು ವರ್ಷಗಳ ಹಿಂದೆ ಊರನ್ನು ತೊರೆದುಹೋದ ರಾಮನೇ ಈಗ ರಮಾನಾಥನಾಗಿ ನಿಮ್ಮೆದುರಲ್ಲಿ ನಿಂತಿರುವನು.

ನನಗೆ ಸಿಕ್ಕಿದ ಯಶಸ್ಸಿಗೆಲ್ಲಾ ಕಾರಣ ನನ್ನ ಸಹಧರ್ಮಿಣಿಯಾದ ಮಣಿಮಂಜರಿ......"

"ಏನು? ಈತನಿಗೆ ಮದುವೆಯಾಗಿದೆಯೇ? ಅದು ಮಣಿಮಂಜರಿ-ರಾಧೆ?......" ಎಂದು ಶಂಕರಭಟ್ರು ಸ್ವಲ್ಪ ಅಳುಕಿದರು. ಆದರೂ, ಸತ್ತಿರುವನೋ ಬದುಕಿರುವನೋ ಎಂದು ತಿಳಿಯದ ರಾಮನು ಈಗ ಕೀರ್ತಿ ಪತಾಕೆಯನ್ನು ಫಡಫಡನೆ ಹಾರಿಸುತ್ತಾ ತನ್ನೆದುರಲ್ಲಿ ನಿತ್ತಿರುವನು.

"ಇನ್ನೊಬ್ಬರು ನನ್ನ ಯಶಸ್ಸಿಗೆ ಕಾರಣರಾಗಿರುವರು. ಅವರು ನನ್ನ ಪೂಜ್ಯ ತಂದೆಯವರೆ. ನಾನು ಬಾಲ್ಯದಿಂದಲೂ ನರ್ತನ ಕಲೆಯನ್ನು ಪ್ರೀತಿಸುವವನಾಗಿದ್ದೆ. ಒಂದು ದಿನ ನಾನು ವಿನೋದಕ್ಕಾಗಿ ನನ್ನ ನರ್ತನ ಪ್ರದರ್ಶನ ಮಾಡುವೆನೆಂದಾಗ, "ಕೂಡದು. ನಮ್ಮ ಮನೆತನಕ್ಕೆ ಕುಂದುತರುವ ಕೆಲಸವದು. ನಮ್ಮ ಪೂರ್ವಜರು ಈ ರೀತಿ ಮಾಡಿದವರಲ್ಲ. ಆದುದರಿಂದ ನೀನು ನಮ್ಮ ಮನೆಯಲ್ಲಿ ನೀರು ಕುಡಿಯಬೇಕಾದರೆ ಹೀಗೆ ಮಾಡಬಾರದು" ಎಂದರು. ಕಲೆಯ ಕರೆಯು ಈ ಮಾತುಗಳನ್ನು ತಿರಸ್ಕರಿಸುವಂತೆ ಮಾಡಿತು. ಮನೆಬಿಟ್ಟು ಹೋಗಿ ತಕ್ಕಷ್ಟು ಪಾಂಡಿತ್ಯವನ್ನು ಗಳಿಸದೆ ಈ ಊರನ್ನು ಸೇರಲಾರೆ ಎಂದು ಕೊಂಡು ಮನೆಯಿಂದ ಹೊರಟೆ. ಅವರಷ್ಟು ಹೇಳದಿರುತ್ತಿದ್ದರೆ, ನಾನು ದೃಢಮನಸ್ಕನಾಗುತ್ತಿದ್ದಿಲ್ಲ. ಆದುದರಿಂದ ಈ ಎಲ್ಲಾ ಯಶಸ್ಸಿಗೆ ಅವರು ಕಾರಣರಾಗಬೇಕಲ್ಲ......"

ಪಾರ್ವತಿಯು ಏನೇನೋ ಆಲೋಚನೆಗಳ ಸುಳಿಗೆ ಸಿಲುಕದಿರಲಿಲ್ಲ. "ಅಯ್ಯೋ! ನೀನಂದು ಇವನನ್ನು ಕುಣಿತದವನು ಎಂದು ತಿರಸ್ಕರಿಸಿದೆ. ಈಗ ಈತನ ಯೋಗ್ಯತೆಯನ್ನು ನೋಡು". ಎಂದು ತಿರಸ್ಕರಿಸಿತು. ರಮಾನಾಥದ ಹಾವಭಾವಗಳನ್ನು ಕಂಡು "ನಿಜವಾಗಿಯೂ ವಂಚಿತಳು" ಎಂದುಕೊಂಡಳು. ಮಣಿಮಂಜರಿಯು ಅವನ ಕೈಹಿಡಿದವಳು ಎಂದು ತಿಳಿದ ಮೇಲೆ "ಭಾಗ್ಯಶಾಲಿನಿ" ಎಂದುಕೊಂಡಳು. ಆ ಮೇಲೆ ಮತ್ಸರವು ತನ್ನ ಪ್ರಭಾವವನ್ನು ಬೀರಿತು......

ಶಂಕರಭಟ್ರು ತಲೆತಗ್ಗಿಸಿದರು. "ಅಯ್ಯೋ! ನಮ್ಮ ಮುಖಕ್ಕೆ ಮಸಿಬಳಿದನಲ್ಲಾ" ಎಂದು ಹೀಯಾಳಿಸಿತು ಮನಸ್ಸು......"ಆಗಿನ

ಕಾಲದ ತಿಳುವಳಿಕೆಯು ಅಷ್ಟೇ ಆಗಿತ್ತು. ಭರತನಾಟ್ಯಕ್ಕೆ ಒಂದು ವಿಶಿಷ್ಟಸ್ಥಾನವಿದ್ದಿಲ್ಲ. ಹೊಸತನ, ಹಳೆತನಗಳ ತಿಕ್ಕಾಟದ ಕಾಲ. ನಾನಾ ತಿಕ್ಕಾಟಕ್ಕೆ ಸಿಲುಕದೆ.....“ಹೌದು. ರಾಮನೆಂದುದು ಪೂರಾ ಸತ್ಯ. ಭರತನಾಟ್ಯಕ್ಕೆ ಇಷ್ಟುದೊಡ್ಡ ಸ್ಥಾನವಿದೆಯೆಂದು ನೀನು ತಿಳಿದಿದ್ದಿಲ್ಲ” ವೆಂದಿತು ಅವರ ಮನಸ್ಸು. “ಇನ್ನಾದರೂ ಒಮ್ಮೆ ಅವನನ್ನು ಮಾತಾಡಿಸು. ಮಾತಾಡಿಸುವುದಾದರೆ ಇದೇ ಸಮಯ” ಎಂದಿತು.

“......ಇನ್ನು ಕಡೆಯದಾಗಿ ನಿಮ್ಮೆಲ್ಲರನ್ನು ವಂದಿಸಿ ನಾನು, ಮರೆಯಾಗುವೆನು. ಇನ್ನು ಒಂದು ದೃಶ್ಯಮಾತ್ರವಿದೆ. ಅದನ್ನು ನೋಡುವಷ್ಟು ಸಾವಧಾನರಾಗಬೇಕು” ಎಂದು ರಾಮನು ಮಾತು ಮುಗಿಸುವ ಮೊದಲೇ ಶಂಕರಭಟ್ರು ಆವೇಶಭರಿತರಾಗಿ ಓಡುತ್ತಾ ಬಂದು ರಂಗಭೂಮಿಯನ್ನೇರಿದರು. “ರಾಮ, ನನ್ನ ಆತ್ಮ” ಎಂದು ಉದ್ಗರಿಸಿದರು. “ಅಪ್ಪ! ನನ್ನನ್ನು ಕ್ಷಮಿಸಿರಿ” ಎಂದು ರಾಮನು ಕಾಲಿಗೆರಗಿದನು. ತೆರೆಯು ಅವರನ್ನು ಆವರಿಸಿತು.

* * *

ಕೊನೆಯ ದೃಶ್ಯವಾರಂಭವಾಯಿತು. ಕೊಳಲ ನಾದವು ಕೇಳಿಸುತ್ತಿದೆ. ಕವಿಯ ಪಾತ್ರಧಾರಿಯು ಬಂದು, “ಈ ಕನಸು ಒತ್ತಾಗಿ ಅವೆಡೆಗೆ ತೂರುತ್ತಲೇನಹುದೊ? ಅಂತು ಬಲು ಹಿರಿದಾಯ್ತು ಸಮ್ಮೋದವು” ಎಂದು ಹಾಡುವನು.

* * *

ರಂಗದೊಳಗಿಂದ ಆಳೊಬ್ಬನು ಬಂದು ವೆಂಕಣ್ಣ, ಪಾರ್ವತಿ ಮುಂತಾದವರನ್ನು ಹಿಂಬಾಗಿಲಿನಿಂದ ಒಳಗೆ ಕರೆದೊಯ್ದನು.

ಸಮಾಜದ ಇದಿರಲ್ಲಿ

"ಹಲೋ ಗೋಪಾಲ್"

"ಗುಡ್ ಮೋರ್ನಿಂಗ್, ರಾಮೂ"

"ಏನೋ ಗೋಪಾಲ್, ಬಹಳ ಅಪರೂಪವಾಗಿ ಹೋದೆ?"

"ಕೆಲಸದ ತೊಡಕಿನಲ್ಲಿ ಇತ್ತ ಬರಲಾಗಲಿಲ್ಲ ರಾಮೂ"

"ಬಹಳ ಕೆಲಸದವನಾಗಿಬಿಟ್ಟಿಯಲ್ಲ; ಕಲೆಕ್ಟರನೆಂದು ತೋರು ತ್ತದೆ."

"ಅಷ್ಟಕ್ಕೇನೂ ಇಲ್ಲ ನಾನು. ಸ್ನೇಹಿತರಿಬ್ಬರೂ ಯಾವಾಗಲೂ ಜೊತೆಯಲ್ಲಿದ್ದರೇನು ಸ್ವಾರಸ್ಯವಿದೆ? ನಮ್ಮ ಊಟಕ್ಕೆ ದಿನಾಲೂ ಪಾಯಸ ವಿದ್ದರೆ ಅದರಲ್ಲೇನು ರುಚಿಯಿದೆ?"

"ಅದು ಸರಿ ಗೋಪಾಲ್"

ಇಂದು ನನ್ನ ಜೀವಾಧಿಕವಾದ ಗೆಳೆಯ ಗೋಪಾಲನು ಬಂದುದ ರಿಂದ, ಅದೂ ಬಹುದಿನ ಬಿಟ್ಟು ಬಂದುದರಿಂದ, ಅವನೊಡನೆ ಹರಟೆ ಕೊಚ್ಚುವ ಆತುರದಿಂದ ನನ್ನ ಕೆಲಸಗಳನ್ನೆಲ್ಲಾ ಬದಿಗೊತ್ತಿ ನಮ್ಮಿಬ್ಬರ ಮಾತುಗಳಿಗೆ ಸುರುಮಾಡಿದೆವು. ನಮ್ಮ ಮಾತಿನ ಎಡೆಯಲ್ಲಿ ಅಲ್ಲಿಯ ಇಲ್ಲಿಯ ವರ್ತಮಾನಗಳೆಲ್ಲಾ ಬಂದು ಹೋದುವು. ಇಷ್ಟರಲ್ಲಿಯೇ ನನ್ನ ಶಾಂತೆ, ಗೋಪಾಲನಿಗಾಗಿ ಕಾಫಿಯನ್ನು ತಂದಿಟ್ಟಳು. "ಅವನೊ ಡನೆ ನನಗೂ ಸ್ವಲ್ಪ ಬರಬಹುದು" ಎಂದೆ. "ಹೂಂ" ಎಂದಳು. ಎಂದುದು ಮಾತ್ರವಲ್ಲ, ಕಾಫಿ ಬಂದೇಬಂತು. "ಕಾಫಿ ತೆಗೋ ಗೋಪಾಲ್" ಎಂದೆ. "ಹೂಂ" ಎಂದು ಗೋಪಾಲನು ಗ್ಲಾಸು ತೆಗೆಯುತ್ತಾ,

"ಹೌದೋ ರಾಮೂ, ನಿನ್ನ ಶಾಂತೆಯ ಮನೆಯ ಹತ್ತಿರವಿರುವ ಲೀಲು ಮೊನ್ನೆ ಆತ್ಮಹತ್ಯೆ ಮಾಡಿದಳಂತೆ; ಹೌದೇನೋ? ಅವಳ ಆತ್ಮ ಹತ್ಯೆಗೂ, ನಿನ್ನ ಭಾವ ರಮೇಶನಿಗೂ ಏನೋ ಸಂಬಂಧವಿದೆಯಂತೆ. ನಿಜವೇ?"

"ಗೋಪಾಲ್, ಅವಳು ಆತ್ಮಹತ್ಯೆ ಮಾಡಿದುದು ನಿಜ. ಆದರೆ ಅವಳು ಆತ್ಮಹತ್ಯೆ ಮಾಡಿದುದರ ಕಾರಣ ಹೇಳಿಯೇನೆ."

"ಹಾಗಾದರೆ ಆ ಕಾರಣವೇನು? ಹೇಳಬಹುದೇ ನನಗೆ?"

"ಓಹೋ, ಅವಶ್ಯವಾಗಿ ಹೇಳುವೆನು ಗೋಪಾಲ. ಲೀಲುವಿಗೆ ಹೇಗಿದ್ದ ಗಂಡನು ಸಿಕ್ಕಿದ್ದನೆಂಬುದು ಗೊತ್ತಿದೆಯೇ ನಿನಗೆ."

"ಹೂಂ, ಮಸಕು ಮಸಕಾಗಿ. ಅಂತೂ ಲೀಲುವಿಗೆ ಹೇಳಿದ ಗಂಡನಲ್ಲವೆಂಬುದು ಅಷ್ಟು ಗೊತ್ತಿದೆ."

"ಲೀಲುವಿಗೆ ಹೇಳಿದ ಗಂಡನಲ್ಲವಂತೆ. ಲೀಲುವಿಗೆ ಎಂದೆಂದಿಗೂ ಸರಿ ಬೀಳದ ಗಂಡನೆನ್ನು. ಸರಿಬೀಳುವುದಾದರೂ ಹೇಗೆ? ಸುಂದರಿಯೂ ಗುಣವತಿಯೂ ಆದ ಲೀಲುವಿಗೆ ಬುದ್ಧಿಹೀನನೂ, ಕಾಕರೂಪನೂ ಆದ ಗೋವಿಂದನು ಗಂಟುಬಿದ್ದನೆಂದರೆ ಅವನಲ್ಲಿ ಅವಳ ಮನವೊಪ್ಪೀತೇ? ಓದುಬರಹ ಬಲ್ಲ ಲೀಲುವಿಗೆ ನಿರಕ್ಷರ ಪಂಡಿತನಾದ ಗೋವಿಂದನು ದೊರಿತರೆ ಅವರ ದಾಂಪತ್ಯದಲ್ಲಿ ಸಾಮರಸ್ಯವಿದ್ದೀತೇ?"

"ಅದಕ್ಕೆ ಯಾರೇನುಮಾಡುವುದು? ಅವಳ ಅದೃಷ್ಟ."

"ಅದೃಷ್ಟವಂತೆ, ಅದೃಷ್ಟ. ಅಲ್ಲ ಗೋಪೂ, ಕೇವಲ ಅದೃಷ್ಟವನ್ನು ದೂರಿ ಏನು ಫಲ? ಅದೃಷ್ಟವನ್ನು ನಮಗೆ ತಪ್ಪಿಸಲು ಬರುವುದಿಲ್ಲವೆ? ಆ ಹುಡುಗನ ಬದಲು ಇನ್ನೊಬ್ಬನಿಗೆ ಕೊಡುತ್ತಿದ್ದರೆ ಅದೃಷ್ಟವನ್ನು ದೂರಲಿತ್ತೇ?"

"ಲೀಲುವಿಗೆ ಆ ಹುಡುಗನಲ್ಲಿ ಮನಸ್ಸಿದೆಯೋ ಏನೆಂಬುದನ್ನು ಅವಳು ತಿಳಿಸಬೇಡವಿತ್ತೇ."

"ತಿಳಿಸದೆ ಉಳಿದುದೇನು? ಅವನೊಡನೆ ಮದುವೆಯ ಪ್ರಸ್ತಾವವೆತ್ತಿದೊಡನೆಯೇ ಲೀಲು ಹೇಳಿದಳಂತೆ: ನನಗೆ ಅವನೊಡನೆ ಮದುವೆಯಾಗಲು ಮನಸ್ಸಿಲ್ಲವೆಂದು! ಆಗ ಹೆತ್ತವರೇನೆಂದರು—ಛೀ ನಾಚಿಕೆಗೇಡಿ. ಗಂಡುಬೀರಿ......ಎಂದು ಬೈಯಲಿಲ್ಲವೇ?"

"ಅವರೆಂದುದು ತಪ್ಪೇ. ಒಬ್ಬ ತಂದೆಯು ತನ್ನ ಮಗಳಿಗೆ ಮದುವೆ ಮಾಡಬೇಕಾದರೆ ತನ್ನ ಮಗಳೊಡನೆ ಕೇಳಬೇಕೇ? ಶಾಸ್ತ್ರಗಳೇ ಸಾರುತ್ತಿವೆ, ಬಾಲ್ಯದಲ್ಲಿ ಹುಡುಗಿಯರು ತಂದೆಯ ಅಧೀನವೆಂದು. ಪೂರ್ವಕಾಲದಲ್ಲಿ ಈ ಕ್ರಮವಿತ್ತೇ; ಹುಡುಗಿಯರು ಲಜ್ಜೆಗೇಡಿಗಳಂತೆ ನನಗಾ ಗಂಡ ಬೇಡವೆನ್ನುವುದು? ಕಲಿಯ ಕುಣಿತವಿದು."

“ಖಂಡಿತವಾಗಿಯೂ— ಪೂರ್ವಕಾಲದಲ್ಲಿ ಮಾತ್ರವಲ್ಲ. ಈಗ ಕೂಡಾ ಈ ಕ್ರಮವಿಲ್ಲ ಗೋಪೂ. ಆದರೆ ಎಷ್ಟೋ ದಾಂಪತ್ಯವು ವಿರಸವಾಗಿರುವುದು ಅದೇನು ಗೊತ್ತು ನಿನಗೆ? ಮದುವೆಯಾಗುವುದು ಹುಡುಗಿಗಷ್ಟೆ. ಆದುದರಿಂದ ತನ್ನ ಮದುವೆಯ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಸೂಚಿಸುವ ಹಕ್ಕಿಲ್ಲವೇ? ಬಾಲ್ಯ ಪ್ರಾಯದಲ್ಲಿ ಹುಡುಗಿಯರು ತಾವು ತಂದೆಯ ಆಧೀನವೆಂದು ತಪ್ಪು ತಿಳುವಳಿಕೆಯಿಂದ, ತಂದೆಯು ಗೋವಿಂದನಂಥ ನರಪಶುವನ್ನು ಕುತ್ತಿಗೆಗೆ ಕಟ್ಟಿದರೂ ಪತಿಯನ್ನು ದೈವವೆಂದು ತಿಳಿಯಬೇಕು! ಪಾಲಿಗೆ ಬಂದುದು ಪಂಚಾಮೃತವೆಂದು ಸ್ವೀಕರಿಸಬೇಕು! ತನ್ನ ಅದೃಷ್ಟವೆಂದು ವಿಧಿಯನ್ನು ಹಳಿಯುತ್ತಾ ದಿನಾಲೂ ತನ್ನ ಮನೆಯ ಕಿರುಕುಳವನ್ನು ನಡೆಸುತ್ತಿರಬೇಕು! ಒಬ್ಬ ಹುಡುಗನಿಗಾದರೆ ತನ್ನ ಮದುವೆಯ ವಿಷಯದಲ್ಲಿ ಯಾವ ಅಭಿಪ್ರಾಯವನ್ನೂ ಸೂಚಿಸಬಹುದು; ಹುಡುಗಿಯರು ಸೂಚಿಸಕೂಡದು. ಹುಡುಗರಿಗೆ ಮಾತ್ರ ಸ್ವಾತಂತ್ರ್ಯ. ಅಲ್ಲವೇ ಗೋಪೂ?”

“ಹೂಂ. ಗೋವಿಂದನು ಲೀಲಾಗೆ ಮತ್ತು ಅವಳ ತಂದೆ ವೆಂಕಣ್ಣ ಭಟ್ಟರಿಗೆ ಮೊದಲೇ ಪರಿಚಿತನೋ?”

“ಪರಿಚಿತನು ಮಾತ್ರವಲ್ಲ. ಮೊದಲೇ ದೂರದ ಸಂಬಂಧಿಕನಂತೆ. ಆದುದರಿಂದಲೇ ಅವಳಿಗೆ ಅವನ ಗುಣಗಳು ಮೊದಲೇ ಗೊತ್ತಿದ್ದುದು.”

“ಮದುವೆಯಾದ ಮೇಲೆ ಅವಳ ಜೀವನವು ಹೇಗಿತ್ತಂತೆ ಅಲ್ಲಿ?”

“ಅಲ್ಲಿ ಅವಳ ಜೀವನವೆನ್ನುವುದಕ್ಕಿಂತಲೂ ನರಕಯಾತನೆಯೆಂದು ಹೇಳಬಹುದು. ಕೆಲಸದ ಆಳುಗಳಂತೆ ದುಡಿಯುವುದೊಂದೇ ಗೊತ್ತು. ಪ್ರೇಮದ ಮಾತೊಂದಿಲ್ಲ. ಸದಾ ಅತ್ತೆಮಾವಂದಿರ ಸಹಸ್ರನಾಮಗಳು. ಹೀಗಿದ್ದರೂ ಚಿಂತೆಯಿಲ್ಲ, ಗಂಡನ ಮನಸ್ಸಿನಲ್ಲಿ ಇವಳಿಗೆ ಸ್ಥಿರವಾದ ಸ್ಥಾನವಿರುತ್ತಿದ್ದರೆ. ಗಂಡನ ಒಲುಮೆಯಿಲ್ಲದಿದ್ದರೆ ಹೆಂಡಂದಿರ ಬಾಳುವೆಯು ಬಾಳುವೆಯೋ? ವೆಂಕಣ್ಣಭಟ್ಟರಲ್ಲಿಯ ಸುಖವನ್ನೂ, ಗೋವಿಂದನಲ್ಲಿಯ ಸ್ಥಿತಿಯನ್ನೂ ಸೀಸೇ ಆಲೋಚಿಸಿ ನೋಡು. ಅವಳಿಗೆ ಬೇಸರವಾದರೆ ಒಂದು ಪುಸ್ತಕ ಓದಲು ಕೂಡ ಸಾಧ್ಯವಿಲ್ಲವಂತೆ. ಹೀಗಿದ್ದ ನರಪಶುಗಳ ಮನೆಯಲ್ಲಿ ಗೃಹಿಣಿಯಾಗುವುದೆಂತು.”

"ಇವಳು ಇಂತಹ ಕಷ್ಟಸ್ಥಿತಿಯಲ್ಲಿರುವಾಗ ವೆಂಕಣ್ಣಭಟ್ಟರು ಏನು ಮಾಡಿದರಂತೆ."

"ಆ ಮುದ್ದು ವೆಂಕಣ್ಣಭಟ್ಟರು ಮಾಡುವುದೇನು? ಆದರೂ ದೈವಪ್ರೇರಣೆಯಿಂದಲೋ ಎಂಬಂತೆ ಲೀಲಾಗೋವಿಂದರಲ್ಲಿ ಸರಿಬೀಳದೆ ಅವಳನ್ನು ತವರುಮನೆಗೆ ಕಳುಹಿಸಲಾಯಿತಂತೆ. ಈಗ ಲೀಲುವಿಗೆ ಬಂಧನವನ್ನು ಹರಿದೊಗೆದ ಕರುವಿನಂತಾಯಿತು. ವೆಂಕಣ್ಣಭಟ್ಟರಲ್ಲಿ ಸ್ವಚ್ಛಂದವಾಗಿ ಎಷ್ಟೋ ಸಮಯದ ವರೆಗೆ ಇದ್ದಳು. ಪ್ರಶಾಂತವಾದ ಅವಳ ಮನಸ್ಸಾಗರದಲ್ಲಿ ಒಂದು ಸುಂಟರಗಾಳಿಯೆದ್ದಿತು. ನೆರೆಯಮನೆ ಯಾದುದರಿಂದ ಎಷ್ಟೋ ವೇಳೆಯ ವರೆಗೆ ರಮೇಶನು ಅಲ್ಲಿ ಇರುತ್ತಿದ್ದನು. ಈ ವಿಷಯವು ಸಮಾಜದ ಕಣ್ಣಿಗೆ ಸರಿಕಾಣಲಿಲ್ಲ. ಅಲ್ಲಿಯ ಇಲ್ಲಿಯ ಕಿರುಕುಳವನ್ನು ಎತ್ತಿ ವೃಥಾ ಎರಡನೆಯವರಿಗೆ ಆರೋಪಣೆಯನ್ನು ಹೊರಿಸುವ ಸಮಾಜವು ರಮೇಶ — ಲೀಲೆಯರಲ್ಲಿಯೂ ಅಪವಾದವನ್ನು ತಂದೊಡ್ಡಿತು. ಲೀಲೆಯನ್ನು ಸಹೋದರಿಯಂತೆ ಕಾಣುತ್ತಿದ್ದ ರಮೇಶನಿಗೆ ಈ ಅಪವಾದವನ್ನು ಸಹಿಸಲಾಗಲಿಲ್ಲವಂತೆ. ಒಂದು ದಿನ ರಮೇಶನು ವೆಂಕಣ್ಣಭಟ್ಟರೊಡನೆ "ನಿಮ್ಮ ಮಗಳನ್ನು ಇಲ್ಲಿ ಇಟ್ಟುಕೊಳ್ಳುವುದು ಸರಿಯಲ್ಲ. ಹೇಗಿದ್ದರೂ ಅವಳನ್ನು ಗಂಡನ ಮನೆಗೆ ಕಳುಹಿಸುವುದು ಉತ್ತಮ. ಸಮಾಜಕ್ಕೆ ನಾವು ಬಗ್ಗಬೇಕು" ಎಂದನಂತೆ. ಗೋಪೂ, ರಮೇಶನಿಗೂ ಕೂಡಾ ಅವಳಲ್ಲಿ ಕರುಣೆ ಬರಲಿಲ್ಲ. ಅವನು ಹೀಗೆಂದುದನ್ನು ಕೇಳಿ ಲೀಲುವು ಅವನೊಡನೆ ಹೀಗೆಂದಳಂತೆ: "ರಮೇಶಾ, ಯಾವುದಕ್ಕಾಗಿ ನೀನು ನನ್ನ ತಂದೆಯವರೊಡನೆ ನನ್ನನ್ನು ಅಲ್ಲಿಗೆ ಕಳುಹಿಸುವುದಕ್ಕೆ ಹೇಳಿದೆ? ನನ್ನನ್ನು ನರಕ ಕೂಪಕ್ಕೆ ತಳ್ಳುವ ವಿಷಯದಲ್ಲಿ ನಿನ್ನದು ಒಪ್ಪಿಗೆಯೇ? ಇಂದಿನ ವರೆಗೆ ನೀನು ನಮ್ಮ ಹಿತಚಿಂತಕನಾಗಿದ್ದು ನನ್ನನ್ನು ಆ ಹೆಬ್ಬುಲಿಯ ಬಾಯಿಗೆ ಕಟ್ಟುವಂತೆ ಪ್ರೇರೇಪಿಸಬೇಡ. ನಾನು ಇಲ್ಲಿ ನನ್ನಷ್ಟಕ್ಕೆ ಇರುತ್ತಿದ್ದರೆ ನಿನಗಾದ ತೊಂದರೆಯೇನು? ಒಂದು ವೇಳೆ ನಾನಲ್ಲಿಗೆ ಹೋದರೆ ಬಂದ ಅಪವಾದವೇನು ತಪ್ಪುವುದೇ. ನಿನ್ನೊಬ್ಬಳು ತಂಗಿಗೆ ಈ ರೀತಿ ಯಾಗಿದ್ದರೆ ಏನು ಮಾಡುತ್ತಿದ್ದೆ ನೀನು? ನಿನ್ನ ಮಾತನ್ನೆಂದಿಗೂ ನನ್ನ

ತಂದೆಯವರು ಅಲ್ಲಗಳೆಯರು. ಆದುದರಿಂದ ರಮೇಶಾ, ಇನ್ನಾದರೂ ನನ್ನನ್ನು ಅಲ್ಲಿಗೆ ಕಳುಹಿಸದಂತೆ ಮಾಡು." ಎಂದು ಅಂಗಲಾಚಿ ಬೇಡಿ ದಳಂತೆ. ಅತ್ತಳಂತೆ."

"ಇದಕ್ಕೆ ಏನೆಂದನಂತೆ ರಮೇಶನು?"

"ರಮೇಶನೆನ್ನುವುದು ಮಣ್ಣು. ಆದರೂ ಈಗ ಬಂದಪೀಡೆಯು ತೊಲಗಬೇಕಲ್ಲಾ ಎಂದು ಹೀಗೆಂದನಂತೆ: "ಲೀಲೂ, ನೀನೆಂದುದು ಸರಿ. ಆದರೂ ನೀನು ಹೋಗಬೇಕಾಗುವುದು. ನೀನು ಹೋದರೂ ನಿನಗೆ ಅಲ್ಲಿಯ ತೊಂದರೆಗಳನ್ನು ತಪ್ಪಿಸುವೆನು. ಆಗಾಗ್ಗೆ ನಾನು ಬರುತ್ತಿರು ತ್ತಿರುವೆನು" ಅವನ ಈ ಮಾತುಗಳನ್ನು ನಂಬಿ ಮನಸ್ಸಿನಲ್ಲಿದ್ದ ಯಾವುದೋ ಒಂದು ಕಿರು ಆಶೆಯಿಂದ ಕಟುಕನೊಡನೆ ಹೋಗುವ ಕುರಿಮರಿಯಂತೆ ಗೋವಿಂದನೊಡನೆ ಹೋದಳಂತೆ.

"ರಾಮೂ, ರಮೇಶನು ಹೇಳಿದಂತೆ ಮಾಡಿದನೇ?"

"ನೀನೇನೋ ಹುಚ್ಚನೇ ಗೋಪೂ? ರಮೇಶನು ಹೇಳಿದಂತೆ ಮಾಡುತ್ತಿದ್ದರೆ ಲೀಲುವಿನ ಜೀವನ ಯಾತ್ರೆಯು ಮುಗಿಯುತ್ತಿದ್ದಿತೆ? ಆದರೇನು ಮಾಡಲಿ? ಅವನು ಸಮಾಜಕ್ಕಾಗಿ ಹೆದರಿದನು. ಇದರಿಂದ ಅವನ ಮಾತಿನಂತೆ ವರ್ತಿಸದಾದನು. ಎಷ್ಟೋಬಾರಿ ಕಾಗದದ ಮೂಲಕ ಇವನಿಗೆ ಆ ಗೋಳನ್ನು ತಪ್ಪಿಸುವುದಕ್ಕಾಗಿ ಲೀಲು ಪ್ರಾರ್ಥಿಸಿ ದಳಂತೆ. ಆದರೆ ಇವನ ಕಲ್ಲು ಮನಸ್ಸು ಕರಗದಾಯಿತು. ಕಡೆಗೆ ಒಂದು ದಿನ ಇವನಿಗೆ ಲೀಲುವಿನ ಶರೀರವು ಕೆರೆಯಲ್ಲಿ ಸಿಕ್ಕಿತಂತೆ."

"ಹಾ! ಅವಳು ಹಾಗೆ ಮಾಡಿದುದಾಗಲಿಲ್ಲ.

"ಅವಳು ಸತ್ತುದಲ್ಲ ಗೋಪೂ. ಸಮಾಜ, ರಮೇಶ, ಗೋವಿಂದ, ವೆಂಕಣ್ಣಭಟ್ಟರು ಕೂಡಿ ಕೊಂದುದು. ಅವಳು ಸಾಯದೆ ಏನು ಮಾಡಿ ಯಾಳು? ಸದಾ ಕಣ್ಣೀರಿನಿಂದ ಕೈತೊಳೆಯುತ್ತಾ ಸಂಸಾರ ಮಾಡುವು ದಕ್ಕಿಂತ ಇದು ಒಳ್ಳೆಯದೆಂದು ಅವಳಿಗೆ ಕಂಡಿರಬೇಕು. ಸಮಾಜದ ಕಟು ಟೀಕೆಗಳೆದುರಲ್ಲಿ ಬಡ ಜೀವಿಯೊಂದಕ್ಕೆ ಸ್ಥಳವಿಲ್ಲದಾಯಿತು. ನಮ್ಮಂತೆಯೇ ಅವಳಲ್ಲವೇ? ಅವಳಿಗೂ ಎಲ್ಲರಂತೆ ಈ ಪ್ರಪಂಚದಲ್ಲಿ ತಾನಿರುವವರೆಗೆ ಮನನೆಚ್ಚಿದ ಪತಿಯನ್ನು ಕೂಡಿ ಸುಖದ ಸವಿಯನ್ನು

ಣ್ಣಬೇಕೆಂದು ಇದ್ದಿರಲಾರದೇ? ಆದರೆ ಈ ಗೋವಿಂದನಲ್ಲಿ ಸುಖವೇ? ಪ್ರೇಮವೇ? ಪ್ರೀತಿಯೇ? ಇವುಗಳು ಅವಳಿಗೆ ಕನಸಿನಲ್ಲಿಯೂ ದೊರಕದಾದುವು. ಮತ್ತೇನು ಮಾಡಿಯಾಳು? ಆತ್ಮಹತ್ಯೆಮಾಡಿಕೊಂಡಳು. ಅವಳ ಆತ್ಮಹತ್ಯೆಗೆ ಇಷ್ಟಕ್ಕೂ ಕಾರಣ ಸಮಾಜವೆನ್ನಬಹುದು."

"ಏನೋ ರಾಮೂ, ಅಂತೂ ಅಂಥಾ ಬಡ ಹೆಣ್ಣೊಬ್ಬಳನ್ನು ಅವರೆಲ್ಲರೂ ಕೂಡಿ ಕೊಂದರೆನ್ನಬಹುದು. ಆಗಲಿ, ಈ ವಿಷಯವು ನಮಗೆ ಗೊತ್ತಿದ್ದುದು. ಈ ವಿಶಾಲ ಪ್ರಪಂಚದಲ್ಲಿ ನಮಗೆ ಗೊತ್ತಾಗದೆ ಇಂಥಾ ವಿಷಯಗಳು ಎಷ್ಟು ನಡೆಯುತ್ತಿವೆಯೋ ಏನೋ. ನನಗೀ ವಿಷಯವನ್ನು ಕೇಳಿ ಬಸಿರುಕುಲುಕುಲು ಎನ್ನುತ್ತಿದೆ. ಸ್ವಲ್ಪ ಹೊತ್ತು ಹೊರಗೆ ತಿರುಗಾಡಿ ಬರೋಣವೇ ರಾಮೂ?

"ಹೂಂ. ಆಗಲಿ ಗೋಪೂ" ಎಂದು ಬಾಯಲ್ಲಿ ಸಿಗರೇಟನ್ನು ಕಚ್ಚಿಕೊಳ್ಳುತ್ತಾ ಮೆಟ್ಟಲನ್ನಿಳಿದೆವು.